ಅಧ್ಯಾಯ 3

# ಕ್ರಿಸ್ತನ ಸುವಾರ್ತೆಯ ವಿಷಯದಲ್ಲಿ ಪೌಲನು ಅನುಭವಾತ್ಮಕವಾಗಿ ಹಾಗೂ ಶಾಸ್ತ್ರಗಳ ಪ್ರಕಾರವಾಗಿ ಪ್ರತಿವಾದವನ್ನು ಮಾಡಿದ್ದು

## (ಭಾಗ 1)

ಪೌಲನು 3 ಮತ್ತು 4 ಅಧ್ಯಾಯಗಳಲ್ಲಿ ಮೋಶೆಯ ಧರ್ಮಶಾಸ್ತ್ರಕ್ಕೆ ತೋರಿಸುವ ನಿಷ್ಠೆಗಿಂತಲೂ ಕ್ರಿಸ್ತನಲ್ಲಿಡುವ ನಂಬಿಕೆಯು ಶ್ರೇಷ್ಠವಾಗಿರುತ್ತದೆ ಎಂಬುದನ್ನು ಸಾಭಿತುಗೊಳಿಸುವದಕ್ಕೆ ಏಳು ವಾದಗಳನ್ನು ಬಳಸಿದನು:

ವಾದ ಒಂದು: ಗಲಾತ್ಯದಲ್ಲಿರುವ ಕ್ರೈಸ್ತರು ಯೇಸುವಿನಲ್ಲಿ ನಂಬಿಕೆಯಿಡುವ ಮೂಲಕವೇ ಪವಿತ್ರಾತ್ಮವರವನ್ನು ಸ್ವೀಕರಿಸಿಕೊಂಡರೇ, ಹೊರತು ಧರ್ಮಶಾಸ್ತ್ರಕ್ಕೆ ವಿಧೇಯರಾಗುವ ಮೂಲಕವಲ್ಲ (3:1–5).

ವಾದ ಎರಡು: ಅಬ್ರಹಾಮನು ನಂಬಿಕೆಯಿಂದಲೇ ನೀತಿವಂತನೆಂದು ನಿರ್ಣಯಿಸಲ್ಪಟ್ಟನು, ಹೊರತು ಧರ್ಮಶಾಸ್ತ್ರವನ್ನು ಕೈಗೊಂಡು ನಡೆದದ್ದರಿಂದಲ್ಲ (3:6–9).

ವಾದ ಮೂರು: ಯೆಹೂದ್ಯರು ಧರ್ಮಶಾಸ್ತ್ರಕ್ಕೆ ವಿಧೇಯರಾಗುವ ಮೂಲಕ ಪರಿಪೂರ್ಣಗೊಳಿಸಲ್ಪಡಲಿಲ್ಲವಾದ್ದರಿಂದ, ಅದು ಅವರ ಮೇಲೆ ಶಾಪವನ್ನುಂಟು ಮಾಡಿತ್ತು (3:10–14, 19–22).

ವಾದ ನಾಲ್ಕು: ದೇವರು ಅಬ್ರಹಾಮನಿಗೆ ವಾಗ್ದಾನವನ್ನು ಧರ್ಮಶಾಸ್ತ್ರವು ಕೊಡಲ್ಪಡುವದಕ್ಕೆ ನೂರಾರು ವರ್ಷಗಳ ಮುಂಚೆಯೇ ಮಾಡಿದನು (3:15–18).

ವಾದ ಐದು: ಧರ್ಮಶಾಸ್ತ್ರವು ಕೊಡಲ್ಪಟ್ಟ ಉದ್ದೇಶ ಒಬ್ಬ ಕಾವಲುಗಾರನಂತೆ (ಅಥವಾ ಪೋಷಕನಂತೆ) ಇದ್ದು ಕ್ರಿಸ್ತನ ಬಳಿಗೆ ನಡಿಸುವದಾಗಿತ್ತು, ಮತ್ತು ಆ

ಉದ್ದೇಶವು ನೆರವೇರಿಸಲ್ಪಟ್ಟಿತ್ತು (3:23–4:7).

ವಾದ ಆರು: ಧರ್ಮಶಾಸ್ತ್ರಕ್ಕೆ ಹಿಂದಿರುಗಬಾರದೆಂದು ಪೌಲನು ತನ್ನ ಸಹೋದದರಿಗೆ ಒಂದು ವೈಯಕ್ತಿಕವಾದ ಮನವಿಯನ್ನು ಮಾಡಿದನು. ಕ್ರಿಸ್ತನ ಆಶೀರ್ವಾದಗಳನ್ನು ಪಡೆದುಕೊಂಡ ಬಳಿಕವೂ ಹಾಗೆ ಮಾಡುವದು ಒಬ್ಬನು ಆನಂದ ಹಾಗೂ ನಿರೀಕ್ಷೆಗಳನ್ನು ನಷ್ಟಪಡಿಸಿಕೊಂಡ ಹಾಗಾಗುವದು (4:8–20).

ವಾದ ಏಳು: ಪೌಲನು ಎರಡು ಒಡಂಬಡಿಕೆಗಳನ್ನು ಪ್ರತಿನಿಧಿಸುವವರಾಗಿ, ಹಾಗರಳು ಮತ್ತು ಸಾರಳ ಸಾದೃಶ್ಯವನ್ನು ನೀಡುತ್ತಾನೆ. ಕ್ರಿಸ್ತನಲ್ಲಿ ಸ್ವಾತಂತ್ರ್ಯ (ಸಾರಳಿಂದ ಪ್ರತಿನಿಧಿಸಲ್ಪಟ್ಟದ್ದು) ಧರ್ಮಶಾಸ್ತ್ರದ ದಾಸತ್ವಕ್ಕಿಂತಲೂ (ಹಾಗರಳಿಂದ ಪ್ರತಿನಿಧಿಸಲ್ಪಟ್ಟದ್ದು) ಎಷ್ಟೋ ಉತ್ತಮವಾದದ್ದು (4:21–31). ಕ್ರೈಸ್ತರು ಹಳೆಯ ಒಡಂಬಡಿಕೆಯ ಮಕ್ಕಳಲ್ಲ, ಆದರೆ ಹೊಸ ಒಡಂಬಡಿಕೆಯ ಮಕ್ಕಳು.

1 ಮತ್ತು 2 ಅಧ್ಯಾಯಗಳಲ್ಲಿ, ಪೌಲನು ತನ್ನ ಅಪೊಸ್ತಲತನ ಹಾಗೂ ತಾನು ಸಾರಿದ ಸುವಾರ್ತೆಯ ಪರವಾಗಿ ಸಮರ್ಥನೆ ಮಾಡಿಕೊಳ್ಳಲು ತನ್ನ ವೈಯಕ್ತಿಕ ಅನುಭವವನ್ನು ಬಳಸಿದನು. 3:1–5ರಲ್ಲಿ, ಕ್ರೈಸ್ತರು ಕೃಪೆಯಿಂದ ರಕ್ಷಿಸಲ್ಪಟ್ಟಿದ್ದಾರೆ, ಹೊರತು ನೇಮನಿಷ್ಠೆಗಳಿಂದಲ್ಲ ಎಂಬ ಗಲಾತ್ಯದವರ ಸ್ವಂತ ಅನುಭವದ ಮೂಲಕ ವಾದವನ್ನು ಮಾಡಿದನು. "ಆ ಅನುಭವವು ಧರ್ಮಶಾಸ್ತ್ರದ ವ್ಯಾಪ್ತಿಯಲ್ಲಿರಲಿಲ್ಲ, ಆದರೆ ನಂಬಿಕೆಯ ವ್ಯಾಪ್ತಿಯಲ್ಲಿಯೇ ಇತ್ತು."[1] ಅಪೊಸ್ತಲನು ಈಗಿನ ಮನೋಭಾವವು (ಯೆಹೂದಿಕರಣ ಮಾಡುವವರಿಂದ ಪ್ರಭಾವಿಸಲ್ಪಟ್ಟದ್ದಾಗಿ) ಅವರು ಕ್ರಿಸ್ತನವರಾಗಿ ಪರಿವರ್ತನೆ ಹೊಂದಿದ್ದಕ್ಕೆ ತದ್ವಿರುದ್ಧವಾಗಿತ್ತು. ಅವರು ಸುವಾರ್ತೆಯನ್ನು ಕೇಳಿಸಿಕೊಂಡು ಅದಕ್ಕೆ ಪ್ರತಿಕ್ರಿಯೆ ತೋರಿಸಿದ ಗಳಿಗೆಯನ್ನು ನೆನಪಿಸಿಕೊಳ್ಳುವಂತೆ ಕರೆ ನೀಡುತ್ತಾನೆ. ಅಲ್ಲದೆ ಯೆಹೂದಿಕರಣ ಮಾಡುವವರು ಗಲಾತ್ಯಕ್ಕೆ ಬರುವದಕ್ಕೆ ಮುಂಚೆ ಕ್ರಿಸ್ತನಲ್ಲಿದ್ದ ಅವರ ಜೀವಿತಗಳನ್ನು ಸಹ ನೆನಪಿಸಿಕೊಳ್ಳುವಂತೆ ಹೇಳಿದನು.

## ಪವಿತ್ರಾತ್ಮನು ಸ್ವೀಕರಿಸಿಕೊಳ್ಳಲ್ಪಟ್ಟನು (3:1-5)

**1ಎಲೈ ಬುದ್ಧಿಯಿಲ್ಲದ ಗಲಾತ್ಯದವರೇ, ಯಾರು ನಿಮ್ಮನ್ನು ಮರುಳುಗೊಳಿಸಿದರು? ಯೇಸು
ಕ್ರಿಸ್ತನು ಶಿಲುಬೆಗೆ ಹಾಕಿಸಿಕೊಂಡವನಾಗಿ ನಿಮ್ಮ ಕಣ್ಣೆದುರಿನಲ್ಲಿ ವರ್ಣಿಸಲ್ಪಟ್ಟನಲ್ಲವೇ. 2ಒಂದು
ಸಂಗತಿಯನ್ನು ಮಾತ್ರ ನಿಮ್ಮಿಂದ ತಿಳುಕೊಳ್ಳಬೇಕೆಂದಿದ್ದೇನೆ. ನೀವು ದೇವರಾತ್ಮನನ್ನು
ಹೊಂದಿದ್ದು ನೇಮನಿಷ್ಠೆಗಳನ್ನು ಅನುಸರಿಸಿದ್ದರಿಂದಲೋ? ಕೇಳಿ ನಂಬಿದ್ದರಿಂದಲೋ? 3ಇಷ್ಟು
ಬುದ್ಧಿಯಿಲ್ಲದವರಾಗಿದ್ದೀರಾ? ದೇವರಾತ್ಮಾನುಸಾರವಾಗಿ ಪ್ರಾರಂಭಿಸಿ ಈಗ
ಬಹಿರಾಚಾರಗಳಿಂದ ಸಿದ್ಧಿಗೆ ಬರಬೇಕೆಂದಿದ್ದೀರಾ? 4ನೀವು ಅಷ್ಟು ಬಾಧೆಗಳನ್ನು ಅನುಭವಿಸಿದ್ದು
ವ್ಯರ್ಥವೋ? ವ್ಯರ್ಥವೇ ಎಂದು ಹೇಳಬೇಕೇನು? 5ದೇವರು ತನ್ನ ಆತ್ಮನನ್ನು ನಿಮಗೆ
ಹೇರಳವಾಗಿ ಕೊಟ್ಟು ನಿಮ್ಮಲ್ಲಿ ಮಹತ್ಕಾರ್ಯಗಳನ್ನು ನಡಿಸುತ್ತಾ ಬಂದದ್ದು
ಯಾತರಿಂದಾಯಿತು? ನೀವು ನೇಮನಿಷ್ಠೆಗಳನ್ನನುಸರಿಸಿದ್ದರಿಂದಲೋ? ಕೇಳಿ
ನಂಬಿದ್ದರಿಂದಲೋ? ನಂಬಿದ್ದರಿಂದಲೇ.**

**ವಚನ 1.** ಪೌಲನು ಹೀಗೆ ಉದ್ಗರಿಸುತ್ತಾನೆ, **ಎಲೈ ಬುದ್ಧಿಯಿಲ್ಲದ ಗಲಾತ್ಯದವರೇ**. ಹೊಸ ಒಡಂಬಡಿಕೆಯ ಬಹುಪಾಲು ಆಂಗ್ಲ ತರ್ಜುಮೆಗಳು "ಎಲೈ" ಎಂಬ ಪದವನ್ನು ಕೈ ಬಿಡುತ್ತವೆ, ಅದು ಗ್ರೀಕ್ ವಾಕ್ಯದಲ್ಲಿ ಅಧ್ಯಾಯದ ಆರಂಭಿಕ ಪದವಾಗಿರುತ್ತದೆ. ಆಂಗ್ಲದಲ್ಲಿ "O" ಎಂಬುದು Ὦ ಎಂಬ ಭಾವಸೂಚಕಾವ್ಯವಿದ್ದು ಅದು ಗ್ರೀಕ್ ಅಕ್ಷರಮಾಲೆಯ ಕೊನೆಯ ಪದವಾದ ಒಮೆಗಾ ಆಗಿರುತ್ತದೆ. ಒಂದು ಪದವಾಗಿ, ಗ್ರೀಕ್ ಅಕ್ಷರವು ಆಂಗ್ಲ ಭಾಷೆಯಲ್ಲಿರುವಂತೆಯೇ ಕಾರ್ಯನಿರ್ವಹಿಸುವದಾಗಿದೆ, ಸಾಮಾನ್ಯವಾಗಿ "ಭಾವವನ್ನು ವ್ಯಕ್ತಪಡಿಸುವದು (ಒಂದು ವಾಕ್ಯಖಂಡದ . . . ಆರಂಭದಲ್ಲಿ)" ಮತ್ತು ಉದ್ಗಾರಗಳಲ್ಲಿ ಬಳಸಲ್ಪಡುತ್ತದೆ.[2] ಸಾಮಾನ್ಯವಾಗಿ ಒಪ್ಪಿಕೊಂಡಿರುವ ಪ್ರಕಾರ, ಪೌಲನು ಗಲಾತ್ಯದವರಿಗೆ ಪತ್ರಿಕೆಯನ್ನು ಅತ್ಯಂಥ ಭಾವಾವೇಶದಿಂದ ಬರೆದಿರುತ್ತಾನೆ. NASB, NIV, NRSV, ಮತ್ತು ಇತರ ತರ್ಜುಮೆಗಳು ಕೈಬಿಟ್ಟಿರುವ ಪ್ರಕಾರ, ಈ ಭಾವದಿಂದ ಕೂಡಿದ ಭಾವಸೂಚಕಾವ್ಯವನ್ನು ಕೈಬಿಡುವದಕ್ಕೆ ಕಾರಣವೇ ಇರುವದಿಲ್ಲ.

ಅತ್ಯಂತ ವರ್ಣರಂಜಿತವಾದ, ಮತ್ತು ಯಾವ ಕಾರಣಕ್ಕೂ ನಿಖರವಲ್ಲ ಅನ್ನುವಂತಹದ್ದೆಂದರೆ, ಅದು Goodspeed ಬೈಬಲಿನ ತರ್ಜುಮೆಯಾಗಿದೆ - "ನೀವು ಬುದ್ಧಿಯಿಲ್ಲದ ಗಲಾತ್ಯದವರು!" - ಆದಾಗ್ಯೂ ಇದರಲ್ಲಿ ಸಹ ಮೂಲ ವಾಕ್ಯದಲ್ಲಿರುವಂಥ "ಎಲೈ" ಎಂಬುದು ಇರುವದಿಲ್ಲ. ಬಹುಶಃ ಅತ್ಯಂಥ ಅತಿರೇಕದ ಮಾತುಗಳೆಂದರೆ Phillips ತರ್ಜುಮೆಯದ್ದಾಗಿರಬಹುದು, "ಎಲೈ ಪ್ರಿಯರಾದ ಮೂರ್ಖ ಗಲಾತ್ಯದವರೇ." ಈ ಪದಗಳ ರಚನೆಯು ಅಭಿನಂದನಾಪೂರ್ವಕವಲ್ಲದ್ದಾಗಿದ್ದರೂ, ಇದು ತನಗೆ ಪ್ರಿಯರಾದ ಆದರೆ ಘೋರವಾಗಿ ದಾರಿ ತಪ್ಪಿಸಲ್ಪಟ್ಟಿರುವ ನಂಬಿಕೆಯಲ್ಲಿನ ತನ್ನ ಮಕ್ಕಳ ವಿಷಯದಲ್ಲಿ ಪೌಲನಿಗಿದ್ದ ಅಕ್ಕರೆ ಮತ್ತು ಕಾಳಜಿಯನ್ನು ಸೂಚಿಸುವ ಒಂದು ಟಿಪ್ಪಣಿಯನ್ನು ವ್ಯಕ್ತಪಡಿಸುತ್ತದೆ. ಇದು ಬೇರೆ ಯಾವದೇ ಭಾವಾನುವಾದದ ರೀತಿಯಲ್ಲಿಯೇ ಮೂಲ ಅರ್ಥಕ್ಕೆ ಸಮೀಪವಾಗಿರುತ್ತದೆ.

"ಮೂರ್ಖ" ಎಂಬುದು ಗ್ರೀಕ್ ಭಾಷೆಯ ἀνόητος (*anoētos*) ಎಂಬ ಪದದಿಂದ ಬರುವದಾಗಿದ್ದು, ಅದರ ಅಕ್ಷರಶಃ ಅರ್ಥವು "ಬುದ್ಧಿಯಿಲ್ಲದ" ಎಂದಾಗಿರುತ್ತದೆ.[3] ಗ್ರೀಕ್ ಭಾಷೆಯ νοῦς (*nous*, "ಬುದ್ಧಿ") ಎಂಬ ಪದದಿಂದ ಬಂದದ್ದಾಗಿದ್ದು, ಇದು ನಮ್ಮ "ನೊಯೆಟಿಕ್" ಎಂಬ ಪದಕ್ಕೆ ಸಂಬಂಧಿಸಿರುತ್ತದೆ, ಅದು ವಿವೇಕವನ್ನು ತೋರಿಸುವದಾಗಿದೆ. ಅನೊಯೇಟೆಸ ಎಂಬುದು ಸಹ νοέω (*noeō*, "ಯೋಚಿಸು") ಎಂಬ ಪದಕ್ಕೆ ಸಂಬಂಧ ಪಟ್ಟಿರುತ್ತದೆ, ಅದರರ್ಥವು "ಗ್ರಹಿಸಿಕೋ," "ಅರ್ಥಮಾಡಿಕೋ," ಅಥವಾ "ಅರಿತುಕೋ" ಎಂದಾಗಿರುತ್ತದೆ. ಈ ἀνόητος (*anoētos*) ಎಂಬ ಪದದ ವಿಷಯದಲ್ಲಿ ನೋಡುವದಾದರೆ, ಮೊದಲ ಅಕ್ಷರ α (*a*) ಎಂಬುದು ಗ್ರೀಕ್ ವ್ಯಾಕರಣಕಾರರು ಕರೆಯುವ ಪ್ರಕಾರ "ಅಲ್ಫಾ ಅಭಾವಸೂಚಕ" ಆಗಿರುತ್ತದೆ, ಒಂದು ನಕಾರಾತ್ಮಕ ಕೃದಂತವಾಗಿದ್ದು "ಅಲ್ಲದ," "ಇಲ್ಲ," ಅಥವಾ "ಹೊರತು" ಎಂಬ ಅರ್ಥವನ್ನು ಕೊಡುತ್ತದೆ. ಸರಳವಾಗಿ ಹೇಳುವದಾದರೆ, ಇದು ಯಾವ ಪದದೊಂದಿಗೆ ಜೋಡನೆ ಮಾಡಲ್ಪಟ್ಟಿರುತ್ತದೋ ಆ ಪದದ ಅರ್ಥವನ್ನು ಇಲ್ಲದಂತೆ ಮಾಡುತ್ತದೆ. ಈ ಸಂದರ್ಭದಲ್ಲಿ, ಅದು ಪದದ ಅರ್ಥವನ್ನು "ಬುದ್ಧಿಯಿಲ್ಲದ," "ಯೋಚಿಸದವರು," ಅಥವಾ "ತಿಳುವಳಿಕೆಯಿಲ್ಲದ" ಎಂದಾಗಿಸುತ್ತದೆ.

ಖಂಡಿತವಾಗಿಯೂ, ತಾನು ಸುವಾರ್ತೆಯ ಮೂಲಕವಾಗಿ ಪಡೆದುಕೊಂಡ ಈ ಸಹೋದರರಿಗೆ ಅವಮಾನಗೊಳಿಸುವಂಥ ಮಾತುಗಳನ್ನಾಡುವ ಉದ್ದೇಶವು ಪೌಲನಿಗಿರಲಿಲ್ಲ (ನೋಡಿರಿ 1 ಕೊರಿಂಥ 4:15; ಫಿಲೆಮೋನ 10). ಆತನು 4:19ರಲ್ಲಿ ಹೀಗೆ ಬರೆದನು, "ನನ್ನ ಪ್ರಿಯವಾದ ಮಕ್ಕಳೇ, ಕ್ರಿಸ್ತನ ಸಾರೂಪ್ಯವು ನಿಮ್ಮಲ್ಲಿ ಉಂಟಾಗುವ ತನಕ ನಿಮಗೋಸ್ಕರ

ತಿರಿಗಿ ಪ್ರಸವವೇದನೆ ಪಡುತ್ತೇನೆ." ಈ ವಚನದಲ್ಲಿ, ಗ್ರೀಕ್ ವಾಕ್ಯವು ಅಕ್ಷರಶಃ, "ನನ್ನ ಚಿಕ್ಕ ಮಕ್ಕಳೇ" (τέκνα μου, *tekna mou*) ಎಂದಿರುತ್ತದೆ, ಅದನ್ನು NIVಯು "ನನ್ನ ಪ್ರಿಯರಾದ ಮಕ್ಕಳೇ" ಎಂದು ನಿಖರವಾಗಿ ಅನುವಾದಿಸಿರುತ್ತದೆ. ಆತನ ಭಾಷೆಯು ಒಬ್ಬ ಪ್ರೀತಿಸುವ ತಂದೆಯದ್ದಾಗಿದ್ದು, ಈ ಮಕ್ಕಳಿಗೆ ತಾವು ಯೆಹೂದಿಕರಣಗೊಳಿಸುವ ವ್ಯಕ್ತಿಗಳಿಂದ ಯಾವ ಸುವಾರ್ತೆಯೊಳಗೆ ನಡಿಸಲ್ಪಟ್ಟಿರುತ್ತಾರೋ, ಆ ಸುವಾರ್ತೆಯಲ್ಲಾಗಿರುವ ಮೂಲಭೂತವಾದ ವಿರೂಪಣೆ ಅಥವಾ ವಿಕಾರದ ಕುರಿತು ಏನೂ ಅರಿಯದವರಾಗಿದ್ದಾರಲ್ಲಾ ಎಂದು ಗೊಂದಲಕ್ಕೀಡಾಗಿದ್ದನು.

ಪೌಲನು ಒಬ್ಬ ತಂದೆಯಂತೆ ಮಾತಾಡಿದನು, ತನ್ನ ಮಕ್ಕಳು ಗ್ರಹಿಸಿಕೊಳ್ಳಲಾಗದಂಥ ಒಂದು ವರ್ತನೆಯಲ್ಲಿರುವದನ್ನು ಕಂಡುಕೊಂಡಾಗ, ಅವರೊಂದು ಮೂರ್ಖವಾದ ಬಲೆಯಲ್ಲಿ ಬಿದ್ದು ಹೋಗಿರುತ್ತಾರೆಂಬುದನ್ನು ಅವರಿಗೆ ಹೇಗೆ ವಿವರಿಸುವದು ಎಂದು ಮಾತಿಲ್ಲದವನಂತಾದ ತಂದೆಯಂತಾಗಿದ್ದನು. ಆತನು ಈಗಷ್ಟೇ ಹೀಗೆ ಹೇಳಿದ್ದನು, "ಕರ್ಮಮಾರ್ಗದಿಂದ ನೀತಿಯುಂಟಾಗುವದಾದರೆ ಕ್ರಿಸ್ತನು ಮರಣವನ್ನು ಹೊಂದಿದ್ದಕ್ಕೆ ಕಾರಣವೇ ಇಲ್ಲ" (2:21)!

ತನ್ನ ವಾಚಕರನ್ನು "ಬುದ್ಧಿಯಿಲ್ಲದ ಗಲಾತ್ಯದವರೇ" ಎಂದು ಕರೆದ ಬಳಿಕ, ಪೌಲನು ಹೀಗೆ ಕೇಳುತ್ತಾನೆ, **ಯಾರು ನಿಮ್ಮನ್ನು ಮರುಳುಗೊಳಿಸಿದರು? ಯೇಸು ಕ್ರಿಸ್ತನು ಶಿಲುಬೆಗೆ ಹಾಕಿಸಿಕೊಂಡವನಾಗಿ ನಿಮ್ಮ ಕಣ್ಣೆದುರಿನಲ್ಲಿ ವರ್ಣಿಸಲ್ಪಟ್ಟನಲ್ಲವೇ.** ತಾನು ಶಿಲುಬೆಯ ಮರಣದ ವಿಷಯದಲ್ಲಿ ಮತ್ತು ಅದರ ಸೂಚ್ಯಾರ್ಥಗಳನ್ನೆಲ್ಲಾ ಕಣ್ಣಿಗೆ ಕಟ್ಟಿದಂತೆ ವಿವರಣೆ ನೀಡಿದ್ದರೂ ಅಷ್ಟೊಂದು ಘೋರವಾಗಿ ತಪ್ಪಾಗಿ ಅರ್ಥೈಸಿಕೊಳ್ಳಲ್ಪಟ್ಟಿದ್ದಕ್ಕೆ ಅಥವಾ ಇಷ್ಟು ಬೇಗನೆ ಮರೆತು ಹೋಗಿದ್ದಕ್ಕೆ ಅಚ್ಚರಿಗೊಂಡಿದ್ದನು. ಯೇಸುವಿನ ಶಿಲುಬೆಯ ಮರಣ ಹಾಗೂ ಪುನರುತ್ಥಾನಗಳು ಆತನ ಪ್ರಕಾರ ಕ್ರೈಸ್ತ ಸಂದೇಶದ ಹೃದಯದ ಭಾಗವಾಗಿದ್ದವು (6:14; 1 ಕೊರಿಂಥ 1:22, 23; 2:2; 15:3, 4). ಯಾವನಾದರೂ ಕ್ರಿಸ್ತನಲ್ಲಿರುವ ವಿಮೋಚನೆಯಿಂದಾಗುವ ಅದ್ಭುತವಾದ ಸ್ವಾತಂತ್ರ್ಯವನ್ನು ಅರಿತವನಾಗಿ ಪುನಃ ಧರ್ಮಶಾಸ್ತ್ರದ ದಾಸತ್ವಕ್ಕೊಳಗಾಗಲು ಹಿಂದಿರುಗುವದು ಮೂರ್ಖತನದ ಪರಮಾವಧಿಯಾಗುತ್ತದೆ.

"ಮರುಳುಗೊಳಿಸಿದರು" (βασκαίνω, *baskainō*) ಎಂಬ ಗ್ರೀಕ್ ಪದವು ಹೊಸ ಒಡಂಬಡಿಕೆಯೊಳಗೆ ಇದೊಂದೇ ಸಾರಿ ಬಳಸಲ್ಪಟ್ಟಿರುತ್ತದೆ. ಆ ಪದದ ಮೂಲ ಅರ್ಥವು "ಕಣ್ಣಿನ ಮುಖಾಂತರವಾಗಿ ಒಂದು ಕೆಟ್ಟ ಪ್ರಭಾವವನ್ನು ಬೀರುವದು."[4] ಕಣ್ಣನ್ನು ಹೃದಯಕ್ಕೆ ಕಿಟಕಿಯಾಗಿದ್ದು, ಅದರ ಮೂಲಕ ಒಬ್ಬನು ತನ್ನ ಆಂತರ್ಯದ ಆಲೋಚನೆಗಳನ್ನು ಮತ್ತು ಬಯಕೆಗಳನ್ನು ವ್ಯಕ್ತಪಡಿಸಬಲ್ಲನು ಎಂದು ಪರಿಗಣಿಸಲಾಗಿತ್ತು.[5] Kenneth L. Bolesನು ಹೇಳಿದ್ದೇನೆಂದರೆ, ಪ್ರಾಚೀನ ಮೂಢನಂಬಿಕೆಗಳ ಪ್ರಕಾರ, "ಒಬ್ಬ ವ್ಯಕ್ತಿಯನ್ನು ಆತನಿಗೆ ಮಾಂತ್ರಿಕ ಕಲೆಗಳ ಮೂಲಕ ಮರುಳುಗೊಳಿಸಿ ಅಥವಾ ಮಂತ್ರ ಹಾಕಿ, ಬಳಿಕ ಆತನ ಸ್ವಾಭಾವಿಕ ವರ್ತನೆಗೆ ಸಂಪೂರ್ಣ ಅಪರಿಚಿತವಾದಂಥ ಸಂಗತಿಗಳನ್ನು ಮಾಡುವಂತೆ ಮಾಡಲ್ಪಡುವದಕ್ಕೆ ಒಬ್ಬನನ್ನು ದಿಟ್ಟಿಸುವಂತೆ ವಂಚನೆಗೊಳಗಾಗಬಲ್ಲನು."[6] NLT ಹೇಳುವದೇನೆಂದರೆ, "ನಿಮ್ಮ ಮೇಲೆ ಯಾರು ಕೆಟ್ಟ ಮಂತ್ರವನ್ನು ಹಾಕಿ ವಶಪಡಿಸಿಕೊಂಡಿರುತ್ತಾನೆ?" (ನೋಡಿರಿ CEV; NIRV). ಈ ಭಾಷೆಯ ಅರ್ಥವು ಪೌಲನಿಗೆ ಅನ್ಯಧರ್ಮಿಯ ಮೂಢನಂಬಿಕೆಗಳಲ್ಲಿ ವಿಶ್ವಾಸವಿತ್ತೆಂಬುದಾಗಿರುವದಿಲ್ಲ. ಬದಲಾಗಿ, ಆತನು ತನ್ನ ವಾಚಕರಿಗೆ ನಾಚಿಕೆಯುಂಟಾಗುವಂತೆ ಮಾಡುವದಕ್ಕಾಗಿ ರೂಪಕವಾದ ಭಾಷೆಯನ್ನು ಬಳಸುತ್ತಿದ್ದಾನೆ. ಆತನ ಭಾಷೆಯು ಗ್ರೀಕ್-ರೋಮನ್ ಜಗತ್ತಿನ ವಾಗ್ಮಿತಾಕಲೆಯ ಭಾಗವಾಗಿತ್ತು.[7]

"ಕಣ್ಣೆದುರಿನಲ್ಲಿ ವರ್ಣಿಸಲ್ಪಟ್ಟನಲ್ಲವೇ" (προγράφω, *prographō*) ಎಂಬುದು ಅಪೊಸ್ತಲನಾದ ಪೌಲನ ವಿಶದವಾದ ಬೋಧನೆಯನ್ನು ಸೂಚಿಸುತ್ತದೆ, ಆತನು ಮೂಲತಃ ಗಲಾತ್ಯದವರಿಗೆ ಕ್ರಿಸ್ತನ ಮರಣ, ಹೂಣಲ್ಪಡುವಿಕೆ, ಹಾಗೂ ಪುನರುತ್ಥಾನಗಳನ್ನು ಸಾರಿದ್ದನು. ಗ್ರೀಕ್ ಪದವು ಒಂದು ಫಲಕ ಅಥವಾ ಭಿತ್ತಿಪತ್ರದಲ್ಲಿರುವ ಸಾರ್ವಜನಿಕ ಪ್ರಕಟಣ ಎಂಬುದಾಗಿ ಸೂಚಿಸುತ್ತದೆ.

**ವಚನ 2.** ಪೌಲನು ಹೀಗೆ ಪ್ರಶ್ನಿಸುತ್ತಾನೆ, **ಒಂದು ಸಂಗತಿಯನ್ನು ಮಾತ್ರ ನಿಮ್ಮಿಂದ ತಿಳುಕೊಳ್ಳಬೇಕೆಂದಿದ್ದೇನೆ. ನೀವು ದೇವರಾತ್ಮನನ್ನು ಹೊಂದಿದ್ದು ನೇಮನಿಷ್ಠೆಗಳನ್ನು ಅನುಸರಿಸಿದ್ದರಿಂದಲೋ? ಕೇಳಿ ನಂಬಿದ್ದರಿಂದಲೋ?** ಪೌಲನು ಇಲ್ಲಿ ದೀಕ್ಷಾಸ್ನಾನದ ವೇಳೆಯಲ್ಲಿ ಪ್ರತಿಯೊಬ್ಬ ವಿಶ್ವಾಸಿಗೂ ಸಿಕ್ಕುವಂತಹ ಪವಿತ್ರಾತ್ಮನ ವಾಸಿಸುವಿಕೆಯ ಆರಂಭದ ಕುರಿತು ಮಾತಾಡುತ್ತಿದ್ದಾನೆಂದು ಒಬ್ಬನು ಆರಂಭದಲ್ಲಿ ಯೋಚಿಸಬಹುದು (ಅಪೊಸ್ತಲರ ಕೃತ್ಯಗಳು 2:38; ನೋಡಿರಿ ರೋಮಾ 8:15-17). ಹೇಗೂ, ಗಲಾತ್ಯ 3:2 ಹಾಗೂ 3:5ರ ನಡುವಿನ ನಿಕಟತೆಯನ್ನು ನೋಡುವಾಗ, ಪೌಲನು ಪ್ರಾಥಮಿಕವಾಗಿ ಒಂದು ಸದೃಶ್ಯವಾದ ಸಂಗತಿಯೊಂದರ ಬಗ್ಗೆ - ಪವಿತ್ರಾತ್ಮನಿಂದಾಗುವ ಅದ್ಭುತಕರವಾದ ವರ (1 ಕೊರಿಂಥ 12:4-11, 27-31) - ಅದು ಆತನು ಮಾಡುತ್ತಿರುವ ವಾದಕ್ಕೆ ಋಜುವಾತುಗೊಳಿಸುವದಾಗಿತ್ತು.[8] ಪೇತ್ರನು ಪಂಚಾಶತ್ತಮ ದಿನದಂದು ದೇವರು ಹೇಗೆ ಅಪೊಸ್ತಲರಿಗೆ ಅದ್ಭುತಕರವಾದ ಶಕ್ತಿಗಳನ್ನು ಕೊಟ್ಟಿದ್ದನೋ ಹಾಗೆಯೇ ಅನ್ಯಜನರಿಗೂ ಕೊಟ್ಟಿದ್ದಾನೆಂಬ ಆಧಾರದಲ್ಲಿ ಅವರ ಅಂಗೀಕಾರಕ್ಕೆ ಬೆಂಬಲವನ್ನು ಕೊಟ್ಟಿದ್ದನು (ಅಪೊಸ್ತಲರ ಕೃತ್ಯಗಳು 11:16, 17). ಅಷ್ಟುಮಾತ್ರಲ್ಲದೆ, ಎಫೆಸದಲ್ಲಿದ್ದ ಹನ್ನೆರಡು ಮಂದಿ ಶಿಷ್ಯರು ಪುನಃ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಅವರಿಗೆ ಅನ್ಯ ಭಾಷೆಗಳನ್ನಾಡುವ ಸಾಮರ್ಥ್ಯವು ಕೊಡಲ್ಪಟ್ಟಿದ್ದು ಅವರು ದೇವರಾತ್ಮನನ್ನು ಹೊಂದಿಕೊಂಡಿದ್ದರೆಂಬ ವಾಸ್ತವಾಂಶಕ್ಕೆ ಸಾಕ್ಷಿಯಾಗಿತ್ತು (ಅಪೊಸ್ತಲರ ಕೃತ್ಯಗಳು 19:1-7).

ಗಲಾತ್ಯದ ಕ್ರೈಸ್ತರು ಸುವಾರ್ತೆಯನ್ನು ಕೇಳಿ, ಅದನ್ನು ನಂಬಿದಾಗ ಮತ್ತು ಅದಕ್ಕೆ ವಿಧೇಯರಾಗಿ ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ ತಮ್ಮೊಳಗೆ ವಾಸಿಸುವ ಪವಿತ್ರಾತ್ಮನ ವರವನ್ನು ಪಡೆದುಕೊಂಡಿದ್ದರು (3:26, 27). ಅವರು ಸಂದೇಶವನ್ನು ಕೇಳಿಸಿಕೊಂಡಿದ್ದರು ಮತ್ತು ಅದನ್ನು ವಿಧೇಯತೆಯುಳ್ಳ ನಂಬಿಕೆಯಿಂದ ಆಲಂಗಿಸಿಕೊಂಡಿದ್ದರು (ನೋಡಿರಿ ರೋಮಾ 10:17). ಅನಂತರದಲ್ಲಿಯೇ ಯೆಹೂದಿಕರಣಗೊಳಿಸುವವರು ಬಂದಿದ್ದರು, ಅವರನ್ನು ಧರ್ಮಶಾಸ್ತ್ರಾಧೀನಪಡಿಸುವದಕ್ಕೆ ಪ್ರಯತ್ನಿಸಿದ್ದರು. ಹೇಗೂ, ಅವರು ಈ ಪವಿತ್ರಾತ್ಮನನ್ನು ಧರ್ಮಶಾಸ್ತ್ರದ ಕ್ರಿಯೆಗಳಿಂದಾಗಿ ಪಡೆದುಕೊಂಡಿರಲಿಲ್ಲ ಎಂಬುದನ್ನು ಅವರು ಗ್ರಹಿಸಿಕೊಳ್ಳಬೇಕೆಂಬುದು ಪೌಲನ ಬಯಕೆಯಾಗಿತ್ತು.[9]

**ವಚನ 3.** 1ನೇ ವಚನದಲ್ಲಿನ ಭಾವನಾತ್ಮಕತೆಯನ್ನೇ ಪುನರಾವರ್ತಿಸುವವನಾಗಿ, ಪೌಲನು ತನ್ನ ವಾಚಕರಿಗೆ ಹೀಗೆ ಕೇಳಿದನು, **ಇಷ್ಟು ಬುದ್ಧಿಯಿಲ್ಲದವರಾಗಿದ್ದೀರಾ?** ಅಂಥ ಪ್ರಶ್ನೆಯು ಇಂದಿನ ಜನರಿಗೆ ನೋವುಂಟು ಮಾಡಬಹುದಾದರೂ, ತನ್ನ ವಾಚಕರು ಎಂಥ ದುರಂತಕರವಾದ ದಾರಿಯನ್ನು ಹಿಡಿದಿದ್ದಾರೆಂಬುದನ್ನು ತಿಳಿದುಕೊಳ್ಳುವಂತೆ ಆಗಬೇಕೆಂಬುದು ಪೌಲನ ಬಯಕೆಯಾಗಿತ್ತು. ಸುವಾರ್ತೆಯಲ್ಲಿ ಅವರ ತಂದೆಯಾಗಿ, ಆತನಿಗೆ ತನ್ನ ಆತ್ಮೀಕ ಮಕ್ಕಳ ಹಿತಾಸಕ್ತಿಯನ್ನು ಹುಡುಕುತ್ತಿದ್ದನು. ಒಳ್ಳೇ ತಂದೆತಾಯಿಗಳು ಕೆಲವು ಸಾರಿ ತಮ್ಮ ಮಕ್ಕಳು ದೀರ್ಘಕಾಲಿಕವಾದ ಪರಿಣಾಮಗಳನ್ನು ಬೀರುವಂಥ ತಪ್ಪುಗಳನ್ನು ಮಾಡದಂತೆ ತಡೆಯುವದಕ್ಕಾಗಿ ಅವರೊಂದಿಗೆ ಕಠೋರವೆಂದು ತೋರುವಂತಹ ಮಾತುಗಳನ್ನಾಡುವರು.

ಪೌಲನು ಹೀಗೆ ಕೇಳಿದನು, **ದೇವರಾತ್ಮಾನುಸಾರವಾಗಿ ಪ್ರಾರಂಭಿಸಿ ಈಗ ಬಹಿರಾಚಾರಗಳಿಂದ ಸಿದ್ಧಿಗೆ ಬರಬೇಕೆಂದಿದ್ದೀರಾ?** "ದೇವರಾತ್ಮಾನುಸಾರವಾಗಿ ಪ್ರಾರಂಭಿಸಿ" ಎಂಬುದು ಕ್ರೈಸ್ತ ಜೀವಿತದ ಪ್ರಾರಂಭವನ್ನು ಸೂಚಿಸುತ್ತದೆ, ಅದು ದೀಕ್ಷಾಸ್ನಾನ ಮಾಡಿಕೊಂಡ ಕ್ಷಣದಲ್ಲಿ ಆರಂಭಗೊಳ್ಳುವದಾಗಿದೆ. ದೇವರ ಕೃಪೆಯಿಂದ, ಗಲಾತ್ಯದವರು ಕ್ರಿಸ್ತನಲ್ಲಿ ಹೊಸ ಜೀವಿತವನ್ನು ಆರಂಭಿಸಿದ್ದರು (ರೋಮಾ 6:4). ಅವರಲ್ಲಿ ಪವಿತ್ರಾತ್ಮನು ವಾಸ ಮಾಡುವ ಮೂಲಕ ಮುದ್ರೆ ಹಾಕಲ್ಪಟ್ಟಿದ್ದರು (ಎಫೆಸ 1:13) ಮತ್ತು ಸಭೆಯ ಭಕ್ತಿವೃದ್ಧಿಗೋಸ್ಕರ ಪವಿತ್ರಾತ್ಮನ ವರಗಳೊಂದಿಗೆ ಬಲಪಡಿಸಲ್ಪಟ್ಟಿದ್ದರು. ದೇವರ ಅವರೊಳಗೆ ಮತ್ತು ಅವರ ಮೂಲಕವಾಗಿ ಕಾರ್ಯ ಮಾಡುತ್ತಿದ್ದನು.

ಗಲಾತ್ಯದವರು ಪವಿತ್ರಾತ್ಮನನ್ನು ಪಡೆದುಕೊಂಡಿದ್ದರಾದ್ದರಿಂದ, ತಾವು "ಬಹಿರಾಚಾರಗಳಿಂದ ಸಿದ್ಧಿಗೆ ಬರಬೇಕೆಂದು" ಯೋಚಿಸುವದು ಅವರ ಮೂರ್ಖತನವಾಗಿತ್ತು. ಸುಸ್ಪಷ್ಟವಾದ ವ್ಯತಿರಕ್ತತೆಯು ದೈವಿಕ ("ಪವಿತ್ರಾತ್ಮ") ಮತ್ತು ಮಾನವ ("ಬಹಿರಾಚಾರ") ನಡುವೆ ಆಗಿತ್ತು. "ಬಹಿರಾಚಾರ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು (σάρξ, *sarx*) ಹಲವಾರು ಅರ್ಥದ ಛಾಯೆಗಳನ್ನು ಹೊಂದಿದ್ದು ಅದು ಶಾರೀರಿಕ ದೇಹಕ್ಕೆ ಸಂಬಂಧಿಸಿದ್ದಾಗಿದೆ.[10] ಈ ಸನ್ನಿವೇಶದಲ್ಲಿ, NLTಯು ಈ ಪದವನ್ನು "ಮಾನವ ಪ್ರಯತ್ನಗಳು" ಎಂದು ಅನುವಾದಿಸುತ್ತದೆ. ಈ ಪದವು ಧರ್ಮಶಾಸ್ತ್ರಕ್ಕೆ ವಿಧೇಯರಾಗುವದಕ್ಕೆ ಸಂಬಂಧಿಸಿದ್ದಾಗಿದೆ (ನೋಡಿರಿ 3:5).

"ಸಿದ್ಧಿಗೆ ಬರಬೇಕೆಂದು" ಎಂಬ ಪದವು ἐπιτελέω (*epiteleō*) ಎಂಬ ಕ್ರಿಯಾಪದಕ್ಕೆ ಸಂಬಂಧಿಸಿದ್ದಾಗಿದೆ, ಅದರರ್ಥವು "ಸಂಪೂರ್ಣಗೊಳ್ಳು," "ಪೂರ್ತಿಗೊಳಿಸು," ಅಥವಾ "ಪರಿಪಕ್ವಗೊಳ್ಳು" ಎಂದಾಗಿರುತ್ತದೆ. ಯೆಹೂದಿಕರಣಗೊಳಿಸುವ ವ್ಯಕ್ತಿಗಳು ಒಬ್ಬ ಪರಿಪಕ್ವವುಳ್ಳ ಕ್ರೈಸ್ತನಾಗಬೇಕಾದರೆ ಧರ್ಮಶಾಸ್ತ್ರಕ್ಕೆ ನಿಷ್ಠೆಯುಳ್ಳವರಾಗಿರುವದು ಅವಶ್ಯಕವೆಂಬುದಾಗಿ ತಿಳಿಸುತ್ತಿದ್ದರು. 3:23-29ರಲ್ಲಿ, ಧರ್ಮಶಾಸ್ತ್ರವು ಯೆಹೂದ್ಯರನ್ನು ಕ್ರಿಸ್ತನ ಬಳಿಗೆ ನಡಿಸಿತೇ, ಹೊರತು ಕ್ರಿಸ್ತನು ಅವರನ್ನು ಧರ್ಮಶಾಸ್ತ್ರಕ್ಕೆ ನಡಿಸಲಿಲ್ಲ ಎಂಬುದನ್ನು ಪೌಲನು ತೋರಿಸಿ ಕೊಡುತ್ತಾನೆ. ಯೇಸು ಕ್ರಿಸ್ತನು ಬಂದು ಶಿಲುಬೆಯ ಮೇಲೆ ಆತನು ಮರಣವನ್ನು ಅನುಭವಿಸುವ ತನಕವೂ ಇರುವದಕ್ಕೋಸ್ಕರವಾಗಿ ಧರ್ಮಶಾಸ್ತ್ರವು ಇಸ್ರಾಯೇಲ್ಯರಿಗಾಗಿ ಕೊಡಲ್ಪಟ್ಟಿತ್ತು (ವಿಮೋಚನಕಾಂಡ 19:3-6). ಅದು ಯೆಹೂದ್ಯರಿಗೆ ಕೊಡಲ್ಪಟ್ಟಿತ್ತೇ, ಹೊರತು ಅನ್ಯಜನರಿಗೆ ಅಲ್ಲ. ಧರ್ಮಶಾಸ್ತ್ರವನ್ನು ಅನುಸರಿಸಿದ ಅನ್ಯಜನಾಂಗದ ಕ್ರೈಸ್ತರು ಇನ್ನಷ್ಟು ಹಿಂದಕ್ಕೆ ಸಾಗುವವರಾಗಿದ್ದರು ಹೊರತು, ಪ್ರಗತಿ ಹೊಂದುವವರಾಗಿರಲಿಲ್ಲ.

**ವಚನ 4.** ಗಲಾತ್ಯದವರು ಶುದ್ಧ ಸುವಾರ್ತೆಯಿಂದ ವಿಮುಖರಾಗಿ ಏಕೆ ಅಷ್ಟೊಂದು **ಅಷ್ಟು ಬಾಧೆಗಳನ್ನು ಅನುಭವಿಸಿದ್ದು ವ್ಯರ್ಥ**ವಾಗಿ ಮಾಡಿಕೊಳ್ಳುತ್ತಿದ್ದಾರೆಂಬುದು ಪೌಲನಿಗೆ ಪೂರ್ತಿ ಅರ್ಥಮಾಡಿಕೊಳ್ಳಲಾಗಲಿಲ್ಲ (ನೋಡಿರಿ 1:6-9). ಈ ಕ್ರೈಸ್ತರು ಇದುವರೆಗೂ ಅನುಭವಿಸಿದ್ದ ಸಂಕಷ್ಟಗಳ ಪಟ್ಟಿಯನ್ನು ಈ ವಾಕ್ಯಭಾಗವು ತಿಳಿಸುವದಿಲ್ಲ. ಹಾಗಿದ್ದರೂ, ಪೌಲ ಮತ್ತು ಬಾರ್ನಬರು ಮೊದಲನೆಯ ಸುವಾರ್ತಾ ಪ್ರಯಾಣದಲ್ಲಿ ಬಾಧೆಗಳನ್ನು ಅನುಭವಿಸಿದ್ದರು (ಅಪೊಸ್ತಲರ ಕೃತ್ಯಗಳು 13; 14). ಅವರು ಸುಳ್ಳು ಪ್ರವಾದಿಗಳಿಂದ ಮತ್ತು ಅವಿಶ್ವಾಸಿಗಳಿಂಧ ಮೌಖಿಕವಾದ ವಿರೋಧವನ್ನು ಅನುಭವಿಸಿದನು. ಅವರನ್ನು ಪಟ್ಟಣಗಳಿಂದ ಓಡಿಸಲಾಗಿತ್ತು, ಮತ್ತು ಪೌಲನಿಗೆ ಕಲ್ಲುಗಳಿಂದ ಸಹ ಹೊಡೆಯಲಾಗಿತ್ತು. ಈ ಮಿಶನರಿಗಳ ವಿಷಯದಲ್ಲಿ ಅಷ್ಟೊಂದು ಹಗೆತನದಿಂದ ನಡೆದುಕೊಳ್ಳಲಾಗಿತ್ತಾದ್ದರಿಂದ, ಅವರು ಹಿಂದೆ ಬಿಟ್ಟು ಹೊಸದಾದ ಸಭೆಗಳು ಸಹ ಅದೇ ರೀತಿಯಲ್ಲಿಯೇ ನಡಿಸಿಕೊಳ್ಳಲ್ಪಡುವ ಸಾಧ್ಯತೆಇತ್ತು (ಅಪೊಸ್ತಲರ

ಕೃತ್ಯಗಳು 14:2). ನಂಬಿಕೆಯಿಲ್ಲದ ಯೆಹೂದ್ಯರು ಕ್ರಿಸ್ತನಲ್ಲಿ ವಿಶ್ವಾಸವಿಟ್ಟಿದ್ದ ಯೆಹೂದ್ಯರನ್ನು ಮಾತ್ರವಲ್ಲದೆ ಯೆಹೂದ್ಯರಾಗದೆಯೇ (ಸುನ್ನತಿ ಮಾಡಿಸಿಕೊಳ್ಳದೆ) ದೇವರ ಕಡೆಗೆ ತಿರುಗಿಕೊಂಡಿದ್ದ ಅನ್ಯಜನರನ್ನು ವಿರೋಧಿಸಿರಬಹುದಾಗಿದೆ.

**ವ್ಯರ್ಥವೇ ಎಂದು ಹೇಳಬೇಕೇನು?** ಎಂಬ ಸ್ಪಷ್ಟೀಕರಣವು ಕ್ರಿಸ್ತನ ಸತ್ಯ ಸುವಾರ್ತೆಯ ಕಡೆಗೆ ಗಲಾತ್ಯದವರು ಹಿಂದಿರುಗುವರೆಂದು ಪೌಲನು ನಿರೀಕ್ಷಿಸಿದನೆಂಬುದನ್ನು ಬಯಲುಗೊಳಿಸುತ್ತದೆ. ಅವರು ನಂಬಿಕೆಯ ತತ್ವಕ್ಕೆ ಹಿಂದಿರುಗುವದಾದಲ್ಲಿ ಅವರ ಬಾಧೆಗಳನ್ನು ಅನುಭವಿಸಿದ್ದು ವ್ಯರ್ಥವಾಗುವ ಅಗತ್ಯವಿರಲಿಲ್ಲ.[11]

**ವಚನ 5.** 3:3ರಲ್ಲಿನ ಸಂದೇಶವನ್ನು ಪುನಃ ಒತ್ತಿ ಹೇಳುವವನಾಗಿ, ಪೌಲನು ಹೀಗೆ ಕೇಳುತ್ತಾನೆ, **ದೇವರು ತನ್ನ ಆತ್ಮನನ್ನು ನಿಮಗೆ ಹೇರಳವಾಗಿ ಕೊಟ್ಟು ನಿಮ್ಮಲ್ಲಿ ಮಹತ್ಕಾರ್ಯಗಳನ್ನು ನಡಿಸುತ್ತಾ ಬಂದದ್ದು ಯಾತರಿಂದಾಯಿತು? ನೀವು ನೇಮನಿಷ್ಠೆಗಳನ್ನನುಸರಿಸಿದ್ದರಿಂದಲೋ? ಕೇಳಿ ನಂಬಿದ್ದರಿಂದಲೋ?** ಗಲಾತ್ಯದಲ್ಲಿರುವ ಕ್ರೈಸ್ತರಿಗೆ ದೇವರು ಪವಿತ್ರಾತ್ಮನ್ನು ಒದಗಿಸಿದ್ದನು ಮತ್ತು ಅವರು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟ ಕಾರಣ ಅವರ ಮೂಲಕವಾಗಿ ಅದ್ಭುತಗಳನ್ನು ನಡಿಸಿದ್ದನು ಎಂಬುದಾಗಿ ಆತನು ಹೇಳುತ್ತಿದ್ದಾನೆ.

ಇಲ್ಲಿ ಎರಡು ಗ್ರೀಕ್ ಪದಗಳು ದೇವರ ಚಟುವಟಿಕೆಯನ್ನು ಕುರಿತು ಒತ್ತಿ ಹೇಳುತ್ತವೆ. ಮೊದಲನೆಯದ್ದು ἐπιχορηγέω (*epichorēgeō*), ಅದನ್ನು "ಒದಗಿಸು" ಅಥವಾ "ಪೂರೈಸು" ಎಂದು ಅನುವಾದಿಸಬಹುದು. ಈ ಪದ ಹಾಗೂ ಅದಕ್ಕೆ ಸಂಬಂಧಿಸಿದ ಪದಗಳು ಹೊಸ ಒಡಂಬಡಿಕೆಯಲ್ಲಿ ಹಲವಾರು ಸಾರಿ ಕಾಣಿಸಿಕೊಳ್ಳುತ್ತವೆ,[12] ಮತ್ತು ಕಾಣಿಸಿಕೊಳ್ಳುವ ಬಹಳಷ್ಟು ಕಡೆಗಳಲ್ಲಿ ದೇವರ ಉಪಕಾರವನ್ನು ಒತ್ತಿ ಹೇಳುತ್ತದೆ. ಮೂಲ ಕ್ರಿಯಾಪದವಾದ χορηγέω (*chorēgeō*) ಎಂಬುದು ಶಾಸ್ತ್ರೀಯ ಗ್ರೀಕ್ ಭಾಷೆಯಲ್ಲಿ ಒಬ್ಬ ಶ್ರೀಮಂತ ವ್ಯಕ್ತಿಯು "ಮೇಳವನ್ನು ತರಬೇತಿಗೊಳಿಸುವದಕ್ಕಾಗಿನ ವೆಚ್ಚವನ್ನು ಭರಿಸುವದನ್ನು" ಸೂಚಿಸುವದಕ್ಕೆ ಬಳಸಲಾಗುತ್ತಿತ್ತು.[13] ಇಲ್ಲಿ ಬಳಸಲ್ಪಟ್ಟಿರುವ ಪದವು ದೇವರನ್ನು ತನ್ನ ಪವಿತ್ರಾತ್ಮನನ್ನು ಚೆತವಾಗಿ ಅನುಗ್ರಹಿಸುವ ಒಬ್ಬ ಉದಾರ ದಾನಿಯನ್ನಾಗಿ ಚಿತ್ರಿಸುತ್ತದೆ.

ಎರಡನೆಯ ಗ್ರೀಕ್ ಪದವಾದ ἐνεργέω (*energeō*), ಇದು "ಕೆಲಸ" ಅಥವಾ "ಕ್ರಿಯಾತ್ಮಕವಾಗಿರು" ಎಂಬ ಅರ್ಥವನ್ನು ಕೊಡುತ್ತದೆ. ಅದಕ್ಕೆ ಸಂಬಂಧಿತ ನಾಮಪದವಾದ ἐνέργεια (*energeia*) ಎಂಬುದು ಆಂಗ್ಲದ "ಎನರ್ಜೀ" ಎಂಬ ಪದದ ಹಿಂದೆ ನಿಲ್ಲುವದಾಗಿದೆ. ಆದಿ ಕ್ರೈಸ್ತರು ನಡಿಸಿದ ಅದ್ಭುತಗಳು ದೇವರ ಅಧಿಕಾರ ಹಾಗೂ ಶಕ್ತಿಯ ಫಲಿತವಾಗಿದ್ದವು.

ಪೌಲನು ಗಲಾತ್ಯದವರಲ್ಲಿ ಇದ್ದ ಆತ್ಮೀಕ ಅಪ್ರಬುದ್ಧತೆಯ ಕಾರಣದಿಂದಾಗಿ ಅದ್ಭುತಗಳ (ಅವುಗಳು ಸಂದೇಹಾಸ್ಪದವಾಗಿರಲಿಲ್ಲ) ಕುರಿತು ಉಲ್ಲೇಖಿಸಿರುವ ಸಾಧ್ಯತೆಯಿರುತ್ತದೆ. ಅವರೊಳಗೆ "ಆತ್ಮನ ಫಲಗಳು" ಕಾಣಿಸಿರಬೇಕಾಗಿತ್ತಾದರೂ, "ಶರೀರಭಾವದ ಕರ್ಮ"ಗಳಿಗೆ (5:16-26; ನೋಡಿರಿ ಮತ್ತಾಯ 7:15-23) ಕಣ್ಣಿಗೆ ಎದ್ದುಕಾಣುವಷ್ಟರ ಮಟ್ಟಿಗೆ ವ್ಯತಿರಿಕ್ತವಾಗಿದ್ದು, ಇಲ್ಲಿ ಉಲ್ಲೇಖಿಸಲಾಗಿರುವ ಮಹತ್ಕಾರ್ಯಗಳು ಪ್ರಾಕೃತ ಮನಸ್ಸಿನ ಗಲಾತ್ಯದವರಿಗೆ ಹೆಚ್ಚು ಸ್ಪಷ್ಟವಾಗಿ ಗೊತ್ತಾಗಿರಬಹುದಿತ್ತು.

ಹಲವಾರು ವಾಕ್ಯಭಾಗಗಳು, ವಿಶೇಷವಾಗಿ ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿನ ವಾಕ್ಯಭಾಗಗಳು, 3:5ರಲ್ಲಿ ಪವಿತ್ರಾತ್ಮನ ಶಕ್ತಿಯ ಬಾಹ್ಯ ತೋರ್ಪಡುವಿಕೆಯನ್ನು ಒತ್ತಿ ಹೇಳುವವನಾಗಿ ಪೌಲನು ಬಳಸಿದ ಭಾಷೆಯನ್ನು ಪ್ರತಿಫಲಿಸುತ್ತವೆ:

ಅದ್ಭುತಕರವಾದ ಸೂಚನೆಗಳು: ಯೇಸುವು ಹೀಗೆ ಹೇಳಿದನು, "ಇದಲ್ಲದೆ ನಂಬುವವರಿಂದ

ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸ[14] ಭಾಷೆಗಳಿಂದ ಮಾತಾಡುವರು; . . . ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು." . . . ಇತ್ತಲಾಗಿ ಅವರು ಹೊರಟುಹೋಗಿ ಎಲ್ಲೆಲ್ಲಿಯೂ ಸುವಾರ್ತೆಯನ್ನು ಸಾರಿದರು; ಮತ್ತು ಕರ್ತನು ಅವರ ಕೂಡ ಕೆಲಸ ಮಾಡುತ್ತಾ ಸೂಚಕಕಾರ್ಯಗಳಿಂದ ಸುವಾರ್ತೆಯ ವಾಕ್ಯವನ್ನು ಬಲಪಡಿಸುತ್ತಾ ಇದ್ದನು (ಮಾರ್ಕ 16:17-20).

ಪವಿತ್ರಾತ್ಮನ ದೀಕ್ಷಾಸ್ನಾನ: ಯೇಸುವು ತನ್ನ ಶಿಷ್ಯರಿಗೆ ಪವಿತ್ರಾತ್ಮನ ದೀಕ್ಷಾಸ್ನಾನದ ವಾಗ್ದಾನ ಮಾಡಿದನು: "ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂಥ ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದುಕೊಂಡಿರ್ರಿ ಎಂದು ಅಪ್ಪಣೆಕೊಟ್ಟನು" (ಅಪೊಸ್ತಲರ ಕೃತ್ಯಗಳು 1:5).

ಪಂಚಾಶತ್ತಮ ದಿನದಲ್ಲಿ ಅಪೊಸ್ತಲರಿಗಾದ ಅನುಭವ: "ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು" (ಅಪೊಸ್ತಲರ ಕೃತ್ಯಗಳು 2:4).[15]

ಪಂಚಾಶತ್ತಮ ದಿನದಂದು ಪೇತ್ರನು ಯೋವೇಲನ ಪ್ರವಾದನೆಯನ್ನು ಉಲ್ಲೇಖಿಸಿದ್ದು: "'ಆದರೆ ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ. ಅದೇನಂದರೆ - . . . ನಾನು ಎಲ್ಲಾ ಮನುಷ್ಯರ[16] ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; . . . ಆಕಾಶದಲ್ಲಿ ಅದ್ಭುತಕಾರ್ಯಗಳನ್ನೂ ಕೆಳಗೆ ಭೂಮಿಯಲ್ಲಿ ಸೂಚಕಕಾರ್ಯಗಳನ್ನೂ ಉಂಟುಮಾಡುವೆನು" (ಅಪೊಸ್ತಲರ ಕೃತ್ಯಗಳು 2:16-20).

ಪಂಚಾಶತ್ತಮ ದಿನದಂದು ಪೇತ್ರನು ನೀಡಿದ ಸಂದೇಶ: "ಆತನು ದೇವರ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪವಿತ್ರಾತ್ಮವರವನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವದನ್ನು ಸುರಿಸಿದ್ದಾನೆ" (ಅಪೊಸ್ತಲರ ಕೃತ್ಯಗಳು 2:33; ನೋಡಿರಿ ಎಫೆಸ 4:7, 8, 11-13).

ಯೆರೂಸಲೇಮಿನಲ್ಲಿ ಅಪೊಸ್ತಲರ ಕೃತ್ಯಗಳು: "ಎಲ್ಲರಿಗೂ ಭಯ ಉಂಟಾಯಿತು, ಇದಲ್ಲದೆ ಅನೇಕ ಅದ್ಭುತಕಾರ್ಯಗಳೂ ಸೂಚಕಕಾರ್ಯಗಳೂ ಅಪೊಸ್ತಲರ ಕೈಯಿಂದ ನಡೆದವು" (ಅಪೊಸ್ತಲರ ಕೃತ್ಯಗಳು 2:43).

ಫಿಲಿಪ್ಪನು ಮಾಡಿದ ಸೂಚಕಕಾರ್ಯಗಳನ್ನು ಸೀಮೋನನು ಗಮನಿಸಿದನು: "ಆಗ ಸೀಮೋನನು ಕೂಡ ನಂಬಿ ದೀಕ್ಷಾಸ್ನಾನಮಾಡಿಸಿಕೊಂಡು ಫಿಲಿಪ್ಪನ ಸಂಗಡ ಯಾವಾಗಲೂ ಇದ್ದು ಸೂಚಕಕಾರ್ಯಗಳೂ ಮಹತ್ಕಾರ್ಯಗಳೂ ಉಂಟಾಗುವದನ್ನು ನೋಡಿ ಬೆರಗಾದನು" (ಅಪೊಸ್ತಲರ ಕೃತ್ಯಗಳು 8:13).

ಸಮಾರ್ಯದಲ್ಲಿ ಪೇತ್ರ ಮತ್ತು ಯೋಹಾನ ಮಾಡಿದ ಕ್ರಿಯೆಗಳು: ". . . ಪೇತ್ರ ಯೋಹಾನ . . . ಅವರ ಬಳಿಗೆ ಕಳುಹಿಸಿದರು. ಇವರು ಅಲ್ಲಿಗೆ ಬಂದು ಆ ಜನರಿಗೆ ಪವಿತ್ರಾತ್ಮವರವು

ದೊರೆಯಬೇಕೆಂದು ಅವರಿಗೋಸ್ಕರ ಪ್ರಾರ್ಥನೆ ಮಾಡಿದರು. ಯಾಕಂದರೆ ಆ ವರವು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡಿದ್ದರು. ಅಪೊಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮವರವನ್ನು ಹೊಂದಿದರು. ಅಪೊಸ್ತಲರು ಕೈಗಳನ್ನಿಡುವದರ ಮೂಲಕವಾಗಿ ಪವಿತ್ರಾತ್ಮದಾನವಾಗುವದನ್ನು ಸೀಮೋನನು ನೋಡಿ ಹಣವನ್ನು ತಂದು ಅವರ ಮುಂದಿಟ್ಟು - ನಾನು ಯಾರ ಮೇಲೆ ಕೈಗಳನ್ನಿಡುತ್ತೇನೋ ಅವರು ಪವಿತ್ರಾತ್ಮ ವರವನ್ನು ಹೊಂದುವಂತೆ ಈ ಅಧಿಕಾರವನ್ನು ನನಗೂ ಕೊಡಿರಿ ಅಂದನು" (ಅಪೊಸ್ತಲರ ಕೃತ್ಯಗಳು 8:14-19).

ಕೊರ್ನೇಲ್ಯನ ಮನೆಯಲ್ಲಿ ಪೇತ್ರನ ಸಂದೇಶವನ್ನು ಕೇಳಿದವರು ಪವಿತ್ರಾತ್ಮನನ್ನು ಸ್ವೀಕರಿಸಿಕೊಂಡಿದ್ದು: "ಪೇತ್ರನು ಈ ಮಾತುಗಳನ್ನು ಇನ್ನೂ ಹೇಳುತ್ತಿರುವಾಗ ಅವನ ವಾಕ್ಯವನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮವರವು ಇಳಿಯಿತು. ಅವರು ನಾನಾ ಭಾಷೆಗಳನ್ನಾಡುತ್ತಾ ದೇವರನ್ನು ಕೊಂಡಾಡುತ್ತಾ ಇರುವದನ್ನು ಪೇತ್ರನ ಸಂಗಡ ಬಂದಿದ್ದ ಯೆಹೂದ್ಯರಾದ ವಿಶ್ವಾಸಿಗಳು ಕೇಳಿದಾಗ - ಅನ್ಯಜನಗಳಿಗೂ ಪವಿತ್ರಾತ್ಮ ದಾನ ಮಾಡಲ್ಪಟ್ಟಿದೆಯಲ್ಲಾ ಎಂದು ಅತ್ಯಾಶ್ಚರ್ಯಪಟ್ಟರು. ನಡೆದ ಸಂಗತಿಯನ್ನು ಪೇತ್ರನು ನೋಡಿ - ನಮ್ಮ ಹಾಗೆಯೇ ಪವಿತ್ರಾತ್ಮವರವನ್ನು ಹೊಂದಿದ ಇವರಿಗೆ ನೀರಿನ ದೀಕ್ಷಾಸ್ನಾನವಾಗದಂತೆ ಯಾರಾದರೂ ಅಭ್ಯಂತರ ಮಾಡಾರೇ ಎಂದು ಹೇಳಿದನು" (ಅಪೊಸ್ತಲರ ಕೃತ್ಯಗಳು 10:44-47).

ಯೆರೂಸಲೇಮಿನಲ್ಲಿ ಪೇತ್ರನು ಮಾಡಿದ ಪ್ರತಿವಾದ: "ನಾನು ಮಾತಾಡುವದಕ್ಕೆ ಪ್ರಾರಂಭಿಸಿದಾಗ ಪವಿತ್ರಾತ್ಮ ವರವು ಮೊದಲು ನಮ್ಮ ಮೇಲೆ ಇಳಿದಂತೆ ಅವರ ಮೇಲೆಯೂ ಇಳಿಯಿತು. ಆಗ - ಯೋಹಾನನಂತೂ ನೀರಿನ ದೀಕ್ಷಾಸ್ನಾನಮಾಡಿಸಿದನು; ನಿಮಗಾದರೋ ಪವಿತ್ರಾತ್ಮದಲ್ಲಿ ಸ್ನಾನವಾಗುವದು ಎಂದು ಯೇಸುಸ್ವಾಮಿ ಹೇಳಿದ ಮಾತು ನನ್ನ ನೆನಪಿಗೆ ಬಂತು. ದೇವರು ಕರ್ತನಾಗಿರುವ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ನಮಗೆ ಕೊಟ್ಟ ವರಕ್ಕೆ ಸರಿಯಾದ ವರವನ್ನು ಅವರಿಗೂ ಕೊಟ್ಟಿರಲಾಗಿ ದೇವರನ್ನು ತಡೆಯುವದಕ್ಕೆ ನಾನು ಶಕ್ತನೋ?" (ಅಪೊಸ್ತಲರ ಕೃತ್ಯಗಳು 11:15-17).

ಬೇರೆ ವಾಕ್ಯಭಾಗಗಳು, ಯೇಸುವಿನ ಸೇವೆಯಲ್ಲಿಯೂ ಆದಿ ಸಭೆಯ ಜೀವಿತದಲ್ಲಿಯೂ, ಅದ್ಭುತಕರವಾದ ಸೂಚಕಕಾರ್ಯಗಳು ದೃಢೀಕರಿಸುವ ಪಾತ್ರವನ್ನು ವಹಿಸಿದ್ದರ ಕುರಿತು ಕಲಿಸುತ್ತವೆ.[17] ಸೂಚಕಕಾರ್ಯಗಳ ಪ್ರಮಾಣೀಕರಿಸುವ ಮೌಲ್ಯದ ಬಗ್ಗೆ ಒತ್ತಿ ಹೇಳುವದರಲ್ಲಿ, ಅವುಗಳು ಸಭೆಯ ಭಕ್ತಿವೃದ್ಧಿಯನ್ನು ಮಾಡುವದಕ್ಕಾಗಿ ಇರುವ ಕಾರ್ಯರೂಪದ ಹಾಗೂ ಪ್ರಯೋಜನಕರವಾದ ಮೌಲ್ಯಕ್ಕೆ ಒತ್ತು ಕೊಡತಕ್ಕದ್ದು (1 ಕೊರಿಂಥ 12:7; 14:12, 18, 19, 26). ಲಿಖಿತ ಹೊಸ ಒಡಂಬಡಿಕೆಯು ಇಲ್ಲದ ಕಾಲದಲ್ಲಿ ದೇವರ ವಾಕ್ಯವು ಸಭಿಕರಿಗೆ ಪ್ರವಾದನೆಯ ಮೂಲಕವಾಗಿ ಪ್ರಕಟಗೊಳಿಸಲ್ಪಡುತ್ತಿತ್ತು - ಅಂದರೆ, ದೇವರು ತನ್ನ ಚಿತ್ತವನ್ನು ನೇರವಾದ ಪ್ರೇರಣೆಯ ಮೂಲಕ ಪ್ರಕಟಗೊಳಿಸುತ್ತಿದ್ದನು. ಅಷ್ಟು ಮಾತ್ರವಲ್ಲದೆ, ಸದಸ್ಯರು ಸಂದೇಶವನ್ನು ಕಾರ್ಯರೂಪದಲ್ಲಿ ಅನ್ವಯಿಸಿಕೊಳ್ಳುವಂತಾಗಲು ಉಪದೇಶಕರು ಸಂದೇಶದ ಅರ್ಥವನ್ನು ತಿಳಿಸಿ ಹೇಳುತ್ತಿದ್ದರು ಹಾಗೂ "ಜ್ಞಾನವಾಕ್ಯ [ಅಥವಾ ಉಕ್ತಿಗಳನ್ನು]" ತಿಳಿಸುತ್ತಿದ್ದರು (1 ಕೊರಿಂಥ 12:8). ಅಂತಹ ಅದ್ಭುತಕರವಾದ ವಿದ್ಯಾಮಾನವು ರೋಮಾಂಚನವನ್ನುಂಟು ಮಾಡುವ ಉದ್ದೇಶಕ್ಕಾಗಿ ಆಗಿರಲಿಲ್ಲ; ಅವೆಲ್ಲಾ ಕ್ರಿಸ್ತನ ದೇಹವನ್ನು ಪ್ರೀತಿಯಲ್ಲಿ

ವೃದ್ಧಿಪಡಿಸುವದಕ್ಕೆ ಮತ್ತು ಪ್ರಬುದ್ಧತೆಗೆ ತರುವದಕ್ಕೆ ಪ್ರಯೋಜನಕರ ಮತ್ತು ಉದ್ದೇಶಿತವಾಗಿದ್ದವು (ಎಫೆಸ 4:7-16).

## ಅಬ್ರಹಾಮನ ನೀತಿಯು ನಂಬಿಕೆಯ ಮೂಲಕ ಸಾಧಿಸಲ್ಪಟ್ಟದ್ದು (3:6-9)

**6ಅಬ್ರಹಾಮನು ದೇವರನ್ನು ನಂಬಿದನು, ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು ಎಂಬದಾಗಿ ಬರೆದದೆಯಲ್ಲಾ. 7ಆದದರಿಂದ ನಂಬುವವರೇ ಅಬ್ರಹಾಮನ ಮಕ್ಕಳೆಂದು ತಿಳಿದುಕೊಳ್ಳಿರಿ. 8ದೇವರು ಅನ್ಯಜನರನ್ನು ನಂಬಿಕೆಯ ನಿಮಿತ್ತವಾಗಿಯೇ ನೀತಿವಂತರೆಂದು ನಿರ್ಣಯಿಸುವನೆಂಬದಾಗಿ ಶಾಸ್ತ್ರವು ಮೊದಲೇ ಕಂಡು ಅಬ್ರಹಾಮನಿಗೆ - ನಿನ್ನ ಮೂಲಕ ಎಲ್ಲಾ ಜನಾಂಗಗಳವರಿಗೆ ಆಶೀರ್ವಾದವುಂಟಾಗುವದೆಂಬ ಶುಭವರ್ತಮಾನವನ್ನು ಮುಂಚಿತವಾಗಿಯೇ ತಿಳಿಸಿತು. 9ಹೀಗಿರಲಾಗಿ ನಂಬುವವರು ನಂಬಿಕೆಯಿಟ್ಟ ಅಬ್ರಹಾಮನೊಂದಿಗೆ ಸೌಭಾಗ್ಯವನ್ನು ಹೊಂದುವರು.**

**ವಚನ 6.** ಪೌಲನು ಈಗಷ್ಟೆ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕವೇ ಪವಿತ್ರಾತ್ಮನನ್ನು ಪಡೆದುಕೊಳ್ಳಲಾಯಿತೇ, ಹೊರತು ನೇಮನಿಷ್ಠೆಗಳನ್ನು ಅನುಸರಿಸಿದ್ದರಂದಲ್ಲ ಎಂಬುದನ್ನು ಸಾಭಿತುಪಡಿಸಿದ್ದನು. ಆತನು ನಂಬಿಕೆಯ ತತ್ವವನ್ನು ದೃಷ್ಟಾಂತಪಡಿಸುವದಕ್ಕೆ ಮುಂದುವರೆಯುವವನಾಗಿ ಆದಿಕಾಂಡ 15:6ನೇ ವಚನವನ್ನು LXXನಿಂದ ಉಲ್ಲೇಖಿಸುತ್ತಾನೆ: **ಅಬ್ರಹಾಮನು ದೇವರನ್ನು ನಂಬಿದನು, ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು ಎಂಬದಾಗಿ ಬರೆದದೆಯಲ್ಲಾ** (ನೋಡಿರಿ ರೋಮಾ 4:3). ಅದರ ಮೂಲ ಸನ್ನಿವೇಶದಲ್ಲಿ, ಈ ಹೇಳಿಕೆಯ ಮುಂಚಿತವಾಗಿ ದೇವರು ಮಕ್ಕಳಿಲ್ಲದ ಅಬ್ರಹಾಮನಿಗೆ ಆತನ ಸಂತಾನವು ಆಕಾಶದಲ್ಲಿರುವ ನಕ್ಷತ್ರಗಳಷ್ಟು ಅಸಂಖ್ಯಾತವಾಗಿರುವವೆಂದು ವಾಗ್ದಾನ ಮಾಡಿದ್ದನು (ಆದಿಕಾಂಡ 15:4, 5). ಈ ಹೇಳಿಕೆಯು ದೇವರು ಸುನ್ನತಿಯ ವಾಗ್ದಾನವನ್ನು ಪರಿಚಯಿಸುವದಕ್ಕೆ ಎರಡು ಅಧ್ಯಾಯಗಳ ಮುಂಚೆ ಕಾಣಿಸಿಕೊಳ್ಳುತ್ತದೆ.

ಬಹುಶಃ ಅಬ್ರಹಾಮನನ್ನು ಇಲ್ಲಿ ಮೂರು ಕಾರಣಗಳಿಗಾಗಿ ಬಳಸಲಾಗಿತ್ತು: (1) ಆತನು ಯೆಹೂದಿ ಜನರ ಪಿತೃವಾಗಿದ್ದನು, (2) ಆತನು ನಂಬಿಕೆಗೆ ಮಾದರಿಯಾಗಿದ್ದನು,[18] ಮತ್ತು (3) ಆತನು ಧರ್ಮಶಾಸ್ತ್ರವು ಕೊಡಲ್ಪಡುವದಕ್ಕೆ ನೂರಾರು ವರ್ಷಗಳ ಮುಂಚೆಯೇ ಜೀವಿಸಿದ್ದನು (3:17). ಇನ್ನೊಂದು ಹೆಚ್ಚುವರಿ ಕಾರಣವು ಏನಾಗಿರಬಹುದೆಂದರೆ ಯೆಹೂದಿಕರಣ ಮಾಡುವವರು ಅಬ್ರಹಾಮನ ಉದಾಹರಣೆಯನ್ನು ಬಳಸಿಕೊಂಡು ಅನ್ಯಜನರೊಗೆ ಸುನ್ನತಿಯು ಕಡ್ಡಾಯವೆಂದು ಒತ್ತಾಯಿಸುತ್ತಿದ್ದಿರಬಹುದಾಗಿದೆ, ಆದ್ದರಿಂದ ಪೌಲನು ಅವರ ವಾದವನ್ನೇ ಅವರಿಗೆ ವಿರುದ್ಧವಾಗಿ ತಿರುಗಿಸಿದನು. F. F. Bruceನು ಯೋಚಿಸಿದ್ದೇನೆಂದರೆ ಗಲಾತ್ಯದ ಕ್ರೈಸ್ತರಿಗೆ "ಅಬ್ರಹಾಮನ ನಿಜವಾದ ಮಕ್ಕಳಾಗಬೇಕೆಂದರೆ ಇದು ಎಷ್ಟೊಂದು ಅವಶ್ಯಕವಾಗಿರುತ್ತದೆ, ಆದದರಿಂದ ಅಬ್ರಹಾಮನು ಮಾಡಿಸಿಕೊಂಡಿದ್ದಂತೆಯೇ, ನೀವು ಸಹ ಸುನ್ನತಿ ಮಾಡಿಸಿಕೊಳ್ಳಿರಿ ಎಂಬುದಾಗಿ ಚಳವಳಿಗಾರರು ಹೇಳಿರಬಹುದಾಗಿದೆ."[19]

6ನೇ ವಚನವು ಇನ್ನೂ ಮುಂದಕ್ಕೆ ಹೇಳುವದೇನೆಂದರೆ, "ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು." ನೀತಿಯೆಂದು "ಎಣಿಸಲ್ಪಡುವದು" ಒಂದು ಕಾನೂನಾತ್ಮಕ ಭಾವನೆಯಾಗಿದೆ; ಅದು ನೀತಿವಂತ ಹಾಗೂ ಕೃಪಾವಂತನಾದ ದೇವರು ಮಾಡುವ ಘೋಷಣೆಯಾಗಿದೆ. *ಅಬ್ರಹಾಮನು ತನ್ನ ಸ್ವಂತ ಅರ್ಹತೆಗಳ ಕಾರಣದಿಂದಾಗಿ ನೀತಿವಂತನಾಗಿರಲಿಲ್ಲ, ಆದರೆ ದೇವರು ತನ್ನಲ್ಲಿ ಆತನು ನಂಬಿಕೆ (ವಿಶ್ವಾಸ) ಇಟ್ಟಿದ್ದ ಕಾರಣ*

*ನೀತಿವಂತನೆಂದು ಪರಿಗಣಿಸಿದನು.* ಯೆಹೂದ್ಯರ ಪಿತೃವಾದ ಅಬ್ರಹಾಮನ ಹಾಗೆಯೇ, ಮೋಶೆಯ ಧರ್ಮಶಾಸ್ತ್ರಕ್ಕೆ ನಿಷ್ಠಾವಂತಿಕೆಯಿಲ್ಲದವರಾಗಿಯೇ ಮತ್ತು ಸುನ್ನತಿ ಮಾಡಿಸಿಕೊಳ್ಳದೆಯೇ ಅವರ ನಂಬಿಕೆಯ ನಿಮಿತ್ತವಾಗಿ ಅನ್ಯಜನರು ಸಹ ನೀತಿವಂತರೆಂದು ಎಣಿಸಲ್ಪಡುವದಕ್ಕೆ ಸಾಧ್ಯವಿತ್ತು. ನೀತಿವಂತಿಕೆಯು ದೇವರಿಂದ ಕೊಡಲ್ಪಟ್ಟಿರುವ ವರವಾಗಿತ್ತು,[20] ಅದು ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ಕೈಗೊಂಡು ನಡೆಯುವದರಿಂದಾಗಿ ಸಂಪಾದಿಸಿಕೊಳ್ಳುವ ಸಂಗತಿಯಾಗಿರಲಿಲ್ಲ.

**ವಚನ 7.** ಅಬ್ರಹಾಮನು ಯೆಹೂದ್ಯರ ಶಾರೀರಿಕ ಹಾಗೂ ಆತ್ಮೀಕ ಪಿತೃವಾಗಿದ್ದನು. ಹೊಸ ಒಡಂಬಡಿಕೆಯ ಅಡಿಯಲ್ಲಿ, **ನಂಬುವವರೇ** (οἱ ἐκ πίστεως, *hoi ek pisteōs*) ಎಂದರೆ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವವರು - ಅವರು ಯೆಹೂದ್ಯರಾಗಲಿ, ಅನ್ಯಜನರಾಗಲಿ, ಸುನ್ನತಿಯವರಾಗಲಿ ಅಥವಾ ಸುನ್ನತಿಯಿಲ್ಲದವರಾಗಲಿ (ರೋಮಾ 4:11, 12). R. Alan Coleನು ಅಭಿಪ್ರಾಯ ಪಟ್ಟದ್ದೇನೆಂದರೆ ಗ್ರೀಕ್ ಪದಗುಚ್ಛವು 2:12ರಲ್ಲಿ ಪೇತ್ರನು ಹೆದರಿದಂಥ "ಸುನ್ನತಿಯ ಪಕ್ಷದವರು" (τούς ἐκ περιτομῆς, *tous ek peritomēs*) ಎಂಬುದಕ್ಕೆ ವಿರುದ್ಧವಾಗಿ, "ನಂಬಿಕೆಯ ಪಕ್ಷದವರು" ಎಂದು ಅನುವಾದಿಸಲ್ಪಡತಕ್ಕದ್ದು.[21] "ನಂಬುವವರೇ" **ಅಬ್ರಹಾಮನ** ನಿಜವಾದ ಆತ್ಮೀಕ **ಮಕ್ಕಳು** ಖಂಡಿತವಾಗಿಯೂ, ಯಾರಾದರೂ ". . . ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ" (3:29).

ಯೆಹೂದ್ಯರು ಅನೇಕ ಸಾರಿ ತಮ್ಮ ಅಬ್ರಹಾಮನ ವಂಶಸ್ಥರೆಂಬ ಸ್ಥಾನದ ಮೇಲೆ ಒಂದು ಮಿಥ್ಯವಾದ ದೃಢವಿಶ್ವಾಸವನ್ನಿಟ್ಟಿದ್ದರು, ಆತನ ಸಂತಾನದವರಾಗಿರುವದು ಅವರನ್ನು ನೀತಿವಂತರನ್ನಾಗಿಸಿರುತ್ತದೋ ಎಂಬಂತೆ ಭಾವಿಸಿಕೊಂಡಿದ್ದರು (ಯೋಹಾನ 8:33, 39, 53). ಸ್ನಾನಿಕನಾದ ಯೋಹಾನನು ಈ ದೋಷಪೂರಿತವಾದ ನಂಬಿಕೆಯನ್ನಿಟ್ಟುಕೊಂಡಿದ್ದ ಪಶ್ಚಾತ್ತಾಪವಿಲ್ಲದ ಸದ್ದುಕಾಯರನ್ನು ಮತ್ತು ಫರಿಸಾಯರನ್ನು ಮುಖಾಮುಖಿಯಾಗಿ ಎದುರಿಸಿದ್ದನು. ಆತನು ಅವರಿಗೆ, ದೇವರು ಬಯಸಿದ್ದರೆ ಅಬ್ರಹಾಮನಿಗಾಗಿ ಕಲ್ಲುಗಳಿಂದ ಸಹ ಮಕ್ಕಳನ್ನು ಒದಗಿಸಿರುವದಕ್ಕೆ ಶಕ್ತನಾಗಿರುತ್ತಿದ್ದನೆಂದು ಹೇಳಿದನು (ಮತ್ತಾಯ 3:9). ಅಷ್ಟುಮಾತ್ರವಲ್ಲದೆ, ಹೊರಗಿನ ಸುನ್ನತಿಯು ಒಬ್ಬ ವ್ಯಕ್ತಿಯನ್ನು ನಿಜವಾದ ಯೆಹೂದ್ಯನನ್ನಾಗಿ ಮಾಡುವದಿಲ್ಲ; ಬದಲಾಗಿ, ಅದು ಹೃದಯದ ಆಂತರೀಕ ಸುನ್ನತಿಯಿಂದಲೇ ಉಂಟಾಗುವದಾಗಿದೆ ಎಂದು ಪೌಲನು ವಾದಿಸಿದನು.[22] *"ಶರೀರಸಂಬಂಧವಾಗಿ ಹುಟ್ಟದವರ" ಬದಲಾಗಿ, "ವಾಗ್ದಾನಸಂಬಂಧವಾಗಿ ಹುಟ್ಟಿದವರೇ" ಅಬ್ರಹಾಮನ "ಸಂತಾನದವರು" ಎಂದು ಪರಿಗಣಿಸಲ್ಪಟ್ಟಿರುತ್ತಾರೆ (ರೋಮಾ 9:8).* ಅಷ್ಟುಮಾತ್ರವಲ್ಲದೆ, "ನಂಬುವವರೆಲ್ಲರಿಗೆ ನೀತಿಯನ್ನು ದೊರಕಿಸಿರುವ ಕ್ರಿಸ್ತನಿಂದಲೇ ಕರ್ಮಮಾರ್ಗಕ್ಕೆ ಅಂತ್ಯವಾಯಿತು" (ರೋಮಾ 10:4; ನೋಡಿರಿ ಕೊಲೊಸ್ಸೆ 2:14). ಪೌಲನು ನಂಬಿಕೆಯಿಲ್ಲದ ಯೆಹೂದ್ಯರಿಗಾಗಿ ನಿರೀಕ್ಷೆಯನ್ನು ಎತ್ತಿ ಹಿಡಿಯುವವನಾಗಿ ಒಂದು ದಿನ ಅವರು ಕ್ರಿಸ್ತನಲ್ಲಿ ನಂಬಿಕೆಯಿಡುವರು ಮತ್ತು ಆಗ ದೇವರು ಅವರನ್ನು ಸ್ವೀಕರಿಸಿಕೊಳ್ಳುವನು ಎಂದು ಹೇಳುತ್ತಾನೆ (ರೋಮಾ 11). ಹೊಸ ಒಡಂಬಡಿಕೆಯ ಅಡಿಯಲ್ಲಿ, ಕ್ರಿಸ್ತನಲ್ಲಿ "ನೂತನ ಸೃಷ್ಟಿ" ಆಗಿರುವವರು ಮಾತ್ರವೇ ನಿಜವಾಗಿಯೂ "ದೇವರ ಇಸ್ರಾಯೇಲ್ಯರು" ಆಗಿರುತ್ತಾರೆ (ಗಲಾತ್ಯ 6:15, 16; NIV).

**ವಚನ 8.** ಪೌಲನು ಯೆಹೂದ್ಯರಿಗಾಗಿ ಮತ್ತು ಅನ್ಯಜನರಿಗಾಗಿ ರಕ್ಷಣೆಯ ಶುಭವಾರ್ತೆಯು ಒಂದೇ ರೀತಿಯಾಗಿರುತ್ತದೆಂಬುದಕ್ಕೆ ಬೆಂಬಲವಾಗಿ ಹಳೆಯ ಒಡಂಬಡಿಕೆಯ ವಾಕ್ಯಭಾಗವನ್ನು ಉಲ್ಲೇಖಿಸುತ್ತಾನೆ. **ದೇವರು ಅನ್ಯಜನರನ್ನು ನಂಬಿಕೆಯ ನಿಮಿತ್ತವಾಗಿಯೇ ನೀತಿವಂತರೆಂದು**

**ನಿರ್ಣಯಿಸುವನೆಂಬದಾಗಿ ಶಾಸ್ತ್ರವು ಮೊದಲೇ ಕಂಡು ಅಬ್ರಹಾಮನಿಗೆ . . . ಶುಭವರ್ತಮಾನವನ್ನು ಮುಂಚಿತವಾಗಿಯೇ ತಿಳಿಸಿತು** ಎಂಬುದಾಗಿ ಶಾಸ್ತ್ರವು ವ್ಯಕ್ತಿಕರಣಗೊಳಿಸಲ್ಪಟ್ಟಿದೆ. ಪೌಲನು ಆದಿಕಾಂಡ 12:3ರಿಂದ ಉಲ್ಲೇಖಿಸಿದ, **ನಿನ್ನ ಮೂಲಕ ಎಲ್ಲಾ ಜನಾಂಗಗಳವರಿಗೆ ಆಶೀರ್ವಾದವುಂಟಾಗುವದು** ಎಂಬ ವಾಗ್ದಾನವು ಅಬ್ರಹಾಮನಿಗೆ ಕೊಡಲ್ಪಟ್ಟಿತ್ತು (ನೋಡಿರಿ ಆದಿಕಾಂಡ 18:17, 18). ಅಬ್ರಹಾಮನ ವಂಶಾವಳಿಯಿಂದ ಕ್ರಿಸ್ತನು ಬರಲಿದ್ದನು, ಆತನು ಮಾನವರ ಪಾಪಗಳಿಗೋಸ್ಕರ ಮರಣಿಸಿ ಇಡೀ ಲೋಕಕ್ಕೆ ರಕ್ಷಣೆಯನ್ನು ಒದಗಿಸಲಿದ್ದನು.

ಆದಿಕಾಂಡ 3:15ರಲ್ಲಿರುವ "ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ" ಎಂಬ ಹೇಳಿಕೆಯು ಅನೇಕ ಸಾರಿ ಪ್ರಥಮಸುವಾರ್ತೆ ಎಂಬುದಾಗಿ ವ್ಯಾಖ್ಯಾನಿಸಲಾಗುತ್ತದೆ - ಅಂದರೆ, ಬೈಬಲಿನಲ್ಲಿ ಕ್ರಿಸ್ತನ ಸುವಾರ್ತೆಯ ಕುರಿತಾದ ಮೊಟ್ಟಮೊಲದ ಘೋಷಣೆ. ಈ ಭಾಷೆಯು ಶಿಲುಬೆಯ ಮೇಲೆ ಕ್ರಿಸ್ತನು ಸೈತಾನನನ್ನು ಸೋಲಿಸುವದರೊಂದಿಗೆ ಸಂಬಂಧಿಸಿರುತ್ತದೆ. ಇದು ಸರಿಯೇ ಆಗಿರುವದಾದರೆ, ಆದಿಕಾಂಡ 12:3ನೇ ವಚನವು ಸುವಾರ್ತೆಯ ಎರಡನೆಯ ಘೋಷಣೆಯಾಗಿರುತ್ತದೆ ಎಂದಾಗುವದು. ಹಾಗಿಲ್ಲವಾದಲ್ಲಿ, ಆದಿಕಾಂಡ 12:3 ಪ್ರಥಮ ಸುವಾರ್ತೆಯಾಗುತ್ತದೆ.

ದೇವರ "ಶಾಶ್ವತ ಉದ್ದೇಶ"ವು ಯೆಹೂದ್ಯರನ್ನೂ ಅನ್ಯಜನರನ್ನೂ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕವಾಗಿ ಒಂದೇ ದೇಹವಾಗಿ (ಸಭೆ) ರಕ್ಷಿಸಬೇಕೆಂಬುದಾಗಿತ್ತು (ಎಫೆಸ 3:1-11). ಅನ್ಯಜನರನ್ನು ತನ್ನ ಹೊಸ ಒಡಂಬಡಿಕೆಯಲ್ಲಿ ಸೇರ್ಪಡೆಗೊಳಿಸಬೇಕೆಂದು ಯಾವಾಗಲೂ ದೇವರ ಯೋಜನೆಯಾಗಿತ್ತು. Bolesನು ಹೀಗೆ ಬರೆದನು, "ಯೋಜನೆಯು ಅನಂತರದಲ್ಲಿ ಮಾಡಿಕೊಂಡ ಯೋಚನೆಯಾಗಿರಲಿಲ್ಲ ಅಥವಾ ದೇವರು ಆದಾಮ, ನೋಹ, ಅಬ್ರಹಾಮ, ಮತ್ತು ಮೋಶೆಯೊಂದಿಗೆ ಮಾಡಿದ ವ್ಯವಹಾರಗಳು ವಿಫಲವಾಗಿದ್ದರಿಂದಾಗಿ ಏನಾದರೂ ಮಾಡಲೇ ಬೇಕೆಂಬುದಾಗಿ ತೆಗೆದುಕೊಂಡಂಥ ಕ್ರಮವಾಗಿರುವದಿಲ್ಲ."[23] ದೇವರ ಯೋಜನೆಯಲ್ಲಿ ಎಲ್ಲಾ ಜನಾಂಗಗಳು ಸೇರಿದ್ದವು ಎಂಬುದು ಆದಿಕಾಂಡ 12:3ರಷ್ಟು ಆರಂಭದಲ್ಲಿಯೇ ಸಾಭಿತುಗೊಳಿಸಲ್ಪಟ್ಟಿತ್ತು.

**ವಚನ 9. ಹೀಗಿರಲಾಗಿ ನಂಬುವವರು ನಂಬಿಕೆಯಿಟ್ಟ**ವರು, ಎಂಬುದು 3:7ರಿಂದ ಪುನರಾವರ್ತಿಸಲ್ಪಟ್ಟಿರುವ ಪದಗುಚ್ಛವಾಗಿದ್ದು, ಇದು ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡುವಂಥ ಕ್ರೈಸ್ತರನ್ನು ಸೂಚಿಸುತ್ತದೆ. ಕ್ರೈಸ್ತರು **ಅಬ್ರಹಾಮನೊಂದಿಗೆ ಸೌಭಾಗ್ಯವನ್ನು ಹೊಂದುವರು** ಯಾಕೆಂದರೆ ಅವರು ಒಂದೇ ವಿಧವಾದ ನಂಬಿಕೆಯನ್ನು ಹಂಚಿಕೊಂಡಿರುತ್ತಾರೆ. ಯೇಸುವು ಲಾಜರನ ಕಥೆಯನ್ನು ಸಭೆಯು ಸ್ಥಾಪಿಸಲ್ಪಡುವದಕ್ಕೆ ಮುಂಚೆ ಹೇಳಿದನಾದರೂ, ಆ ಬಡ ಮನುಷ್ಯನಿಗಾದ ಗತಿಯನ್ನು ಕುರಿತು ಈ ಸನ್ನಿವೇಶದಲ್ಲಿ ಪ್ರಸ್ತಾಪಿಸುವದು ಯೋಗ್ಯವಾಗಿದೆ: ನಂಬಿಕೆಯ ಜೀವನವನ್ನು ನಡಿಸಿದ ಬಳಿಕ, ಆತನ ಆತ್ಮವನ್ನು "ದೇವದೂತರು ಅವನನ್ನು ತೆಗೆದುಕೊಂಡುಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು" (ಲೂಕ 16:22). ಲಾಜರನು ಪರದೈಸಿನಲ್ಲಿದ್ದನು, "ಅಬ್ರಹಾಮನೊಂದಿಗೆ ಸೌಭಾಗ್ಯವನ್ನು" ಹೊಂದಿದ್ದನು.

ಈ ವಚನದಲ್ಲಿ, ಅಬ್ರಹಾಮನು **ನಂಬಿಕೆಯಿಟ್ಟ**ವನು ಎಂದು ಕರೆಯಲ್ಪಟ್ಟಿದ್ದಾನೆ. Robert L. Johnsonನು ಅಬ್ರಹಾಮನನ್ನು ದೇವರ ಮಾತಿನಂತೆ ಆತನಲ್ಲಿ ವಿಶ್ವಾಸವಿಟ್ಟನೆಂಬುದಾಗಿ ಚಿತ್ರಿಸಿಕೊಳ್ಳುತ್ತಾನೆ. ಆತನು ಬರೆದದ್ದೇನೆಂದರೆ, "ಆತನು ನಂಬಿಕೆಯ-ಸಂಬಂಧಕ್ಕೆ ನಿಜವಾದ ಪ್ರವರ್ತಕನಾಗಿದ್ದನು ಮತ್ತು ಮಾದರಿಯನ್ನು

ತೋರಿಸುವವನಾಗಿದ್ದನು. ನಂಬಿಕೆಯಿರುವ ಮನುಷ್ಯರೆಲ್ಲರೂ ಅವರ ಆತ್ಮೀಕ ತಂದೆಯಾದ ಅಬ್ರಹಾಮನ ನೇರವಾದ ವಂಶಾವಳಿಯಲ್ಲಿ ನಿಲ್ಲುವವರಾಗಿದ್ದಾರೆ."[24]

## ಯೆಹೂದ್ಯರು ಮೇಲಿರುವ ಧರ್ಮಶಾಸ್ತ್ರದ ಶಾಪ (3:10-14)

**[10]ನೇಮನಿಷ್ಠೆಗಳನ್ನು ಆಧಾರಮಾಡಿಕೊಳ್ಳುವವರೆಲ್ಲರೂ ಶಾಪಾಧೀನರಾಗಿದ್ದಾರೆ. ಹೇಗಂದರೆ, ಧರ್ಮಗ್ರಂಥದೊಳಗೆ ಬರೆದಿರುವವುಗಳನ್ನೆಲ್ಲಾ ನಿತ್ಯವೂ ಕೈಕೊಳ್ಳದಿರುವ ಪ್ರತಿಯೊಬ್ಬನು ಶಾಪಗ್ರಸ್ತನೆಂದು ಶಾಸ್ತ್ರದಲ್ಲಿ ಬರೆದದೆ. [11]ಇದಲ್ಲದೆ ಕರ್ಮಮಾರ್ಗದಿಂದ ಯಾವನೂ ದೇವರ ಸನ್ನಿಧಿಯಲ್ಲಿ ನೀತಿವಂತನಾಗುವದಿಲ್ಲವೆಂಬದು ಸ್ಪಷ್ಟವಾಗಿದೆ. ಯಾಕಂದರೆ ನೀತಿವಂತನು ನಂಬಿಕೆಯಿಂದಲೇ ಬದುಕುವನೆಂದು ಬರೆದದೆ. [12]ಆದರೆ ಕರ್ಮಮಾರ್ಗಕ್ಕೆ ನಂಬಿಕೆಯು ಆಧಾರವಲ್ಲ, ಅದರ ನೇಮಗಳನ್ನು ಆಚರಿಸಿದವನೇ ಅವುಗಳ ಮೂಲಕ ಬದುಕುವನು ಎಂದು ಬರೆದದೆ. [13]ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ [14]ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.**

**ವಚನ 10.** 3:6–9ರಲ್ಲಿ ಅಬ್ರಹಾಮನನ್ನು ನಂಬಿಕೆಯ ತತ್ವಕ್ಕೆ ಮೂಲಮಾದರಿ ಎಂಬುದಾಗಿ ಎತ್ತಿ ಹಿಡಿದ ಬಳಿಕ, ಪೌಲನು ಹೀಗೆ ಹೇಳಿದನು, **ನೇಮನಿಷ್ಠೆಗಳನ್ನು ಆಧಾರಮಾಡಿಕೊಳ್ಳುವವರೆಲ್ಲರೂ ಶಾಪಾಧೀನರಾಗಿದ್ದಾರೆ.** "ನೇಮನಿಷ್ಠೆಗಳು" ಎಂಬುದು ಮೋಶೆಯ ಧರ್ಮಶಾಸ್ತ್ರವನ್ನು ಸೂಚಿಸುವದಾಗಿದೆ (ನೋಡಿರಿ 2:16). ಕ್ರಿಸ್ತನನ್ನು ಹೊರತುಪಡಿಸಿ,[25] ಬೇರೆ ಯಾರೊಬ್ಬರೂ ಧರ್ಮಶಾಸ್ತ್ರಕ್ಕೆ ಪರಿಪೂರ್ಣವಾಗಿ ವಿಧೇಯರಾಗಲಾರರು. ಆದದರಿಂದ, ಒಬ್ಬನ ನೀತಿಯನ್ನು ಧರ್ಮಶಾಸ್ತ್ರದ ಮುಖಾಂತರವಾಗಿ ಸ್ಥಾಪಿಸುವದಕ್ಕೆ ಪ್ರಯತ್ನಿಸುವದು - ಯೆಹೂದಿಕರಣಗೊಳಿಸುವ ವ್ಯಕ್ತಿಗಳು ಗಲಾತ್ಯವರಿಗೆ ಇದನ್ನು ಮಾಡುವಂತೆ ಮನವೊಲಿಸಲು ಪ್ರಯತ್ನಿಸುತ್ತಿದ್ದ ಪ್ರಕಾರ - ತನ್ನನ್ನು ತಾನೇ ಶಪಿಸಿಕೊಂಡಂತೆ, ಒಬ್ಬನನ್ನು ಶಾಪಕ್ಕೆ ಗುರಿಪಡಿಸಿಕೊಂಡ ಹಾಗಾಗುತ್ತಿತ್ತು.

ಪೌಲನು ಧರ್ಮೋಪದೇಶಕಾಂಡ 27:26ರಿಂದ ಉಲ್ಲೇಖಿಸುತ್ತಾನೆ: **ಧರ್ಮಗ್ರಂಥದೊಳಗೆ ಬರೆದಿರುವವುಗಳನ್ನೆಲ್ಲಾ ನಿತ್ಯವೂ ಕೈಕೊಳ್ಳದಿರುವ ಪ್ರತಿಯೊಬ್ಬನು ಶಾಪಗ್ರಸ್ತನೆಂದು ಶಾಸ್ತ್ರದಲ್ಲಿ ಬರೆದದೆ.** ಈ ಹೇಳಿಕೆಯು ದೇವರ ಜನರು ವಾಗ್ದಾನ ದೇಶವನ್ನು ಪ್ರವೇಶಿಸುವದಕ್ಕೆ ಮುನ್ನ ಗೆರಜ್ಜೀಮ್ ಮತ್ತು ಏಬಾಲ್ ಪರ್ವತಗಳ ಮೇಲಿರುವ ವೇಳೆ ಅವರು ಕಾನಾನ್ ದೇಶದಲ್ಲಿ ಸೇರಿದಾಗ ನುಡಿಯಬೇಕಾಗಿದ್ದ ಆಶೀರ್ವಾದಗಳು ಹಾಗೂ ಶಾಪಗಳ ಸನ್ನಿವೇಶದೊಳಗಿಂದ ತೆಗೆದುಕೊಂಡದ್ದಾಗಿತ್ತು. ಇದು ಧರ್ಮೋಪದೇಶಕಾಂಡ 27ರಲ್ಲಿ ಉಲ್ಲೇಖಿಸಲಾಗಿರುವ ಕೊನೆಯ ಶಾಪವಾಗಿರುತ್ತದೆ. ಪೌಲನು ಮಾಡಿರುವ ಉಲ್ಲೇಖನವು LXXನಲ್ಲಿರುವ ಗ್ರೀಕ್ ವಾಕ್ಯದಂತೆಯೇ ಇರುತ್ತದೆ. ಎರಡೂ ವಾಕ್ಯಭಾಗಗಳಲ್ಲಿ "ಎಲ್ಲಾ" ಎಂಬ ಪದವು ಸೇರಿರುತ್ತದೆ ("ಧರ್ಮಗ್ರಂಥದೊಳಗೆ ಬರೆದಿರುವವುಗಳನ್ನೆಲ್ಲಾ" ಎಂಬ ಪದಗುಚ್ಛದಲ್ಲಿ), ಇಬ್ರಿಯ ವಾಕ್ಯದಲ್ಲಿ ಸೂಚ್ಯಾರ್ಥವಾಗಿ ಮಾತ್ರವೇ ತಿಳಿಸಲ್ಪಟ್ಟಿದ್ದನ್ನು ಸ್ಪಷ್ಟವಾಗಿ ತಿಳಿಸುವದಾಗಿದೆ. ಯಾಕೋಬನು ತನ್ನ ಪತ್ರಿಕೆಯಲ್ಲಿ ಇದೇ ರೀತಿಯ ಹೇಳಿಕೆಯೊಂದನ್ನು ಕೊಟ್ಟನು: "ಯಾಕಂದರೆ ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ

ಒಂದರಲ್ಲಿ ತಪ್ಪಿದರೆ ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಿಯಾಗುತ್ತಾನೆ" (ಯಾಕೋಬ 2:10). ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಎಲ್ಲಾ ಜನರು ಪಾಪ ಮಾಡಿದ್ದಾರೆ, ದೇವರ ಮಹಿಮೆಯನ್ನು ಕಳೆದುಕೊಂಡಿದ್ದಾರೆ ಎಂಬುದನ್ನು ಒತ್ತಿ ಹೇಳಿದನು (ರೋಮಾ 3:10, 23). ಯಾವನೂ ಪರಿಪೂರ್ಣವಾದ ವಿಧೇಯತೆಯ ಮೂಲಕವಾಗಿ ತನ್ನನ್ನು ನೀತಿವಂತನನ್ನಾಗಿ ಮಾಡಿಕೊಳ್ಳಲಾರನು! ಪ್ರತಿಯೊಬ್ಬನೂ ರಕ್ಷಕನಲ್ಲಿ ವಿಶ್ವಾಸಿಸುವುದು ಅಗತ್ಯವಿರುತ್ತದೆ.

**ವಚನ 11.** ತರುವಾಯ, ಪೌಲನು ಹೀಗೆ ಬರೆದನು, **ಇದಲ್ಲದೆ ಕರ್ಮಮಾರ್ಗದಿಂದ ಯಾವನೂ ದೇವರ ಸನ್ನಿಧಿಯಲ್ಲಿ ನೀತಿವಂತನಾಗುವದಿಲ್ಲವೆಂಬದು ಸ್ಪಷ್ಟವಾಗಿದೆ.** ಯಾವನೂ ದೇವರ ದಯೆಯನ್ನು ಸಂಪಾದಿಸಿಕೊಳ್ಳಲಾರನು ಅಥವಾ ದೇವರನ್ನು ತನಗೆ ಸಾಲಗಾರನನ್ನಾಗಿ ಮಾಡಿಕೊಳ್ಳಲಾರನು. ಅಪೊಸ್ತಲನು ಅದೇ ಸತ್ಯವನ್ನು ರೋಮಾ 3:20ರಲ್ಲಿ ಹೇಳಿದನು: "ಯಾಕಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ."

ಧರ್ಮಶಾಸ್ತ್ರ-ಕೈಗೊಳ್ಳುವದರಿಂದ ನೀತಿವಂತರಾಗುವ ಬದಲಾಗಿ, ನಂಬಿಕೆಯ ತತ್ವವು "ಸ್ಪಷ್ಟವಾಗಿದೆ" ಎಂದು ಪೌಲನು ಹೇಳುತ್ತಾನೆ: **ನೀತಿವಂತನು ನಂಬಿಕೆಯಿಂದಲೇ ಬದುಕುವನು.** ಈ ಹೇಳಿಕೆಯು ಹಬಕ್ಕೂಕ 2:4ರ ಮೇಲೆ ಆಧಾರವಾಗಿರುತ್ತದೆ, ಅದು ರೋಮಾ 1:17 ಹಾಗೂ ಇಬ್ರಿಯ 10:38ರಲ್ಲಿ ಭಾವಾನುವಾದ ಮಾಡಲ್ಪಟ್ಟಿದೆ. ಮೂಲ ವಾಕ್ಯದಲ್ಲಿ, ಯೆಹೂದ ಜನಾಂಗವು ನಿರ್ದಯಿಗಳಾದ ಬಾಬೆಲಿನವರ ಕೈಗಳಲ್ಲಿ ದೇವರ ನ್ಯಾಯತೀರ್ಪನ್ನು ಎದುರಿಸುತ್ತಿತ್ತು, ಇದು ಕ್ರಿ.ಪೂ. 605 ಮತ್ತು 598ರ ನಡುವಿನ ಒಂದು ಕಾಲದಲ್ಲಿ ಸಂಭವಿಸಿತ್ತು. ಆತನು ತನ್ನ ಜನರನ್ನು ದಂಡಿಸುತ್ತಿದ್ದನಾದರೂ, ತಾನು ಒಂದು ಶೇಷಜನವನ್ನು ರಕ್ಷಿಸುವನು ಮತ್ತು ಅನಂತರದಲ್ಲಿ ಅವರನ್ನು ವಾಗ್ದಾನ ದೇಶದಲ್ಲಿ ಪುನಃ ನೆಲೆಗೊಳಿಸುವೆನೆಂಬುದಾಗಿ ಅವರು ತಿಳಿದುಕೊಳ್ಳಬೇಕೆಂಬುದು ದೇವರ ಬಯಕೆಯಾಗಿತ್ತು. ಹಬಕ್ಕೂಕನು ಸೇರಿದಂತೆ, ತನ್ನ ಜನರು ತನ್ನಲ್ಲಿ ವಿಶ್ವಾಸವಿಡಬೇಕೆಂಬುದು ಆತನ ಬಯಕೆಯಾಗಿತ್ತು. ಅದೇ ರೀತಿಯಲ್ಲಿಯೇ, ಗಲಾತ್ಯದವರು ಕ್ರಿಸ್ತನಲ್ಲಿ ವಿಶ್ವಾಸವಿಡಬೇಕು, ಹೊರತು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಕ್ಕೆ ತಮಗಿರುವ ಸಾಮರ್ಥ್ಯದ ಮೇಲೆ ಅಲ್ಲ ಎಂಬುದು ಪೌಲನ ಬಯಕೆಯಾಗಿತ್ತು.

**ವಚನ 12. ನೇಮ** (ಧರ್ಮಶಾಸ್ತ್ರ) ವನ್ನು ಅನುಸರಿಸುವ ಮೂಲಕ ಒಬ್ಬನು ತನ್ನ ನೀತಿಯನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುವದು **ನಂಬಿಕೆ**ಯ ತತ್ವಕ್ಕೆ ವಿರುದ್ಧವಾಗಿ ನಿಲ್ಲುತ್ತದೆ (3:12), **ಆದರೆ ಅದರ** ಎಂಬ ಪದಗುಚ್ಛದಲ್ಲಿ ಅದು ಸೂಚಿಸಲ್ಪಟ್ಟಿರುತ್ತದೆ. ಇಲ್ಲಿ ಧರ್ಮಶಾಸ್ತ್ರದ ತತ್ವವು ಏನೆಂದರೆ, **ನೇಮಗಳನ್ನು ಆಚರಿಸಿದವನೇ ಅವುಗಳ ಮೂಲಕ ಬದುಕುವನು** ಎಂಬುದು ಯಾಜಕಕಾಂಡ 18:5ರ ಮೇಲೆ ಆಧಾರವಾಗಿರುತ್ತದೆ. ಲೂಕ 10:28ರ ಹಿಂದೆ ಈ ಉಲ್ಲೇಖನವು ಇರುವದಾಗಿದೆ, ಇದು ತಾನು ಧರ್ಮಶಾಸ್ತ್ರದ ಬೇಡಿಕೆಗಳನ್ನೆಲ್ಲಾ ನೆರವೇರಿಸುವೆನೆಂದು ಮುಗ್ಧತನದಿಂದ ಭಾವಿಸಿಕೊಂಡ ಒಬ್ಬ ಧರ್ಮೋಪದೇಶಕನ ಸನ್ನಿವೇಶದಲ್ಲಿ ಇರುವದಾಗಿದೆ. ಇದು ರೋಮಾ 10:5, 6ರಲ್ಲಿ ಸಹ ಕಂಡು ಬರುವದಾಗಿದ್ದು, ಅಲ್ಲಿ ಪೌಲನು ಪುನಃ ಧರ್ಮಶಾಸ್ತ್ರದ ತತ್ವವನ್ನು ನಂಬಿಕೆಯ ತತ್ವದೊಂದಿಗೆ ವಿರುದ್ಧ ಹೋಲಿಕೆಯನ್ನು ಮಾಡುತ್ತಾನೆ.

**ವಚನಗಳು 13-14. ಕ್ರಿಸ್ತನು . . . ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು.** ಆತನು ದೇವರ ಧರ್ಮಶಾಸ್ತ್ರಕ್ಕೆ ಅವಿಧೇಯರಾಗಿದ್ದರಿಂದ ದಂಡನೆಗೆ

ಗುರಿಯಾಗಿದ್ದವರನ್ನು "ಬಿಡಿಸಿದನು" (ನೋಡಿರಿ 4:5). "ಬಿಡಿಸಿದನು" ಎಂಬುದಕ್ಕಿರುವ ಗ್ರೀಕ್ ಪದವು ἐξαγοράζω (*exagorazō*) ಎಂದಾಗಿದ್ದು, ಅದು "ಮಾರುಕಟ್ಟೆ" (ἀγορά, *agora*) ಯನ್ನು ಸೂಚಿಸುವ ಒಂದು ವಾಣಿಜ್ಯ ಪದವಾಗಿದೆ. ಸರಳ ರೂಪದ ἀγοράζω (*agorazō*) ಎಂಬ ಪದವು ಕೆಲವು ಸಾರಿ ಗುಲಾಮರ ವಿಮೋಚನೆಯನ್ನು ಸೂಚಿಸುತ್ತದೆ.[26] ಕ್ರಿಯಾಪದಗಳಾದ ಎಕ್ಸಾಗೊರಾಝೋ ಮತ್ತು ಅಗೊರಾಝೋ ಎಂಬವುಗಳು ಸಹ "ಖರೀದಿಸು" ಅಥವಾ "ಈಡು" ಎಂಬುದಾಗಿ ಅನುವಾದಿಸಲ್ಪಡಬಹುದಾಗಿದೆ. "ನಾವು" ಎಂಬ ಸರ್ವನಾಮವನ್ನು ಬಳಸುವ ಮೂಲಕ, ಪೌಲನು ಬಹುಶಃ ಧರ್ಮಶಾಸ್ತ್ರದ ದಾಸತ್ವದಲ್ಲಿದ್ದ ತನ್ನನ್ನು ಹಾಗೂ ಜೊತೆಯ ಯೆಹೂದಿ ಕ್ರೈಸ್ತರನ್ನು ಸೂಚಿಸುತ್ತಿರಬಹುದಾಗಿದೆ. ವಿಮೋಚನೆಯ ಭಾಷೆಯ ವಿಷಯದಲ್ಲಿ, Leon Morrisನು ಹೀಗೆ ವ್ಯಾಖ್ಯಾನಿಸಿದನು, "ಇದು ಪಾಪಿಗಳು ತಮ್ಮ ಪಾಪಗಳಿಂದ ಸ್ವತಂತ್ರಪಡಿಸಿಕೊಳ್ಳಲು ಶಕ್ತರಾಗಿರುವದಿಲ್ಲ; ಅವರು ದಾಸರು ಎಂಬ ಸತ್ಯವನ್ನು ಹೊರಗೆ ತರುತ್ತದೆ. ಅವರ ಸ್ವಾತಂತ್ರ್ಯಕ್ಕಾಗಿ ಒಂದು ದೊಡ್ಡ ಈಡು ಕೊಡಲ್ಪಟ್ಟಿರುತ್ತದೆಂಬುದನ್ನು ಸಹ ಒತ್ತಿ ಹೇಳುತ್ತದೆ."[27]

ಯೇಸುವು ನಮ್ಮ ವಿಮೋಚನೆಯನ್ನು ಸಾಧಿಸಿದನು, **ನಮ್ಮ ನಿಮಿತ್ತ ಶಾಪವಾಗಿ** ಮಾರ್ಪಡುವ ಮೂಲಕ - ಅಂದರೆ, ಶಿಲುಬೆಯ ಮೇಲೆ ತನ್ನನ್ನು ಪರ್ಯಾಯವಾಗುವ ಯಜ್ಞವಾಗಿ ಅರ್ಪಿಸಿಕೊಳ್ಳುವ ಮೂಲಕ - ಮಾಡಿದನು. ಪೌಲನು ಈ ವಿನಿಮಯದ ಕುರಿತಾಗಿ 2 ಕೊರಿಂಥ 5:21ರಲ್ಲಿ ಬರೆದನು: "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು." ಪೇತ್ರನು ಹೇಳಿದ್ದೇನೆಂದರೆ ಯೇಸು "ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು" (1 ಪೇತ್ರ 2:24). ಆ ವಾಕ್ಯಭಾಗದಲ್ಲಿ, "ಶಿಲುಬೆ" ಎಂಬುದರ ಬದಲಾಗಿ, ESV ತರ್ಜುಮೆಯು ಹೆಚ್ಚು ಅಕ್ಷರಶಃವಾದ "ಮರದ ಕಂಬ" ಎಂದು ಅನುವಾದಿಸಿರುತ್ತದೆ.

ಕ್ರಿಸ್ತನು ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪವನ್ನು ಹೊತ್ತುಕೊಂಡನು, **ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.** ಗ್ರೀಕ್ ಪದವಾದ ξύλον (*xulon*) ಎಂಬುದು ಒಂದು ಮರ, ಒಂದು ಕಂಬ, ಕಟ್ಟಿಗೆ, ಅಥವಾ ಮರದಿಂದ ಮಾಡಿದ ಒಂದು ವಸ್ತುವನ್ನು (ಉದಾಹರಣೆಗೆ ಒಂದು ಶಿಲುಬೆ ಅಥವಾ ಒಂದು ಸ್ತಂಭ) ಇವುಗಳನ್ನು ಸೂಚಿಸಬಲ್ಲದು.[28] "ಮರ" ಎಂಬುದಕ್ಕಿರುವ ಇಬ್ರಿಯ ಪದವನ್ನು (עֵץ, *'ets*) ಎಂಬ ಪದವು ಅದೇ ರೀತಿಯಲ್ಲಿಯೇ ಬಳಸಲ್ಪಟ್ಟಿರುತ್ತದೆ.[29] ಧರ್ಮೋಪದೇಶಕಾಂಡ 21:23ರ ಮೂಲ ಸನ್ನಿವೇಶದಲ್ಲಿ, ಮರದ ಮೇಲೆ ತೂಗು ಹಾಕುವದೆಂದರೆ ಅದು ಸ್ತಂಭದ ಮೇಲೆ ಶೂಲಕ್ಕೇರಿಸುವದನ್ನು ಸೂಚಿಸುವದಾಗಿತ್ತು. ಮರಣದ ಬಳಿಕ ಆ ವ್ಯಕ್ತಿಗಳಿಗೆ ಅವಮಾನವನ್ನುಂಟು ಮಾಡುವ ಉದ್ದೇಶದಿಂದ ಅನೇಕ ಸಾರಿ ಶವಗಳನ್ನು ಮರಗಳಲ್ಲಿ ಶೂಲಕ್ಕೇರಿಸಲಾಗುತ್ತಿತ್ತು ಅಥವಾ ತೂಗು ಹಾಕಲಾಗುತ್ತಿತ್ತು (ಯೆಹೋಶುವ 8:29; 10:26, 27; 2 ಸಮುವೇಲ 21:6, 9). ಶೂಲಕ್ಕೇರಿಸುವದನ್ನು ಹಿಂಸಿಸಿ ಮರಣವನ್ನುಂಟು ಮಾಡುವದಕ್ಕೋಸ್ಕರ ಸಹ ಬಳಸಲಾಗುತ್ತಿತ್ತು (ಎಜ್ರನು 6:11). ಕಾಲವು ಗತಿಸಿದಂತೆ, ಶೂಲಕ್ಕೇರಿಸುವದು ಶಿಲುಬೆಗೇರಿಸುವಿಕೆಯಾಗಿ ಬದಲಾಗಿತ್ತು - ಇದು ರೋಮನ್ನರು ಕರಗತ ಮಾಡಿಕೊಂಡಿದ್ದ ಒಂದು ಆಚಾರವಾಗಿತ್ತು. ಅದು ವೈಶಿಷ್ಟವಾಗಿ ಗುಲಾಮರನ್ನು ಹಾಗೂ ಅಪರಾಧಿಗಳನ್ನು ಮರಣದಂಡನೆಗೊಳಪಡಿಸುವ ದಾರಿಯಾಗಿ ಬಳಸಲಾಗುತ್ತಿತ್ತು. ಪೌಲನು ಈ ಮುಂಚೆ ಮೂಲತಃ ಶೂಲಕ್ಕೇರಿಸುವದರ ಬಗ್ಗೆ ಮಾತಾಡಿದ ವಾಕ್ಯವನ್ನು ಕ್ರಿಸ್ತನ

ಶಿಲುಬೆಗೇರಿಸಲ್ಪಡುವಿಕೆಗೆ ಅನ್ವಯಗೊಳಿಸಿದನು.[30]

ಈ ಯಜ್ಞವು **ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ ಮಾಡಲ್ಪಟ್ಟಿತು.** ಆದಿಕಾಂಡ 12:3ರಲ್ಲಿ ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನವನ್ನು ಯೇಸುವು ನೆರವೇರಿಸಿದನು, ಆ ವಾಗ್ದಾನವು ಏನೆಂದರೆ ಆತನ ಸಂತತಿಯ ಮೂಲಕವಾಗಿ ಎಲ್ಲಾ ಜನಾಂಗಗಳಿಗೆ ಆಶೀರ್ವಾದವುಂಟಾಗುವದು ಎಂಬುದೆ (ಗಲಾತ್ಯ 3:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಆತನ ಮಾನವ ಪೂರ್ವಿಕತೆಯ ಪ್ರಕಾರವಾಗಿ, ಯೇಸುವು ಅಬ್ರಹಾಮನ ಸಂತಾನದವನಾಗಿದ್ದನು (ಮತ್ತಾಯ 1:1, 2; ಲೂಕ 3:34), ಮತ್ತು ಆತನ ಮೂಲಕವಾಗಿ ಎಲ್ಲಾ ಜನಾಂಗಗಳಿಗೆ ಖಂಡಿತವಾಗಿಯೂ ಆಶೀರ್ವಾದವಾಗಲಿತ್ತು. ಸುವಾರ್ತೆಯು ಎಲ್ಲಾ ಜನಾಂಗಗಳಿಗೋಸ್ಕರ ಇರುತ್ತದೆ (ಮತ್ತಾಯ 28:18–20; ಮಾರ್ಕ 16:15, 16; ಲೂಕ 24:47). ಹಾಗಿದ್ದರೂ, ಆಶೀರ್ವದಿಸಲ್ಪಟ್ಟ ಅನ್ಯಜನರು ಯಾರೆಂದರೆ ಕ್ರಿಸ್ತನಲ್ಲಿ ಹಾಗೂ ಆತನ ಸಭೆಯಲ್ಲಿ ಇರುವವರು ಮಾತ್ರವೇ. ಇಂದು ಯೆಹೂದ್ಯರ ವಿಷಯದಲ್ಲಿಯೂ ಅದು ಅಷ್ಟೇ ಸತ್ಯವಾಗಿರುತ್ತದೆ. ಸುವಾರ್ತೆಗೆ ವಿಧೇಯರಾಗಿರುವವರಿಗೆ "ವಾಗ್ದಾನ ಮಾಡಿದ ಆತ್ಮನು ನಂಬಿಕೆಯ ಮೂಲಕವಾಗಿ ದೊರಕುವನು" (ನೋಡಿರಿ ಅಪೊಸ್ತಲರ ಕೃತ್ಯಗಳು 2:38, 39; ಎಫೆಸ 1:13, 14).

## ಅಬ್ರಹಾಮನಿಗೆ ವಾಗ್ದಾನವು ಧರ್ಮಶಾಸ್ತ್ರಕ್ಕೆ ಮುಂಚೆ ಮಾಡಲ್ಪಟ್ಟಿತು (3:15-18)

**15ಸಹೋದರರೇ, ಲೋಕದ ವ್ಯವಹಾರವನ್ನು ಹಿಡಿದು ಮಾತಾಡುತ್ತೇನೆ. ಸ್ಥಿರಪಡಿಸಿದ ಒಂದು ಒಡಂಬಡಿಕೆಯು ಕೇವಲ ಮನುಷ್ಯನದಾಗಿದ್ದರೂ ಅದನ್ನು ಯಾರೂ ರದ್ದು ಮಾಡುವದಿಲ್ಲ, ಅದಕ್ಕೆ ಹೆಚ್ಚು ಮಾತುಗಳನ್ನು ಕೂಡಿಸುವದಿಲ್ಲ. 16ಒಳ್ಳೇದು, ದೇವರು ಅಬ್ರಹಾಮನಿಗೂ ಅವನ ಸಂತತಿಗೂ ವಾಗ್ದಾನಗಳನ್ನು ಮಾಡಿದನು. ಆತನು ನಿನ್ನ ಸಂತತಿಗಳಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ ನಿನ್ನ ಸಂತತಿಗೆ ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ. ಆ ಒಬ್ಬನು ಕ್ರಿಸ್ತನೇ. 17ನನ್ನ ತಾತ್ಪರ್ಯವೇನಂದರೆ, ದೇವರು ಮೊದಲು ಸ್ಥಿರಪಡಿಸಿದ ಒಡಂಬಡಿಕೆಯನ್ನು ನಾನೂರಮೂವತ್ತು ವರುಷಗಳ ಮೇಲೆ ಬಂದ ಧರ್ಮಶಾಸ್ತ್ರವು ರದ್ದುಮಾಡಿ ಆ ವಾಗ್ದಾನವನ್ನು ವ್ಯರ್ಥಮಾಡುವದಿಲ್ಲ. 18ಆ ಬಾಧ್ಯತೆಯು ಕರ್ಮಮಾರ್ಗದಿಂದ ದೊರೆಯುವದಾದರೆ ಅದು ಇನ್ನು ವಾಗ್ದಾನದಿಂದ ದೊರೆಯುವದಲ್ಲವೆಂದಾಯಿತು; ಆದರೆ ದೇವರು ಅದನ್ನು ಅಬ್ರಹಾಮನಿಗೆ ವಾಗ್ದಾನದ ಮೂಲಕವಾಗಿಯೇ ದಯಪಾಲಿಸಿದ್ದಾನೆ.**

ಪೌಲನು ತನ್ನ ಗಲಾತ್ಯದ ವಾಚಕರು ಹೀಗೆ ಕೇಳುವರೆಂದು ಎದುರು ನೋಡಿದ್ದನು, ಏನೆಂದರೆ "ದೇವರು ಅಬ್ರಹಾಮನಿಗೆ ಹಿಂದಿನ ವಾಗ್ದಾನಗಳ ಮೇಲೆ ಮೋಶೆಯ ಧರ್ಮಶಾಸ್ತ್ರವು ಆದ್ಯತೆ ಪಡೆದುಕೊಳ್ಳುವದಿಲ್ಲವೋ?" ಅವರು ಹೀಗೆ ಸಹ ಕೇಳಬಹದಿತ್ತು, "ಹಾಗಾದರೆ ಮೋಶೆಯ ಧರ್ಮಶಾಸ್ತ್ರವು ಯಾತಕ್ಕೆ [ಕೊಡಲ್ಪಟ್ಟಿತು]?" (3:19) - ಅಂದರೆ, "ಧರ್ಮಶಾಸ್ತ್ರದ ಉದ್ದೇಶವಾದರೂ ಏನು?" ಅಂಥ ಪ್ರಶ್ನೆಗಳಿಗೆ ಅಪೊಸ್ತಲನು ಮೋಶೆಯ ಧರ್ಮಶಾಸ್ತ್ರವು ಜಾರಿಗೆ ಬರುವದಕ್ಕೆ ಬಹಳ ಕಾಲದ ಹಿಂದೆಯೇ ಅಬ್ರಹಾಮನಿಗೆ ದೇವರ ವಾಗ್ದಾನವು ಮಾಡಲ್ಪಟ್ಟಿತು ಎಂದು ಹೇಳುವ ಮೂಲಕ ಪ್ರತ್ಯುತ್ತರವನ್ನು ಕೊಟ್ಟಿರಬಹುದು. ದೇವರ ವಾಗ್ದಾನವು ಧರ್ಮಶಾಸ್ತ್ರದಿಂದ ಬದಲಾಗುವದಕ್ಕಾಗಲಿ ಅಥವಾ ರದ್ದಾಗುವದಕ್ಕಾಗಲಿ

ಸಾಧ್ಯವಿರಲಿಲ್ಲ ಎಂಬುದನ್ನು ಆತನು ದೃಢೀಕರಣ ಮಾಡಿದ್ದನು.

**ವಚನ 15.** ಪೌಲನು 3:1ರಲ್ಲಿ "ಬುದ್ಧಿಯಿಲ್ಲದ ಗಲಾತ್ಯದವರೇ" ಎಂದು ತನ್ನ ವಾಚಕರನ್ನು ಸಂಬೋಧಿಸಿದ್ದನಾದರೂ, ಇಲ್ಲಿ ಆತನು ಹೆಚ್ಚು ಸಕಾರಾತ್ಮಕವಾದ **ಸಹೋದರರೇ** ಎಂಬ ಪದವನ್ನು ಬಳಸುತ್ತಾನೆ. ಆತನು ಬರೆದ ಪತ್ರಕ್ಕೆ ತನ್ನ ವಾಚಕರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿ ಸತ್ಯ ಸುವಾರ್ತೆಯ ಕಡೆಗೆ ಹಿಂದಿರುಗುವರೆಂಬುದು ಪೌಲನ ನಿರೀಕ್ಷೆಯಾಗಿತ್ತು. "ಸಹೋದರರೇ" ಎಂಬ ಪದವು ಅನೇಕ ಸಾರಿ ಪತ್ರಿಕೆಯಲ್ಲಿ ಹೊಸ ವಿಭಾಗದ (ಅಥವಾ ಉಪವಿಭಾಗಗಳ) ಆರಂಭಕ್ಕೆ ಗುರುತಾಗಿರುತ್ತದೆ (1:11; 3:15; 4:12, 31; 5:11, 13; 6:1, 18).

ಪೌಲನು ತನ್ನ ನಿರ್ಣಯಗಳಿಗೆ ಬರುವದಕ್ಕಾಗಿ ಗಲಾತ್ಯದವರ ಆತ್ಮೀಕ ಅನುಭವ (3:1-5) ಮಾತ್ರವಲ್ಲದೆ ಹಳೆಯ ಒಡಂಬಡಿಕೆಯ ಶಾಸ್ತ್ರಗಳನ್ನು ಸಹ ಬಳಸಿದನು (3:6-14). ಈ ಹಂತದಲ್ಲಿ, ಆತನು **ಲೋಕದ ವ್ಯವಹಾರವನ್ನು ಹಿಡಿದು** ಮಾತಾಡುವದಕ್ಕೆ ಆರಂಭಿಸಿದನು; ಅಂದರೆ, ಆತನು ಮಾನವ ಸಂಬಂಧಗಳ ತತ್ವಗಳನ್ನು ಅನ್ವಯಿಸಿದನು (ನೋಡಿರಿ ರೋಮಾ 7:1-3; ಎಫೆಸ 5:22-33). NIV ಮತ್ತು NLT ತರ್ಜುಮೆಗಳಲ್ಲಿರುವ ಪ್ರಕಾರ, ಇದು "ದೈನಂದಿನ ಜೀವಿತದಿಂದ ಆಯ್ದುಕೊಂಡ ಉದಾಹರಣೆ" ಆಗಿರುತ್ತದೆ. ಅಪೊಸ್ತಲನು ಹೀಗೆ ಹೇಳಿದನು, **ಸ್ಥಿರಪಡಿಸಿದ ಒಂದು ಒಡಂಬಡಿಕೆಯು ಕೇವಲ ಮನುಷ್ಯನದಾಗಿದ್ದರೂ ಅದನ್ನು ಯಾರೂ ರದ್ದು ಮಾಡುವದಿಲ್ಲ, ಅದಕ್ಕೆ ಹೆಚ್ಚು ಮಾತುಗಳನ್ನು ಕೂಡಿಸುವದಿಲ್ಲ.** ಮನುಷ್ಯರೊಳಗೆ, ಒಂದು ವಾಗ್ದಾನವು ಸ್ಥಿರಪಡಿಸಿದರೆ ಅಥವಾ ಪ್ರಮಾಣೀಕರಿಸಲ್ಪಟ್ಟರೆ, ಅದು ನೆರವೇರುವ ತನಕವೂ ಬದಲಾಗದೆ ಉಳಿದುಕೊಳ್ಳುತ್ತದೆ. ಈ ವಾಸ್ತವಾಂಶವನ್ನು ದೇವರು ಅಬ್ರಹಾಮನಿಗೆ ಮಾಡಿದ ಒಡಂಬಡಿಕೆಯೊಂದಿಗೆ ಸುಲಭವಾಗಿ ಅನ್ವಯಗೊಳಿಸಬಹುದಾಗಿದೆ. ಪೌಲನು ಹೋಲಿಕೆಯನ್ನು ಮಾಡುವದರಲ್ಲಿನ ಸಾಮಾನ್ಯವಾದ ಆಲೋಚನೆಯು ಸ್ಪಷ್ಟವಾಗಿರುತ್ತದಾದರೂ, ಅದರ ನಿಖರವಾದ ಅರ್ಥನಿರೂಪನೆಯು ವಾಗ್ವಾದಕ್ಕೊಳಪಟ್ಟಿರುತ್ತದೆ.

3:15ರಲ್ಲಿ "ಒಡಂಬಡಿಕೆ" ಎಂದು ಅನುವಾದಿಸಲ್ಪಟ್ಟಿರುವ διαθήκη (*diathēkē*) ಎಂಬ ಪದವು, ಅದರ ಬದಲಾಗಿ "ಉಯಿಲು" (NRSVಯಲ್ಲಿರುವ ಪ್ರಕಾರ) ಅನುವಾದಿಸಲ್ಪಡತಕ್ಕದ್ದೋ? Josephusನ ಬರಹಗಳಲ್ಲಿ, *ಡಿಯಾಥೆಕೇ* ಎಂಬುದರ ಅರ್ಥವು ಯಾವಾಗಲೂ "ಉಯಿಲು" ಎಂದಾಗಿದ್ದು ಇದೇ ಪದವನ್ನು ಪೌಲನು ಬಳಸಿರುತ್ತಾನೆ. LXXನಲ್ಲಿ, ಈ ಪದವು ಅನೇಕ ಸಾರಿ "ಒಡಂಬಡಿಕೆ" ಎಂಬುದಕ್ಕೆ (בְּרִית, *b<sup>e</sup>rith*) ಎಂಬುದಕ್ಕೆ ಪರ್ಯಾಯವಾಗಿ ಬಳಸಲ್ಪಟ್ಟಿರುತ್ತದೆ.[31] ಇಲ್ಲಿ ಈ ಪದವನ್ನು ಹೇಗೆ ಅನುವಾದಿಸತಕ್ಕದ್ದು? ಅದು "ಉಯಿಲು" ಎಂದಾಗಿರತಕ್ಕದ್ದೋ ಅಥವಾ "ಒಡಂಬಡಿಕೆ" ಎಂದಾಗಿರತಕ್ಕದ್ದೋ? 15 ಮತ್ತು 17 ವಚನಗಳಲ್ಲಿ *ಡಿಯಾಥೆಕೇ* ಎಂಬುದರ ಅರ್ಥವು "ಒಡಂಬಡಿಕೆ" ಎಂದಾಗಿರುತ್ತದೆಂದು Morrisನು ವಾದಿಸುತ್ತಾನೆ. ಆತನು ಹೀಗೆ ಹೇಳಿದನು, "ಸೂಕ್ತವಾದ ರೀತಿಯಲ್ಲಿ ಸ್ಥಿರಪಡಿಸಲ್ಪಟ್ಟಿರುವ ಒಡಂಬಡಿಕೆಯು ಎರಡೂ ಪಕ್ಷದವರು ಒಂದು ಒಮ್ಮತಕ್ಕೆ ಬಂದಿದ್ದಾರೆ ಮತ್ತು ಒಡಂಬಡಿಕೆಯು ಒಮ್ಮತದ ಶರತ್ತುಗಳನ್ನು ವ್ಯಕ್ತಪಡಿಸುವದಾಗಿದೆ ಎಂದರ್ಥವನ್ನು ಕೊಡುತ್ತದೆ."[32]

ಈ ಪದವನ್ನು "ಉಯಿಲು" ಎಂಬುದಾಗಿ ಅನುವಾದಿಸಬೇಕೆಂದು ಬೆಂಬಲಿಸುವ ಎರಡು ವಾದಗಳು ಈ ರೀತಿಯಾಗಿರುತ್ತವೆ: (1) ಪೌಲನು ಈ ಪದವನ್ನು ಅದರ ಸಾಧಾರಣವಾದ ಅರ್ಥದಲ್ಲಿ ಬಳಸಿದನು (Josephusನು ಮಾಡಿದ ರೀತಿಯಲ್ಲಿಯೇ), ಮತ್ತು (2) ಸನ್ನಿವೇಶದಲ್ಲಿ "ಬಾಧ್ಯತೆಯ" ಭಾಷೆಯು ಕಂಡು ಬರುತ್ತದೆ (3:18). ಪದವನ್ನು "ಉಯಿಲು" ಎಂದು

ಅನುವಾದಿಸಬೇಕೆಂಬುದನ್ನು ಬೆಂಬಲಿಸುತ್ತಾ, Bolesನು ಹೀಗೆ ಹೇಳುತ್ತಾನೆ, "ಲೌಕಿಕವಾದ ಅರ್ಥದಲ್ಲಿ 'ಉಯಿಲು' ವಿಷಯದಲ್ಲಿ ಏನು ಸತ್ಯವೋ ಆತ್ಮೀಕ ಅರ್ಥದಲ್ಲಿ 'ಒಡಂಬಡಿಕೆ' ವಿಷಯದಲ್ಲಿ ಅಷ್ಟೇ ಸತ್ಯವಾಗಿರುತ್ತದೆ: ಒಮ್ಮೆ ಸ್ಥಿರಪಡಿಸಲ್ಪಟ್ಟರೆ (ಅಥವಾ 'ಋಜುವಾತುಗೊಂಡರೆ') ಅವುಗಳನ್ನು ಯಾರೂ ತಳ್ಳಿ ಹಾಕುವದಕ್ಕಾಗಲಿ (*ಅಥೆಟೆಯಿ*, 'ರದ್ದುಗೊಳಿಸಲು') ಅಥವಾ ಅವುಗಳಿಗೆ ಹೆಚ್ಚಿನದನ್ನು ಕೂಡಿಸುವದಕ್ಕೆ (*ಎಪಿಡಿಯಾಟಾಸ್ಸೇಟಾಯ್*) ಸಾಧ್ಯವಿಲ್ಲ."[33] ಹೀಗೆ, ವಾದಗಳು ಮಾಡಲ್ಪಡುತ್ತವೆ, ಆದರೆ ಹೊರಬರುವ ಯಾವದೂ ಮುಖ್ಯವಾಗಿರುವದಿಲ್ಲ. ಪೌಲನು ಹೇಳಬಯಸಿದ ಅಂಶವು ಏನೆಂದರೆ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ನೆಲೆಯಾಗಿತ್ತು ಮತ್ತು ಅದು ನೆರವೇರಿಸಲ್ಪಟ್ಟಿತು ಎಂಬುದೆ.

ಎರಡನೆಯ ಪ್ರಶ್ನೆಯು ಪೌಲನ ಹೇಳಿಕೆಗಿರುವ ಐತಿಹಾಸಿಕ ಹಿನ್ನಲೆಗೆ ಸಂಬಂಧಪಟ್ಟದ್ದಾಗಿದೆ: ಆತನು ಗ್ರೀಕ್ ಅಥವಾ ರೋಮನ್ನರ ಕಾನೂನಿನ ವಿಚಾರವನ್ನು ತೆಗೆದುಕೊಂಡಿದ್ದನೋ? William M. Ramsayನು ಅದು ಗ್ರೀಕ್ ಹಿನ್ನಲೆಯನ್ನು ಹೊಂದಿರಬಹುದೆಂದು ಒಲವು ತೋರುತ್ತಾನೆ. ಆತನು ಅಭಿಪ್ರಾಯ ಪಟ್ಟಿದ್ದೇನೆಂದರೆ, ಗ್ರೀಕ್ ಜಗತ್ತಿನ ಯಾವದೇ ಪಟ್ಟಣದಲ್ಲಿ, ಒಂದು ಉಯಿಲು ಸ್ಥಿರಪಡಿಸಲ್ಪಡಬೇಕಾದರೆ ಅದು ಒಂದು ಮೂಲ ಅಥವಾ ಪ್ರಮಾಣೀಕರಿಸಿದ ಪ್ರತಿಯು ಅಧಿಕೃತವಾಗಿ ನೊಂದಣಿ ಮಾಡಿಸಲ್ಪಟ್ಟು ಸಾರ್ವಜನಿಕ ದಾಖಲೆಗಳಲ್ಲಿ ಇಡಲ್ಪಡುವದರ ಮೇಲೆ ಆಧಾರವಾಗಿರುತ್ತಿತ್ತು. ಅದಕ್ಕೆ ಮುಂಚಿನ ಉಯಿಲೊಂದು ಇರುವದಾದಲ್ಲಿ, ಈ ನಂತರದಲ್ಲಿ ಮಾಡಲ್ಪಟ್ಟ ಉಯಿಲು ತಿರಸ್ಕರಿಸಲ್ಪಡುತ್ತಿತ್ತು ಅಥಾವಾ ರದ್ದುಗೊಳಿಸಲ್ಪಡುತ್ತಿತ್ತು, ಅದು ಮುಂಚೆ ಮಾಡಲ್ಪಟ್ಟ ಉಯಿಲನಲ್ಲಿ ಹಸ್ತಕ್ಷೇಪ ಮಾಡದೆ ಇದ್ದರೆ ಮಾತ್ರವೇ ಊರ್ಜಿತಗೊಳಿಸಲ್ಪಡುತ್ತಿತ್ತು. ಅದಕ್ಕೆ ತದ್ವಿರುದ್ಧವಾಗಿ, ಉಯಿಲು ಬರೆದವನು ಜೀವಂತವಿರುವಷ್ಟು ಕಾಲ ರೋಮನ್ ಉಯಿಲೊಂದನ್ನು ಆಗಾಗ ಬದಲಾಯಿಸುವದಕ್ಕೆ ಸಾಧ್ಯವಿರುತ್ತಿತ್ತು, ಆದರೆ ಆತನು ಮರಣಿಸಿದರೆ ಅದನ್ನು ತಿದ್ದುವದಕ್ಕೆ ಸಾಧ್ಯವಿರಲಿಲ್ಲ (ನೋಡಿರಿ ಇಬ್ರಿಯ 9:15-17; NIV). Ramsayನು ಹೀಗೆ ಹೇಳಿದನು, "ಕಡೇ ಉಯಿಲು ಮಿಕ್ಕ ಎಲ್ಲಾ ಉಯಿಲುಗಳನ್ನು ರದ್ದುಗೊಳಿಸುವದಾಗಿತ್ತು."[34]

**ವಚನ 16.** ದೇವರ ಆಶೀರ್ವಾದಗಳನ್ನು ಸಂಪಾದಿಸಿಕೊಳ್ಳಲು ಸಾಧ್ಯವಿರಲಿಲ್ಲ, ಆದರೆ ಆತನ ವಾಗ್ದಾನದ ಫಲಿತವಾಗಿರುತ್ತವೆ ಎಂಬುದಾಗಿ ಪೌಲನು ಒತ್ತಿ ಹೇಳಿದನು: **ಒಳ್ಳೇದು, ದೇವರು ಅಬ್ರಹಾಮನಿಗೂ ಅವನ ಸಂತತಿಗೂ ವಾಗ್ದಾನಗಳನ್ನು ಮಾಡಿದನು. ಆತನು ನಿನ್ನ ಸಂತತಿಗಳಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ ನಿನ್ನ ಸಂತತಿಗೆ ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ. ಆ ಒಬ್ಬನು ಕ್ರಿಸ್ತನೇ.**

ಅಪೊಸ್ತಲನ ಹೇಳಿಕೆಯು "ಸಂತತಿ" ಎಂಬ ವಚನ (ಅದು ಏಕವಚನವಾಗಿರಲಿ ಅಥವಾ ಬಹುವಚನವಾಗಿರಲಿ) ಪದಗಳಿಗೆ ರಬ್ಬಿಯರು ನೀಡಿರುವ ವಿವರಣೆಯೊಂದಿಗೆ ಹೋಲಿಸಲ್ಪಡಬಹುದಾಗಿದೆ. "ಸಂತತಿ" ಅಥವಾ ಸಂತಾನದವರು ಎಂಬ ಇಬ್ರಿಯ ಪದವು (זֶרַע, *zera'*), LXXನಲ್ಲಿರುವ ಅದರ ಸಮಾನ ಪದವಾದ ಗ್ರೀಕ್ ಪದ (σπέρμα, *sperma*) ಎಂಬುದರೊಂದಿಗೆ ಜೊತೆಗೂಡಿ, ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನದ ಕುರಿತಾಗಿ ಆದಿಕಾಂಡ ಪುಸ್ತಕದುದ್ದಕ್ಕೂ ಇರುವ ಕಥನದಲ್ಲಿ ಬಳಸಲ್ಪಟ್ಟಿರುತ್ತದೆ.[35] ಪದವು ವಚನದಲ್ಲಿ ಏಕವಚನವಾಗಿದೆ, ಆದರೆ ಅದು ಅನೇಕ ಸಾರಿ ಒಂದು ಸಮುದಾಯವಾಚಕ ಪದವಾಗಿ ಬಳಸಲ್ಪಟ್ಟಿರುತ್ತದೆ. ವಾಸ್ತವಿಕದಲ್ಲಿ, NASBಯು ಸಾಮಾನ್ಯವಾಗಿ ಈ ಪದವನ್ನು

"ಸಂತಾನದವರು" ಎಂದು ಅನುವಾದಿಸುತ್ತದೆ.[36] ಆದಿಕಾಂಡ 22:17, 18 ವಚನಗಳು ಅದಕ್ಕೆ ಹೊರತಾಗಿರುತ್ತವೆ, ಮತ್ತು ಪೌಲನು ನಿರ್ದಿಷ್ಟವಾಗಿ ಈ ವಾಕ್ಯಭಾಗವನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯುತ್ತಾನೆ. ಅಲ್ಲಿ ದೇವರು ಅಬ್ರಹಾಮನಿಗೆ ಹೀಗೆ ಹೇಳಿದ್ದನು, "ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವದು" (ನೋಡಿರಿ ಆದಿಕಾಂಡ 26:4; 28:14; NKJV).

ಒಬ್ಬ ಪ್ರೇರಿತ ಅಪೊಸ್ತಲನಾಗಿ, "ಸಂತತಿ" ಎಂಬುದು ಏಕವಚನವಾಗಿದೆ ಎಂಬುದರಲ್ಲಿನ ಮಹತ್ವಪೂರ್ಣತೆಯನ್ನು ಕಂಡಿದ್ದನು ಮತ್ತು ಅದನ್ನು ಯೇಸು ಕ್ರಿಸ್ತನಿಗೆ ಹೋಲಿಕೆ ಮಾಡಿದನು. ಈ ಒಂದು "ಸಂತತಿ" ಮುಖಾಂತರವಾಗಿ - ಕ್ರಿಸ್ತನಲ್ಲಿ - "ಎಲ್ಲಾ ಜನಾಂಗಗಳಿಗೂ [ಆಶೀರ್ವಾದವುಂಟಾಗಲಿತ್ತು]" (3:8), ಮತ್ತು ಆ "ದೇವರ ಪುತ್ರರಾಗಿ" ಇರುವವರೆಲ್ಲರು "[ದೇವರ] ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ" (3:26-29).

**ವಚನ 17.** ಪೌಲನು 3:15ರಲ್ಲಿ ಲೋಕವ್ಯವಹಾರದಿಂದ ಆರಿಸಿಕೊಂಡ ದೃಷ್ಟಾಂತವನ್ನು ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯೊಂದಿಗೆ ಅನ್ವಯಗೊಳಿಸಿದನು: **ನನ್ನ ತಾತ್ಪರ್ಯವೇನಂದರೆ, ದೇವರು ಮೊದಲು ಸ್ಥಿರಪಡಿಸಿದ ಒಡಂಬಡಿಕೆಯನ್ನು ನಾನೂರಮೂವತ್ತು ವರುಷಗಳ ಮೇಲೆ ಬಂದ ಧರ್ಮಶಾಸ್ತ್ರವು ರದ್ದುಮಾಡಿ ಆ ವಾಗ್ದಾನವನ್ನು ವ್ಯರ್ಥಮಾಡುವದಿಲ್ಲ.** ಉಯಿಲುಗಳು ಒಂದು ಸಾರಿ ಸ್ಥಿರಪಡಿಸಲ್ಪಟ್ಟ ಬಳಿಕ ಮಾರ್ಪಡಿಸಲಾರದವುಗಳಾಗಿದ್ದರೆ, ದೇವರು ಮನುಷ್ಯರೊಂದಿಗೆ ಮಾಡಿಕೊಂಡ ಒಡಂಬಡಿಕೆಗಳು ಇನ್ನೂ ಎಷ್ಟೋ ತಿದ್ದುವದಕ್ಕೆ ಸಾಧ್ಯವಿಲ್ಲದವುಗಳಲ್ಲವೇ! ಈ ತರ್ಕವು ಸೀನಾಯ್ ಪರ್ವತದಲ್ಲಿ ದೇವರು ಮೋಶೆಗೆ ಧರ್ಮಶಾಸ್ತ್ರವನ್ನು ಕೊಟ್ಟಿದ್ದು ಯಾವ ವಿಧದಲ್ಲಿಯೂ ಆತನು ಅಬ್ರಹಾಮನೊಂದಿಗೆ ಈ ಮುಂಚೆ ಮಾಡಿಕೊಂಡಿದ್ದ ಒಡಂಬಡಿಕೆಯನ್ನು ರದ್ದುಗೊಳಿಸುವದಿಲ್ಲ ಎಂಬುದನ್ನು ಒತ್ತಿ ಹೇಳುತ್ತದೆ. ಆತನು ಅಬ್ರಹಾಮನ ಸಂಗಡ ಮಾಡಿಕೊಂಡಿದ್ದ ಒಡಂಬಡಿಕೆಯು ಮೊದಲು ಕೊಡಲ್ಪಟ್ಟಿತ್ತು ಮತ್ತು ಧರ್ಮಶಾಸ್ತ್ರಕ್ಕಿಂತ ಆದ್ಯತೆಯನ್ನು ಹೊಂದಿತ್ತು.[37]

ಮೇಲಕ್ಕೆ ಮಾತ್ರ ಓದುವದಾದರೆ, ವಾಕ್ಯಭಾಗವು ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನ ಹಾಗೂ ಮೋಶೆಗೆ ಧರ್ಮಶಾಸ್ತ್ರವು ಕೊಡಲ್ಪಡುವದರ ನಡುವೆ 430 ವರ್ಷಗಳ ಅಂತರವಿರುವದಾಗಿ ಸೂಚಿಸುವಂತೆ ಕಾಣಿಸುತ್ತದೆ. ಈ ಮರುಸೃಷ್ಟಿಯಲ್ಲಿರುವ ಸಮಸ್ಯೆಯು ಏನೆಂದರೆ, ವಿಮೋಚನಕಾಂಡ 12:40, 41ರ ಇಬ್ರಿಯ ವಾಕ್ಯದ ಪ್ರಕಾರ, ಇಸ್ರಾಯೇಲ್ಯರು ಐಗುಪ್ತದಲ್ಲಿ 430 ವರ್ಷಗಳನ್ನು ಕಳೆದರು. ಈ ಅಂಕೆಯು ಬೇರೆ ಕಡೆಯಲ್ಲಿ ಅವರು ಐಗುಪ್ತದಿಂದ ಮಾಡುವ ಪ್ರಯಾಣದ ಅವದಿಯನ್ನು ಸೂಚಿಸುವಾಗ ತಿಳಿಸಲ್ಪಟ್ಟಿರುವ "400" ಪೂರ್ಣಾಂಕಕ್ಕೆ ಹೊಂದಿಕೆಯಾಗುತ್ತದೆ (ಆದಿಕಾಂಡ 15:13; ಅಪೊಸ್ತಲರ ಕೃತ್ಯಗಳು 7:6).

ಸಂಖ್ಯೆಯಲ್ಲಿನ ಈ ವ್ಯತ್ಯಾಸಕ್ಕೆ ಇರುವ ಒಂದು ವಿವರಣೆಯು ಏನೆಂದರೆ ಪೌಲನು ಇಲ್ಲಿ "ಕೇವಲ ಒಂದು ತಕ್ಕದಾದ ಪ್ರಮಾಣದ ಕಾಲವನ್ನು ಸೂಚಿಸುತ್ತಿದ್ದಾನಷ್ಟೆ - ಇಸ್ರಾಯೇಲ್ಯರು ಈ ಕಾಲಾವದಿಯ ತನಕ ಐಗುಪ್ತದಲ್ಲಿದ್ದರು ಮತ್ತು ಅವರ ಮೂಲಪಿತೃಗಳು ಅಲ್ಲಿ ಜೀವಿಸಿದ್ದ ನಂತರದಲ್ಲಷ್ಟೆ ಇದು ಆರಂಭಗೊಂಡಿತ್ತು."[38] ಅದಕ್ಕೆ ಸಂಬಂಧಿಸಿದ ಆಲೋಚನೆಯು ಏನೆಂದರೆ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ಅನಂತರದಲ್ಲಿ ಪುನಃ ಯಾಕೋಬನಿಗೆ ತಿಳಿಸಲ್ಪಡುತ್ತದೆ (ಆದಿಕಾಂಡ 28:14), ಮತ್ತು ಯಾಕೋಬನ ಕಾಲದಲ್ಲಿಯೇ ಇಸ್ರಾಯೇಲ್ಯರು ಐಗುಪ್ತಕ್ಕೆ ಹೋಗಿ ನೆಲೆಸಿದ್ದರು.[39]

ಇನ್ನೊಂದು ಸಾಧ್ಯತೆಯು ಏನೆಂದರೆ ಪೌಲನು LXXನಲ್ಲಿರುವ ವಿಮೋಚನಕಾಂಡ

12:40, 41 ವಚನಗಳನ್ನು ಬಳಸಿದನು, ಅದು ಮೂಲಪಿತೃಗಳು ಕಾನಾನಿನಲ್ಲಿ ಕಳೆದ ಕಾಲ ಹಾಗೂ ಇಸ್ರಾಯೇಲ್ಯರು ಐಗುಪ್ತದಲ್ಲಿದ್ದ ಕಾಲ ಎರಡಕ್ಕೂ 430 ವರ್ಷಗಳನ್ನು ಅನ್ವಯಿಸುತ್ತದೆ. ಹಾಗಿರುವದಾದಲ್ಲಿ, ಅಪೊಸ್ತಲನು ಪ್ರಸ್ತಾಪಿಸಿದ 430 ವರ್ಷಗಳು ವಾಗ್ದಾನ ಮಾಡಲ್ಪಟ್ಟ ಕಾಲದಿಂದ ಹಿಡಿದು ಧರ್ಮಶಾಸ್ತ್ರದ ವರೆಗಿನ ಕಾಲಾವಧಿಯನ್ನು ಸೂಚಿಸುತ್ತದೆ. ಈ ಪರಿಹಾರದಲ್ಲಿರುವ ಸಮಸ್ಯೆಯು ಏನೆಂದರೆ ಇದು ಆದಿಕಾಂಡ 15:13 ಮತ್ತು ಅಪೊಸ್ತಲರ ಕೃತ್ಯಗಳು 7:6ರಲ್ಲಿ ಐಗುಪ್ತದೊಳಗೆ 400 ವರ್ಷಗಳನ್ನು ಕಳೆದರು ಎಂಬುದಕ್ಕೆ ಉತ್ತಮವಾಗಿ ಹೊಂದಾಣಿಕೆಯಾಗುವದಿಲ್ಲ.

ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಗೆ ಸಂಬಂಧಿಸಿದಂತೆ "ಸ್ಥಿರಪಡಿಸಿದ" ಎಂಬ ಪದವು ಯಾವ ಅರ್ಥವನ್ನು ಹೊಂದಿರುತ್ತದೆ? ಆಂಗ್ಲದ "ಸ್ಥಿರಪಡಿಸಿದ" ಎಂಬ ಪದವು ಈ ಸನ್ನಿವೇಶದಲ್ಲಿ ಎರಡು ಸಾರಿ ಕಾಣಿಸಿಕೊಳ್ಳುತ್ತದೆ. 3:15ರಲ್ಲಿ, ಅದು ಗ್ರೀಕ್ ಭಾಷೆಯ κυρόω (*kuroō*) ಎಂಬ ಪದದಿಂದ ಅನುವಾದಿಸಲ್ಪಡುವದಾಗಿದ್ದು, ಅದರರ್ಥವು "ಪ್ರಮಾಣೀಕರಿಸು," "ದೃಢಪಡಿಸು," ಅಥವಾ "ಕಾನೂನಾತ್ಮಕವಾಗಿ ಸಿಂಧುಗೊಳಿಸು" ಎಂದಾಗಿರುತ್ತದೆ. 3:17ರಲ್ಲಿ ಬಳಸಲಾಗಿರುವ ಪದವು "ಮೊದಲು ಸ್ಥಿರಪಡಿಸಿದ" ಎಂದು ಅನುವಾದಿಸಲ್ಪಟ್ಟಿದ್ದು, ಅದು προκυρόω (*prokuroō*) ಎಂಬ ಸಂಬಂಧಿತ ಪದದಿಂದ ಬಂದದ್ದಾಗಿದೆ, ಅದರರ್ಥವು "ಮುಂಚಿತವಾಗಿಯೇ ಪ್ರಮಾಣೀಕರಿಸಲ್ಪಟ್ಟಿದ್ದು."[40] ದೇವರು ಅಬ್ರಹಾಮನ ಸಂಗಡ ಮಾಡಿಕೊಂಡ ಒಡಂಬಡಿಕೆಗೆ ಅನ್ವಯಿಸುವದಾದರೆ, ಈ ಮಾತುಗಳು ಅಬ್ರಹಾಮನ ಸಂಗಡ ದೇವರು ಮಾಡಿದ ಪ್ರಮಾಣವನ್ನು ಸೂಚಿಸುವ ಸಾಧ್ಯತೆಯಿರುತ್ತದೆ. ಇಬ್ರಿಯ 6:13 ಹೀಗೆ ಹೇಳುತ್ತದೆ, "ದೇವರು ಅಬ್ರಹಾಮನಿಗೆ ವಾಗ್ದಾನಮಾಡಿದಾಗ ತನಗಿಂತ ಹೆಚ್ಚಿನವನ ಆಣೆಯಿಡುವದಕ್ಕಾಗದೆ ಇದ್ದದರಿಂದ ತನ್ನಾಣೆಯಿಟ್ಟು." ಈ ಘಟನೆಯ ಕಥನವು ಆದಿಕಾಂಡ 22:15-18ರಲ್ಲಿ ಸಿಕ್ಕುತ್ತದೆ.

ದೇವರು ಸುಳ್ಳಾಡುವದಕ್ಕೆ ಸಾಧ್ಯವಿಲ್ಲವಾದರೂ (ಇಬ್ರಿಯ 6:18), ಅಂಥ ದೃಢೀಕರಣದ ಉದ್ದೇಶವು ಸಾಂತ್ವನ ಹಾಗೂ ನಿರೀಕ್ಷೆಯನ್ನು ಕೊಡುವದೇ ಆಗಿತ್ತು. ನಿರೀಕ್ಷೆಯು ಕ್ರೈಸ್ತ ನಂಬಿಕೆಯ ಒಂದು ಅತ್ಯಾವಶ್ಯಕವಾದ ಅಂಶವಾಗಿರುತ್ತದೆ (ಇಬ್ರಿಯ 11:1). ದೆವ್ವಗಳು ದೇವರಲ್ಲಿ ನಂಬಿಕೆ ಹೊಂದಿವೆ ಆದರೆ ಅವುಗಳಿಗೆ ನಿರೀಕ್ಷೆಯು ಇರುವದಿಲ್ಲ (ಯಾಕೋಬ 2:19). ನಿರೀಕ್ಷೆಯು ನೂತನ ಜನ್ಮ ಹಾಗೂ ಅದು ಉಂಟು ಮಾಡುವ ರಕ್ಷಣೆಯ ನೇರವಾದ ಫಲಿತವಾಗಿರುತ್ತದೆ (1 ಪೇತ್ರ 1:3, 13).

**ವಚನ 18.** ಹಿಂದಿನ ವಾದಗಳನ್ನು ಆಧರಿಸಿ, ಪೌಲನು ಮುಕ್ತಾಯಕ್ಕೆ ಬಂದದ್ದೇನೆಂದರೆ ದೇವರು **ಅಬ್ರಹಾಮನಿಗೆ ಮಾಡಿದ ವಾಗ್ದಾನ**ವು ತನ್ನಷ್ಟಕ್ಕೇ ಸಾಕಾದದ್ದಾಗಿತ್ತು; ಮೋಶೆಯ **ಧರ್ಮಶಾಸ್ತ್ರ**ವು ಅದಕ್ಕೆ ಏನನ್ನೂ ಕೂಡಿಸುವದಕ್ಕಾಗಲಿಲ್ಲ. ಹೊಸ ಒಡಂಬಡಿಕೆಯ ಅಡಿಯಲ್ಲಿ ದೇವರ ಜನರಿಗಿರುವ **ಬಾಧ್ಯತೆ**[41]ಯು ಧರ್ಮಶಾಸ್ತ್ರ ಮೇಲಲ್ಲ, ಆದರೆ ಆತನು "ಅಬ್ರಹಾಮನಿಗೆ" ಮಾಡಿದ ವಾಗ್ದಾನದ ಮೇಲೆ ಆಧಾರವಾಗಿತ್ತು (ಮತ್ತು ಆಗಿರುತ್ತದೆ). ಧರ್ಮಶಾಸ್ತ್ರವು ರಕ್ಷಣೆಗೆ ಅಗತ್ಯವಾದ ಹೆಚ್ಚಿನದನ್ನು ಒಳಗೊಂಡಿರುವದಾದಲ್ಲಿ, ದೇವರ "ವಾಗ್ದಾನವು ಒಂದು ವಾಗ್ದಾನವಾಗಿ ಕೊರತೆಯುಳ್ಳದ್ದು ಎಂದಾಗುತ್ತದೆ."[42]

ಈ ಆಲೋಚನೆಗಳಿಂದ ತೋರಿ ಬರುವದೇನೆಂದರೆ, ದೇವರು ಮಾನವರೊಂದಿಗೆ ನಡಿಸಿದ ವ್ಯವಹಾರದ ಆರಂಭದಿಂದಲೂ, ದೇವರು ಬಯಸುವದೆಲ್ಲದರ ತಿರುಳು ಅಥವಾ ತಾತ್ಪರ್ಯವು ಯಾವಾಗಲೂ ನಂಬಿಕೆಯೇ ಆಗಿರುತ್ತದೆ. ಖಂಡಿತವಾಗಿಯೂ, ನಂಬಿಕೆಯು ಮನುಷ್ಯನ ಪ್ರತಿಕ್ರಿಯೆಯಿಂದ, ಆಯಾ ಕಾಲದಲ್ಲಿ ದೇವರು ಹೇಳುವಂಥದಕ್ಕೆ

ವಿಧೇಯವಾಗುವಿಕೆ ಅಥವಾ ಅವಿಧೇಯವಾಗುವಿಕೆಯಲ್ಲಿ ಪರೀಕ್ಷಿಸಲ್ಪಡುತ್ತದೆ. ಇಬ್ರಿಯರಿಗೆ ಪತ್ರಿಕೆಯ ಲೇಖಕನ ಪ್ರಕಾರ, ಹೆಬೇಲನ ಯಜ್ಞವು ನಂಬಿಕೆಯ ಪ್ರತಿಕ್ರಿಯೆಯಾಗಿತ್ತು (ಇಬ್ರಿಯ 11:4) - ಅದೇ ರೀತಿಯೇ ನೋಹನನು ನಾವೆಯನ್ನು ಕಟ್ಟಿದ್ದು (ಇಬ್ರಿಯ 11:7), ಅಬ್ರಹಾಮನು ಕಾನಾನಿಗೆ ಪ್ರಯಾಣ ಮಾಡಿದ್ದು (ಇಬ್ರಿಯ 11:8-10), ಮತ್ತು ಅಬ್ರಹಾಮನು ಇಸಾಕನನ್ನು ಯಜ್ಞವಾಗಿ ಸಮರ್ಪಿಸುವದಕ್ಕೆ ಮನಸ್ಸುವಳ್ಳವನಾಗಿದ್ದು (ಇಬ್ರಿಯ 11:17-19) ಸಹ ಆಗಿತ್ತು. ಅಬ್ರಹಾಮನೊಂದಿಗೆ ದೇವರು ಮಾಡಿಕೊಂಡ ವಾಗ್ದಾನದ ಒಡಂಬಡಿಕೆಯ (ಮೋಶೆಯ ಧರ್ಮಶಾಸ್ತ್ರದ ಕ್ರಿಯೆಗಳಿಗೆ ತದ್ವಿರುದ್ಧವಾಗಿ) ಘೋಷಣೆ ಹಾಗೂ ದೃಢೀಕರಣವು ಪೌಲನು ರಕ್ಷಣೆಯ ಕುರಿತಾಗಿ ಗಲಾತ್ಯದವರೊಂದಿಗೆ ಚರ್ಚಿಸುವದಕ್ಕಾಗಿ ಆರಿಸಿಕೊಂಡ ಚೌಕಟ್ಟು ಆಗಿರುತ್ತದೆ. ವಿಶ್ವಾಸಿಗಳೊಳಗೆ ಗಲಿಬಿಲಿಯನ್ನುಂಟು ಮಾಡಿದ್ದ ಯೆಹೂದಿಕರಣಗೊಳಿಸುವವರ ಸಂಗಡ ಆತನಿಗಿದ್ದ ಸಮಸ್ಯೆಯ ಸ್ವಾಭಾವವನ್ನು ನೋಡುವದಾದರೆ ಹೀಗೆಯೇ ಇರುವದೆಂಬುದು ಸ್ಪಷ್ಟವಾಗುತ್ತದೆ.

3:18ರಲ್ಲಿನ **ದಯಪಾಲಿಸಿದ್ದಾನೆ** (χαρίζομαι, *charizomai*) ಎಂಬ ಕ್ರಿಯಾಪದವು ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಡುವಿಕೆಯು ದೇವರಿಂದ ದೊರಕುವ ವರವಾಗಿದೆ ಎಂಬುದನ್ನು ಸೂಚಿಸುತ್ತದೆ. ಕ್ರಿಯೆಗಳಿಂದ ನೀತಿವಂತರೆಂದು ನಿರ್ಣಯಿಸಲ್ಪಡುವಿಕೆ (ಗಲಾತ್ಯದವರ ಸನ್ನಿವೇಶದಲ್ಲಿ) ಮನುಷ್ಯನಿಗೆ ಅಸಾಧ್ಯವಾಗಿರುತ್ತದೆ. ಕ್ರಿಯೆಗಳಿಂದ ನೀತಿವಂತರೆಂದು ನಿರ್ಣಯಿಸಲ್ಪಡಬೇಕಾದರೆ, ಒಬ್ಬನು ಹಳೆಯ ಒಡಂಬಡಿಕೆಯಲ್ಲಿರುವ ಪ್ರತಿಯೊಂದು ಆಜ್ಞೆಗಳಿಗೆ ದೋಷವಿಲ್ಲದೆ ವಿಧೇಯನಾಗಬೇಕಾಗಿರುತ್ತದೆ. ಸೀನಾಯ್ ಪರ್ವತದ ಮೇಲೆ ಕೊಟ್ಟಿದ್ದ ಧರ್ಮಶಾಸ್ತ್ರವು ಮನುಷ್ಯನಿಗೆ ಆತನ ಸಂಪೂರ್ಣ ಅಸಹಾಯಕತೆಯನ್ನು ಪ್ರಕಟಗೊಳಿಸುವ ಉಪಕರಣ ಮಾತ್ರವೇ ಆಗಿರುವದಾದಲ್ಲಿ, ಆತನು ಅದನ್ನು ಸ್ವಶಕ್ತಿಯಿಂದ ನೀತಿಯನ್ನು ಸಾಧಿಸಿಕೊಳ್ಳುವದಕ್ಕೋಸ್ಕರ ಬಳಸಿಕೊಳ್ಳತಕ್ಕದ್ದೋ. ಇನ್ನೊಂದಡೆಯಲ್ಲಿ, ದೇವರ "ವಿಶ್ವಾಸ ಮಾರ್ಗ"ವು (ರೋಮಾ 3:27) ಮನುಷ್ಯನ ಅಪರಾಧದಿಂದಲೇ ಆರಂಭಗೊಳ್ಳುತ್ತದೆ ಮತ್ತು ಅಂತ್ಯಗೊಳ್ಳುತ್ತದೆ, ಹೀಗೆ ಆತನು ತನ್ನ ಪಾಪತನವನ್ನು ಗ್ರಹಿಸಿಕೊಂಡು, ಶಿಲುಬೆಯ ಅಡಿಗೆ ಬಂದು, ಕೃತಜ್ಞತೆಯುಳ್ಳವನಾಗಿ ಅಧೀನಪಡಿಸಿಕೊಂಡು ಯೇಸುವಿನ ಒಡೆಯತ್ವವನ್ನು ಅಂಗೀಕರಿಸುವಂತಾಗಬೇಕು ಎಂಬುದೆ. ಶಿಲುಬೆಯ ಬಳಿಯಲ್ಲಿ, ಜೀವಿಗಳಾದ ನಾವು ದೇವರ ಮಹಿಮೆಯ ಬಳಿಗೆ ಹೋಗುವಂತೆ ಎಲ್ಲಾ ನಿತ್ಯತ್ವಕ್ಕೂ ದಾರಿಯಾಗುವಂತಾಗುವ ಹಾಗೆ, ಯೇಸುವು ಪಾಪದ ಮೂರ್ತರೂಪವೇ ಆಗುವದರ ಮೂಲಕವಾಗಿ ತಂದೆಯ ಪ್ರೀತಿಯನ್ನು ತೋರ್ಪಡಿಸಿದನು (2 ಕೊರಿಂಥ 5:21; 8:9).

ಅಬ್ರಹಾಮನಿಗೆ ಮತ್ತು ಆತನ ಸಂತತಿಗೆ - ನಂಬುವವರಾದ ನಮಗೆ - ವಾಗ್ದಾನ ಮಾಡಲ್ಪಟ್ಟ ಸೌಭಾಗ್ಯವು ಇದೇ ಆಗಿದೆ. ನಾವು ಈ ಸೌಭಾಗ್ಯತನವನ್ನು ನಂಬಿಕೆಯಿಲ್ಲದ ಲೋಕದೊಂದಿಗೆ ಹಂಚಿಕೊಳ್ಳಲು ಬಯಸುತ್ತೇವೆ. ದೇವರು ಸುಳ್ಳಾಡದಿರುವದು ಎಷ್ಟು ನಿಶ್ಚಿತವೋ, ಈ ವಾಗ್ದಾನವು ಶಿಲುಬೆಗೇರಿಸಲ್ಪಟ್ಟ ಕರ್ತನಾದ ನಜರೇತಿನ ಯೇಸುವಿನಲ್ಲಿ ನಂಬಿಕೆಯಿಡುವ ಮೂಲಕ ದೇವರ ಎಲ್ಲಾ ಮಕ್ಕಳಿಗೆ ಖಾತ್ರಿಪಡಿಸಲ್ಪಟ್ಟಿರುತ್ತದೆ.

## ಧರ್ಮಶಾಸ್ತ್ರದಲ್ಲಿರುವ ಕೊರತೆ (3:19-22)

**19ಹಾಗಾದರೆ ಮೋಶೆಯ ಧರ್ಮಶಾಸ್ತ್ರವು ಯಾತಕ್ಕೆ? ವಾಗ್ದಾನದಲ್ಲಿ ಸೂಚಿತನಾದವನು ಹುಟ್ಟಿ ಬರುವ ತನಕ ದೇವರು ಇಂಥಿಂಥದು ಅಪರಾಧವೆಂದು ತೋರಿಸುವದಕ್ಕಾಗಿ ಅದನ್ನು**

**ವಾಗ್ದಾನದ ತರುವಾಯ ನೇಮಿಸಿ ದೇವದೂತರ ಮುಖಾಂತರ ಒಬ್ಬ ಮಧ್ಯಸ್ಥನ ಕೈಯಲ್ಲಿ ಕೊಟ್ಟನು. [20]ಒಂದೇ ಪಕ್ಷವಿದ್ದರೆ ಮಧ್ಯಸ್ಥನು ಬೇಕಿಲ್ಲ, ದೇವರಾದರೋ ಒಬ್ಬನೇ. [21]ಹಾಗಾದರೆ ಧರ್ಮಶಾಸ್ತ್ರವು ದೇವರ ವಾಗ್ದಾನಗಳಿಗೆ ವಿರುದ್ಧವೋ? ಹಾಗೆ ಎಂದಿಗೂ ತಿಳುಕೊಳ್ಳಬಾರದು. ಬದುಕಿಸುವದಕ್ಕೆ ಶಕ್ತವಾಗಿರುವ ಧರ್ಮಶಾಸ್ತ್ರವು ಕೊಡಲ್ಪಟ್ಟಿದ್ದರೆ ಸಂದೇಹವಿಲ್ಲದೆ ಕರ್ಮಮಾರ್ಗದಿಂದಲೇ ನೀತಿಯುಂಟಾಗುತ್ತಿತ್ತು. [22]ಹಾಗಾಗದೆ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ಉಂಟಾಗುವ ಆ ವಾಗ್ದಾನದ ಫಲವು ನಂಬುವವರಿಗೇ ಕೊಡಲ್ಪಡಬೇಕೆಂದು ಶಾಸ್ತ್ರವು ಸಮಸ್ತವನ್ನು ಪಾಪಕ್ಕೊಳಗಾಗಿದೆಯೆಂದು ತೀರ್ಮಾನಿಸಿತು.**

**ವಚನ 19.** ತನ್ನ ವಾಚಕರಿಂದ ಮತ್ತು/ಅಥವಾ ಯೆಹೂದಿಕರಣಗೊಳಿಸುವ ವ್ಯಕ್ತಿಗಳಿಂದ ಪ್ರತಿರೋಧ ವ್ಯಕ್ತವಾಗಬಹುದೆಂದು ನಿರೀಕ್ಷಿಸಿದವನಾಗಿ, ಅಪೊಸ್ತಲನು ಒಂದು ಸೂಕ್ತವಾದ ಪ್ರಶ್ನೆಯನ್ನು ಎಬ್ಬಿಸುತ್ತಾನೆ **ಹಾಗಾದರೆ ಮೋಶೆಯ ಧರ್ಮಶಾಸ್ತ್ರವು ಯಾತಕ್ಕೆ?** ಈ ಚರ್ಚೆಯ ಬಳಿಕ, ಧರ್ಮಶಾಸ್ತ್ರಕ್ಕೆ ಯಾವ ಉದ್ದೇಶವೂ ಇರಲಿಲ್ಲವೆನೋ ಎಂಬಂತೆ ಕಾಣಿಸಿರಬಹುದಿತ್ತು. NIVಯಲ್ಲಿ "ಹಾಗಾದರೆ, ಧರ್ಮಶಾಸ್ತ್ರವಾದರೂ ಏತಕ್ಕೆ ಕೊಡಲ್ಪಟ್ಟಿತು?" ಎಂಬ ಪ್ರಶ್ನೆಯಿರುತ್ತದೆ. NKJVಯು ಹೀಗೆ ಹೇಳುತ್ತದೆ, "ಹಾಗಾದರೆ ಧರ್ಮಶಾಸ್ತ್ರವು ಯಾವ ಉದ್ದೇಶವನ್ನು ನೆರವೇರಿಸುತ್ತದೆ?" ಇವರೆಡೂ ತರ್ಜುಮೆಗಳು ಯೋಚನೆಯನ್ನು ಏಕರೀತಿಯಲ್ಲಿಯೇ ಅನುವಾದಿಸುತ್ತವೆ. ಈ ಪ್ರಶ್ನೆಗೆ ಉತ್ತರವು ಮೇಲ್ನೋಟಕ್ಕೆ ಕಾಣಿಸುವಷ್ಟು ಸುಲಭವೇನಲ್ಲ. ಅನೇಕ ಪ್ರತ್ಯುತ್ತರಗಳನ್ನು (ವಿಶೇಷವಾಗಿ ಪಾಪ-ಸಂಬಂಧಿಸಿದ ಉತ್ತರಗಳನ್ನು) ಕೊಡಬಹುದಾಗಿದೆ, ಆದರೆ ಈ ಕೆಳಗಿನವುಗಳು ಗಮನಕ್ಕೆ ತೆಗೆದುಕೊಳ್ಳಲು ಯೋಗ್ಯವಾಗಿವೆ:

ಪರಿಶುದ್ಧ, ವೈಯಕ್ತಿಕ ದೇವರ ಕುರಿತು ಒಂದು ಸ್ಪಷ್ಟವಾದ ಪ್ರಕಟನೆಯನ್ನು ಕೊಡುವದಕ್ಕೆ (ರೋಮಾ 1:18-20);

ಪಾಪ ಹಾಗೂ ಅಪರಾಧದ ಸ್ವಭಾವವನ್ನು ಪ್ರಕಟಗೊಳಿಸುವದಕ್ಕೆ (ರೋಮಾ 3:9-20);

ದೇವರ ಜನರಿಗೆ ಆತನಿಗಿರುವ ಸಮೀಪಿಸಲಾಗದಂತಹ ಪರಿಶುದ್ಧತೆ ಮತ್ತು ಆತನು ತನ್ನೆಲ್ಲಾ ಜನರಲ್ಲಿರಬೇಕೆಂದು ಕೇಳುವ ಪರಿಶುದ್ಧತೆಯ ಕುರಿತು ಕಲಿಸುವದಕ್ಕೆ (1 ಪೇತ್ರ 1:15, 16; ನೋಡಿರಿ ವಿಮೋಚನಕಾಂಡ 19:10-25; ಯೆಶಾಯ 6:1-8);

ಜನರನ್ನು ಪರಿಶುದ್ಧಗೊಳ್ಳುವದಕ್ಕೆ ಸ್ಫೂರ್ತಿಗೊಳಿಸುವದಕ್ಕೆ, ಎಚ್ಚರಿಕೆಯ ಉದಾಹರಣೆಗಳ ಮೂಲಕವೂ ಕೃಪೆಯುಳ್ಳ ವಾಗ್ದಾನಗಳ ಮೂಲಕವೂ ಸ್ಫೂರ್ತಿಗೊಳಿಸುವದು (ರೋಮಾ 11:22; 15:4; 1 ಕೊರಿಂಥ 10:1-13; ಯೂದನು 5-8);

ದೇವರಾದುಕೊಂಡ ಜನಾಂಗವಾದ ಇಸ್ರಾಯೇಲ್ಯರಿಗೆ ಅವರನ್ನು ಪಾಪ ಮಾಡದಂತೆ ತಡೆಯಲು ಮತ್ತು ಸಮರ್ಪಕವಾದ ನಡವಳಿಕೆಯ ಕುರಿತು ಅವರಿಗೆ ಕಲಿಸುವದಕ್ಕೆ ಒಂದು ಪ್ರಮಾಣಿಕವಾಗಿರುವದಕ್ಕೋಸ್ಕರ (ಗಲಾತ್ಯ 4:1-3);

ಜನರಿಗೆ ತಮ್ಮ ಅಪರಾಧದ ಆಗಾಧತೆಯನ್ನು ಗ್ರಹಿಸಿಕೊಳ್ಳಲು ಸಹಾಯ ಮಾಡುವದಕ್ಕೋಸ್ಕರ (3:10; ರೋಮಾ 5:20);

ಜನರು ತಮ್ಮ ಸ್ವ ಪ್ರಯತ್ನಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವದು ವ್ಯರ್ಥವಾಗಿರುತ್ತದೆಂಬುದನ್ನು ತೋರಿಸುವದಕ್ಕೋಸ್ಕರ (ರೊಮಾ 10:1-3; ಫಿಲಿಪ್ಪಿ 3:7-9);

ಪ್ರವಾದನೆಗಳು ಹಾಗೂ ಪ್ರವಾದನಾತ್ಮಕ ಚಿತ್ರಣದ ಮೂಲಕವಾಗಿ ಬರಲಿರುವ ವಿಮೋಚಕನ/ಮೆಸ್ಸೀಯನ ವಿಷಯದಲ್ಲಿ ಸಾಕ್ಷಿಯನ್ನು ಒದಗಿಸುವದು (ಲೂಕ 24:25-27; ರೋಮಾ 16:25, 26);

ಮನುಷ್ಯನ ಅಪರಾಧ ನಿರ್ಣಯವನ್ನು ಕುರಿತು ಪ್ರಕಟಿಸುವ ಮೂಲಕವಾಗಿ ದೇವರ ಕೃಪೆಯು ಎಷ್ಟು ಅಪಾರವಾಗಿದೆ ಎಂಬುದನ್ನು ತೋರಿಸಿ ಕೊಡುವದಕ್ಕೆ (ರೋಮಾ 5:20, 21).

ಪೌಲನು ಈ ಪ್ರತ್ಯುತ್ತರವನ್ನು ಕೊಟ್ಟನು: **ವಾಗ್ದಾನದಲ್ಲಿ ಸೂಚಿತನಾದವನು ಹುಟ್ಟಿ ಬರುವ ತನಕ ದೇವರು ಇಂಥಿಂಥದು ಅಪರಾಧವೆಂದು ತೋರಿಸುವದಕ್ಕಾಗಿ ಅದನ್ನು ವಾಗ್ದಾನದ ತರುವಾಯ ನೇಮಿಸಿ . . . ಕೊಟ್ಟನು.** ಧರ್ಮಶಾಸ್ತ್ರವು ಏತಕ್ಕೆ "ನೇಮಿಸಲ್ಪಟ್ಟಿತು"? ಪೌಲನು ಎರಡು ಒಡಂಬಡಿಕೆಗಳ - ಮೋಶೆಗೆ ಕೊಡಲ್ಪಟ್ಟಿದ್ದ ಧರ್ಮಶಾಸ್ತ್ರದ ಒಡಂಬಡಿಕೆ ಮತ್ತು ಅಬ್ರಹಾಮನಿಗೆ ಅದಕ್ಕೆ ಮುಂಚಿತವಾಗಿ ಕೊಡಲ್ಪಟ್ಟಿದ್ದ ವಾಗ್ದಾನದ ಒಡಂಬಡಿಕೆ - ಕುರಿತು ಚರ್ಚಿಸುತ್ತಿದ್ದಾನೆ. ಅನೇಕ ಸಾರಿ ಹೇಳಲ್ಪಟ್ಟಿರುವಂತೆ, ಧರ್ಮಶಾಸ್ತ್ರವು ಅಬ್ರಹಾಮನಿಗೆ ವಾಗ್ದಾನವು ಕೊಡಲ್ಪಟ್ಟು "ಸಂತತಿ" ಆಗಿರುವಾತನು, ಅಂದರೆ ಕ್ರಿಸ್ತನು (3:16) ಬರುವ ತನಕ ಜಾರಿಗೆ ತರಲ್ಪಟ್ಟಿದ್ದ ಒಂದು ಪ್ರಕ್ಷೆಪವಾಗಿತ್ತೇ ಹೊರತು ಮತ್ತೇನೂ ಅಲ್ಲ (3:17). ಧರ್ಮಶಾಸ್ತ್ರವು ಕ್ರಿಸ್ತನ ಕಡೆಗೆ ಬೆರಳು ತೋರಿಸುವದಾಗಿತ್ತು, ಮತ್ತು ಆತನಲ್ಲಿ ನೆರವೇರಿಸಲ್ಪಟ್ಟಿತು (ನೋಡಿರಿ ಯೋಹಾನ 1:17). ಕ್ರಿಸ್ತನು ಮರಣ ಹೊಂದಿದಾಗ ಪ್ರಕ್ಷೇಪವು ಮುಚ್ಚಲ್ಪಟ್ಟಿತು, ಆಗ ಧರ್ಮಶಾಸ್ತ್ರದ ಕಾಲವು ಅಂತ್ಯಗೊಂಡಿತ್ತು ಮತ್ತು ಕ್ರಿಸ್ತನ ರಕ್ತದ ಮೂಲಕ ಹೊಸ ಒಡಂಬಡಿಕೆಯು ಸ್ಥಿರಪಡಿಸಲ್ಪಟ್ಟಿತು (ನೋಡಿರಿ ಇಬ್ರಿಯ 9:17-28).[43]

ಹಾಗಾದರೆ, ಧರ್ಮಶಾಸ್ತ್ರವು ವಾಗ್ದಾನದ ತರುವಾಯ ಏಕೆ ನೇಮಿಸಲ್ಪಟ್ಟಿತು? ಪೌಲನು "ಇಂಥಿಂಥದು ಅಪರಾಧವೆಂದು ತೋರಿಸುವದಕ್ಕಾಗಿ" ಎಂದು ನೀಡಿದ ಉತ್ತರವನ್ನು ಕನಿಷ್ಠ ಎರಡು ರೀತಿಗಳಲ್ಲಿ ಅರ್ಥಮಾಡಿಕೊಳ್ಳಬಹುದಾಗಿದೆ.

ಒಂದು ಅರ್ಥೈಸುವ ದಾರಿಯೆಂದರೆ "ತೋರಿಸುವದಕ್ಕಾಗಿ" (χάριν, *charin*) ಎಂಬುದನ್ನು ಧರ್ಮಶಾಸ್ತ್ರದ *ಗುರಿಯ* ವಿಷಯದಲ್ಲಿ ಅರ್ಥನಿರೂಪಣೆ ಮಾಡುವದೇ (ಅಂದರೆ, "ಅಪರಾಧಗಳನ್ನು *ಹೊರಗೆ ತರುವದಕ್ಕಾಗಿ*"). ವಾಕ್ಯಭಾಗದ ಈ ಅರ್ಥನಿರೂಪಣೆಗೆ ಹೊಸ ಒಡಂಬಡಿಕೆಯಲ್ಲಿರುವ ಇತರ ವಾಕ್ಯಭಾಗಗಳು ಬೆಂಬಲವನ್ನು ಕೊಡುತ್ತವೆ. ಧರ್ಮಶಾಸ್ತ್ರವು ಪಾಪವು ಏನೆಂಬುದನ್ನು ತಿಳಿಸಿತು (ರೋಮಾ 3:20; 4:15); ವಾಸ್ತವಿಕದಲ್ಲಿ, ಅದು ಪಾಪವನ್ನು ಪ್ರಚೋದನೆ ಸಹ ಮಾಡಿತ್ತು (ರೋಮಾ 7:7-11) ಮತ್ತು ವಾಸ್ತವಿಕದಲ್ಲಿ ಪಾಪವನ್ನು ಅಧಿಕಗೊಳಿಸಿತ್ತು (ರೋಮಾ 5:20). ಧರ್ಮಶಾಸ್ತ್ರವು ಲೋಕವನ್ನು ಅಪರಾಧಿ ಎಂದು ತೀರ್ಪಿಗೊಳಪಡಿಸಿತ್ತು! ಎಲ್ಲಕ್ಕಿಂತ ಮೇಲಾಗಿ, ಅದು ಮನುಷ್ಯನಿಗೆ ರಕ್ಷಣೆಯ ಅಗತ್ಯವಿದೆ ಎಂಬುದನ್ನು ಪ್ರಕಟಗೊಳಿಸಿತ್ತು ಆದರೆ ಆ ರಕ್ಷಣೆಯನ್ನು ಸ್ವತಃ ಒದಗಿಸುವದಕ್ಕೆ ಅಶಕ್ತವಾಗಿತ್ತು. ಪಾಪದ ಅರುಹು ಹುಟ್ಟಿಸಿದ್ದು ಜನರಿಗೆ ದೇವರ ಕೃಪೆಯ ಅಗತ್ಯತೆಯಿದೆ ಎಂಬುದನ್ನು ಅವರಿಗೆ ತಿಳಿಸಿ ಕೊಟ್ಟಿತ್ತು. ಈ ವಿಧದಲ್ಲಿ, ಧರ್ಮಶಾಸ್ತ್ರವು ಒಬ್ಬ ರಕ್ಷಕನ ಬರೋಣವನ್ನು ಎದುರುನೋಡುವದಾಗಿತ್ತು ಮತ್ತು ತಕ್ಕ ಕಾಲವು ಬಂದಾಗ, ಯೇಸುವು ತನ್ನನ್ನು

ಯಜ್ಞಮಾಡಿಕೊಳ್ಳುವ ಮೂಲಕ ಲೋಕಕ್ಕೆ ಬರಮಾಡಲಿದ್ದ ರಕ್ಷಣೆಗೆ ಇದು ಅನೇಕ ವಿಧಗಳಲ್ಲಿ ಒಂದು ಅಪ್ರಧಾನವಾಗಿತ್ತು.

ಎರಡನೆಯ ಅರ್ಥೈಸುವ ದಾರಿಯೆಂದರೆ "ತೋರಿಸುವದಕ್ಕಾಗಿ" (*ಖರಿನ್*) ಎಂಬುದನ್ನು ಧರ್ಮಶಾಸ್ತ್ರವು ಕೊಡಲ್ಪಟ್ಟ *ಕಾರಣ* ಸೂಚಿಸುವದನ್ನಾಗಿ (ಅಂದರೆ, "ಸಂಭವಿಸಿದ ಅಪರಾಧಗಳ ಬಗ್ಗೆ *ಕ್ರಮಕೈಗೊಳ್ಳುವ*ದಕ್ಕೋಸ್ಕರ"[44]) ಎಂದು ಅರ್ಥನಿರೂಪಣೆ ಮಾಡುವೇ. ಈ ಅರ್ಥಕ್ಕೆ ಈ ಅಧ್ಯಾಯದ ನಂತರದ ಭಾಗದಲ್ಲಿ ಕಂಡು ಬರುವಂತೆ ಧರ್ಮಶಾಸ್ತ್ರವು ಒಂದು "ಉಪದೇಶಕ" ಅಥವಾ "ಕಾವಲುಗಾರ" ಎಂಬ ಚಿತ್ರಣವು ಬೆಂಬಲವಾಗಿರುತ್ತದೆ (3:23-25ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರ ಜನರು ಧರ್ಮಶಾಸ್ತ್ರದ (ಒಬ್ಬ "ಕಾಯುವ ಆಳು") ಕೈಕೆಳಗಿರುವ ವೇಳೆ, ಅದರ ಉದ್ದೇಶವು ಅವರನ್ನು ಪಾಪ ಮಾಡುವದರಿಂದ ತಡೆಯುವದು ಹಾಗೂ ಅವರು ಅವಿಧೇಯರಾದರೆ ಅವರನ್ನು ಶಿಕ್ಷಿಸುವದು ಆಗಿತ್ತು. ಧರ್ಮಶಾಸ್ತ್ರದ ಪಾತ್ರವು ದೇವರ ಜನರನ್ನು ಮೆಸ್ಸೀಯನು ಬರುವ ತನಕ ಕಾಯುವದಾಗಿತ್ತು.

ಪೌಲನು ಒತ್ತಿ ಹೇಳಿದ್ದೇನೆಂದರೆ **ನೇಮಿಸಿ ದೇವದೂತರ ಮುಖಾಂತರ ಒಬ್ಬ ಮಧ್ಯಸ್ಥನ ಕೈಯಲ್ಲಿ ಕೊಟ್ಟನು**. ಧರ್ಮಶಾಸ್ತ್ರವನ್ನು (ಪರೋಕ್ಷವಾಗಿ ಪ್ರತಿಷ್ಠಾಪಣೆ ಮಾಡಲ್ಪಟ್ಟಿದ್ದು) ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನದೊಂದಿಗೆ (ಅದು ನೇರವಾಗಿ ಕೊಡಲ್ಪಟ್ಟಿತ್ತು) ವಿರುದ್ಧ ಹೋಲಿಕೆಯನ್ನು ಮಾಡುವ ಉದ್ದೇಶದಿಂದ ಪೌಲನು ಈ ವಿವರಣೆಯನ್ನು ಕೊಡುತ್ತಾನೆ. ವೈಯಕ್ತಿಕ ಸ್ವಭಾವದ ನಿಮಿತ್ತವಾಗಿ, ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ಶ್ರೇಷ್ಠವಾದದ್ದೆಂದು ಮುಂದಿಡಲ್ಪಡುತ್ತಿದೆ. ಧರ್ಮಶಾಸ್ತ್ರವು ದೈವಿಕ ಮೂಲದಿಂದ ಬಂದದ್ದೆಂಬುದನ್ನು ಅಥವಾ ಅದರ ಕಟ್ಟಳೆಗಳು "ಪರಿಶುದ್ಧವೂ ನ್ಯಾಯವೂ ಹಿತವೂ" (ರೋಮಾ 7:12) ಆಗಿರುತ್ತವೆಂಬುದನ್ನು ಪೌಲನು ನಿರಾಕರಿಸುತ್ತಿಲ್ಲ. ಹಾಗಿದ್ದರೂ, ದೇವರು ಮೋಶೆಗೆ ಧರ್ಮಶಾಸ್ತ್ರದ ಕುರಿತು ತಿಳಿಯಪಡಿಸಿದ್ದು ಅದನ್ನು ಅಬ್ರಹಾಮನಿಗೆ ಆತನು ಮಾಡಿದ ವಾಗ್ದಾನದೊಂದಿಗೆ ಕಡಿಮೆಯಾಗಿ ಕಾಣಿಸುವಂತೆ ಮಾಡಿತ್ತು.

ಮೋಶೆಯ ಧರ್ಮಶಾಸ್ತ್ರವನ್ನು ಸ್ಥಿರಪಡಿಸುವದರಲ್ಲಿ ದೇವದೂತರು ಭಾಗಿಯಾಗಿದ್ದರು ಎಂಬ ವಾಸ್ತವಾಂಶವು ವಿಮೋಚನಕಾಂಡದಲ್ಲಿ ತಿಳಿಸಲ್ಪಟ್ಟಿರುವದಿಲ್ಲ. ದೇವರು ಇಸ್ರಾಯೇಲ್ಯರನ್ನು ತನ್ನ "ದೇವದೂತರು" ದಾರಿ ನಡಿಸುವರೆಂದು ವಿಮೋಚನಕಾಂಡ 32:34ರಲ್ಲಿ ವಾಗ್ದಾನ ಮಾಡಿದ್ದಂತೂ ನಿಜವೇ ಆಗಿದೆ. ಈ ವಾಕ್ಯಭಾಗವು ಸೀನಾಯ್ ಪರ್ವತದಲ್ಲಿ ಧರ್ಮಶಾಸ್ತ್ರವು ಕೊಡಲ್ಪಡುವದರ ಕುರಿತು ತಿಳಿಸುವ ಎರಡು ಕಥನಗಳ ನಡುವೆ ಇರುವಂಥದ್ದಾಗಿದೆ (ವಿಮೋಚನಕಾಂಡ 24:15-32:16; 34:1-29). ಹಾಗಿದ್ದರೂ ಈ ಎರಡು ಕಥನಗಳೊಳಗೆ ದೇವದೂತನ ಬಗ್ಗೆ ಪ್ರಸ್ತಾಪವೇ ಇರುವದಿಲ್ಲ. ಧರ್ಮೋಪದೇಶಕಾಂಡ 33:2ರಲ್ಲಿ, ಕರ್ತನು "ಲಕ್ಷಾಂತರ ಪರಿಶುದ್ಧದೂತರ ಮಧ್ಯದಿಂದ" ಅಥವಾ "ದೇವದೂತರಿಂದ" (LXX) ಇಳಿದು ಬಂದನು ಎಂದು ಚಿತ್ರಿಸಲ್ಪಟ್ಟಿರುತ್ತಾನೆ.

ಹೇಗೂ, ಹೊಸ ಒಡಂಬಡಿಕೆಯಲ್ಲಿ, ಸ್ತೇಫನನು ಮೋಶೆಯನ್ನು "ಅವನೇ ಸೀನಾಯಿಬೆಟ್ಟದಲ್ಲಿ ತನ್ನೊಡನೆ ಮಾತಾಡಿದ ದೂತನಿಗೂ ನಮ್ಮ ಪಿತೃಗಳಿಗೂ ಅಡವಿಯಲ್ಲಿದ್ದ ಸಭೆಯೊಳಗೆ ಮಧ್ಯಸ್ಥನಾಗಿದ್ದು ಜೀವಕರವಾದ ದೇವೋಕ್ತಿಗಳನ್ನು ಹೊಂದಿ ನಮಗೆ ಕೊಟ್ಟವನು" ಎಂದು ಕರೆಯುತ್ತಾನೆ (ಅಪೊಸ್ತಲರ ಕೃತ್ಯಗಳು 7:38). ಅಲ್ಲದೆ ಆತನು ಜನರು "ದೇವದೂತರ ಮೂಲಕ ನೇಮಕವಾದ ಧರ್ಮಶಾಸ್ತ್ರವನ್ನು ನೀವು ಹೊಂದಿದವರಾದರೂ ಅದನ್ನು ಅನುಸರಿಸುವದಿಲ್ಲ" ಎಂದು ಸಹ ಹೇಳಿದನು (ಅಪೊಸ್ತಲರ ಕೃತ್ಯಗಳು 7:53). ಇಬ್ರಿಯರಿಗೆ ಪತ್ರಿಕೆಯ ಲೇಖಕನು ಧರ್ಮಶಾಸ್ತ್ರವು "ದೇವದೂತರ ಮೂಲಕ ಹೇಳಲ್ಪಟ್ಟ"ದ್ದು

ಎಂದು ಹೇಳಿದನು (ಇಬ್ರಿಯ 2:2). ಪ್ರೇರಿತವಲ್ಲದ ಯೆಹೂದಿ ಸಾಹಿತ್ಯವು ಮೋಶೆಯ ಧರ್ಮಶಾಸ್ತ್ರವನ್ನು ಸ್ಥಾಪಿಸಿದವರು ದೇವದೂತರೆಂದು ಹೇಳುತ್ತದೆ.[45] ಬಹುಶಃ ಈ ವಿಚಾರವು ಈಗಾಗಲೇ ಪ್ರಸ್ತಾಪಿಸಲಾಗಿರುವ ಹಳೆಯ ಒಡಂಬಡಿಕೆಯ ಶಾಸ್ತ್ರಗಳ ಮೇಲೆ, ಮಾತ್ರವಲ್ಲದೆ ಕೀರ್ತನೆ 68:17ರ ಮೇಲೆ ಆಧಾರವಾಗಿರಬಹುದು: "ದೇವರಿಗೆ ಸಹಸ್ರಾರು ಮಾತ್ರವಲ್ಲ, ಲಕ್ಷಾಂತರ ರಥಗಳು ಇವೆ. ಕರ್ತನಾದ ಯೆಹೋವನು ಅವುಗಳ ಸಮೇತವಾಗಿ ಸೀನಾಯಿಬೆಟ್ಟದಲ್ಲಿದ್ದ ಹಾಗೆ ಪವಿತ್ರಾಲಯದಲ್ಲಿದ್ದಾನೆ."

ದೇವರು ಮತ್ತು ಜನರ ನಡುವೆ ಒಬ್ಬ "ಮಧ್ಯಸ್ಥ"ನಾಗಿ (μεσίτης, *mesitēs*) ಮೋಶೆಯು ಪಾತ್ರ ವಹಿಸಿದ್ದನೆಂಬುದು ಸ್ಪಷ್ಟವಾಗಿರುತ್ತದೆ. ವಿಮೋಚನಕಾಂಡ 20:19ರಲ್ಲಿ, ಇಸ್ರಾಯೇಲ್ಯರು ಮೋಶೆಗೆ ಹೀಗೆ ಹೇಳಿದರು, "ನೀನೇ ನಮ್ಮ ಸಂಗಡ ಮಾತಾಡು; ನಾವು ಕೇಳುವೆವು. ದೇವರು ನಮ್ಮ ಸಂಗಡ ಮಾತಾಡಿದರೆ ನಾವು ಸತ್ತೇವು." ಧರ್ಮೋಪದೇಶಕಾಂಡ 5:5ರಲ್ಲಿ, ಮೋಶೆಯು ತಾನು "ಯೆಹೋವನಿಗೂ [ಜನರಿಗೂ] ನಡುವೆ ನಿಂತು ಆತನು ಆಡಿದ ಮಾತುಗಳನ್ನು [ಅವರಿಗೆ] ತಿಳಿಸಿದೆನು" ಎಂಬುದನ್ನು ಜ್ಞಾಪಿಸುತ್ತಾನೆ.

19ನೇ ವಚನದಲ್ಲಿ "ಮಧ್ಯಸ್ಥನ" ಎಂಬುದು "ಅವನ ಕೈಯಲ್ಲಿ" (ἐν χειρὶ, *en cheiri*) ಎಂಬ ಹೆಚ್ಚು ಅಕ್ಷರಶಃ ಅನುವಾದಕ್ಕಿಂತ ಉತ್ತಮ ಅನುವಾದವಾಗಿದೆ. ಯಾಜಕಕಾಂಡ 26:46ರಲ್ಲಿ ಒಂದು ಸಮಾನಾರ್ಥ ಭಾಗವು ಕಂಡು ಬರುತ್ತದೆ: "ಯೆಹೋವನು ಸೀನಾಯಿಬೆಟ್ಟದಲ್ಲಿ ಮೋಶೆಯ *ಮೂಲಕವಾಗಿ* ಇಸ್ರಾಯೇಲ್ಯರ ಸಂಗಡ ಒಡಂಬಡಿಕೆಯನ್ನು ಮಾಡಿಕೊಂಡು ಅವರಿಗೆ ಕೊಟ್ಟ ಆಜ್ಞಾವಿಧಿಗಳು ಮೇಲೆ ಕಂಡವುಗಳೇ" (ಒತ್ತಿ ಹೇಳಿದ್ದು ನನ್ನದು). "ಮೂಲಕ" ಎಂಬುದರ ಬದಲಾಗಿ, ಇಬ್ರಿಯ ವಾಕ್ಯವು ಅಕ್ಷರಶಃ "ಅವನ ಕೈಯಲ್ಲಿ" (בְּיַד, *b^e^yad*) ಎಂದು ಹೇಳುತ್ತದೆ (ನೋಡಿರಿ KJV).

**ವಚನ 20. ಒಂದೇ ಪಕ್ಷವಿದ್ದರೆ ಮಧ್ಯಸ್ಥನು ಬೇಕಿಲ್ಲ, ದೇವರಾದರೋ ಒಬ್ಬನೇ.** ಒಟ್ಟಾರೆಯಾಗಿ ಈ ವಚನದ ಅರ್ಥವು ಸ್ಪಷ್ಟವಾಗಿರುವದಿಲ್ಲ. ಈ ವಾಕ್ಯಸಾಲು ಎರಡು ಸ್ವತಂತ್ರ ಭಾಗಗಳನ್ನು ಹೊಂದಿದ್ದು ಅವುಗಳು ಕಠಿಣವಾಗಿರುವದಿಲ್ಲ. ಮೊದಲನೆಯ ಭಾಗವು "ಒಬ್ಬ ಮಧ್ಯಸ್ಥನು" ಕೇವಲ "ಒಂದೇ ಪಕ್ಷ"ವನ್ನು ಪ್ರತಿನಿಧಿಸುವದಿಲ್ಲ, ಆದರೆ ಎರಡು ಪಕ್ಷಗಳನ್ನು ಪ್ರತಿನಿಧಿಸುತ್ತಾನೆಂದು ಹೇಳುತ್ತದೆ. ಈ ಮುಂಚೆ ತಿಳಿಸಿದ ಹಾಗೆ, ಅಪೊಸ್ತಲರ ಕೃತ್ಯಗಳು 7:38ನೇ ವಚನವು ಮೋಶೆಯನ್ನು ಸೀನಾಯ್ ಪರ್ವತದ ಮೇಲಿದ್ದ ದೇವದೂತರ ಹಾಗೂ ಪರ್ವತದ ಕೆಳಗಡೆಯಲ್ಲಿ ಕೂಡಿ ಬಂದಿದ್ದ ಇಸ್ರಾಯೇಲ್ಯರ ನಡುವೆ ಮಧ್ಯಸ್ಥಿಕೆ ವಹಿಸಿದನೆಂದು ಚಿತ್ರಿಸುತ್ತದೆ. ಎರಡನೆಯ ಭಾಗವು ದೇವರ ಏಕತೆಯನ್ನು ಕುರಿತು ಒತ್ತಿ ಹೇಳುತ್ತದೆ. ದೇವರ ಈ ಏಕತೆಯು ಯೆಹೂದ್ಯರ ನಂಬಿಕೆಗೆ ಮೂಲಭೂತವಾಗಿತ್ತು (ಮತ್ತು ಈಗಲೂ ಇರುತ್ತದೆ). ಯೆಹೂದ್ಯರು ಅನುದಿನವೂ ಪಠಿಸುವ ಶೇಮಾ ಹೀಗೆ ಹೇಳುತ್ತದೆ, "ಇಸ್ರಾಯೇಲ್ಯರೇ, ಕೇಳಿರಿ; ನಮ್ಮ ದೇವರಾದ *ಯೆಹೋವನು ಒಬ್ಬನೇ* ದೇವರು" (ಧರ್ಮೋಪದೇಶಕಾಂಡ 6:4; ಒತ್ತಿ ಹೇಳಿದ್ದು ನನ್ನದು).

ಇಡೀ ವಚನದ ಬಹಳ ಸಂಭಾವ್ಯವಾದ ಅರ್ಥನಿರೂಪಣೆಯು ಹೀಗಿರುತ್ತದೆ: ಅದು ಧರ್ಮಶಾಸ್ತ್ರ (ದೇವರು ದೇವದೂತರು ಹಾಗೂ ಮೋಶೆಯ *ಮೂಲಕ* ಜನರಿಗೋಸ್ಕರ ಪ್ರತಿಷ್ಠಾಪಿಸಿದ್ದು) ಮತ್ತು ಸರ್ವೋಚ್ಚ ವಾಗ್ದಾನದ (ದೇವರು *ನೇರವಾಗಿ* ಅಬ್ರಹಾಮನಿಗೆ ಕೊಟ್ಟಿದ್ದು) ನಡುವೆ ವಿರುದ್ಧ ಹೋಲಿಕೆಯನ್ನು ಮಾಡುವದು.

**ವಚನ 21.** ಪೌಲನು ಮಾಡಿದ ವಾದವು ಕೆಲವು ಕ್ರೈಸ್ತರನ್ನು ಮೋಶೆಯ ಧರ್ಮಶಾಸ್ತ್ರ ಮತ್ತು ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನಗಳು ಒಂದಕ್ಕೊಂದು ವಿರುದ್ಧವಾಗಿವೆ

ಎಂಬುದಾಗಿ ನಂಬುವಂತೆ ನಡಿಸಿರಬಹುದಾಗಿದೆ. ಯಾವದೇ ತಪ್ಪು ಕಲ್ಪನೆಯಿರುವದಾದರೆ ಅದನ್ನು ಉದ್ದೇಶಿಸಿ ಪೌಲನು ಹೀಗೆ ಬರೆದನು, **ಹಾಗಾದರೆ ಧರ್ಮಶಾಸ್ತ್ರವು ದೇವರ ವಾಗ್ದಾನಗಳಿಗೆ ವಿರುದ್ಧವೋ? ಹಾಗೆ ಎಂದಿಗೂ ತಿಳುಕೊಳ್ಳಬಾರದು.** ಧರ್ಮಶಾಸ್ತ್ರವು ಕೊಡಲ್ಪಟ್ಟ ಉದ್ದೇಶವು **ಬದುಕಿಸುವದಕ್ಕೆ** ಆಗಿರಲಿಲ್ಲ ಎಂಬುದನ್ನು ಅಪೊಸ್ತಲನು ದೃಢೀಕರಿಸುತ್ತಾನೆ. ಬದಲಾಗಿ, ನೀತಿವಂತರೆಂಬ ನಿರ್ಣಯವು ಅಬ್ರಹಾಮನ ಸಂತತಿಯ - ಕ್ರಿಸ್ತನು (ರೋಮಾ 7; 8) ಮೂಲಕವಾಗಿ ಎಲ್ಲಾ ಜನಾಂಗಗಳನ್ನು ಆಶೀರ್ವದಿಸುವನೆಂದು ಮಾಡಿದ ವಾಗ್ದಾನದ ನೆರವೇರಿಕೆಯಾಗಿರುತ್ತದೆ. ಇವೆರಡು ಒಂದೇ ಉದ್ದೇಶವನ್ನು ನಡಿಸಲಿಲ್ಲ ಆದರೆ ಒಂದಕ್ಕೊಂದು ಪೂರಕವಾಗಿರುತ್ತವೆ.

**ವಚನ 22.** ಪೌಲನು ಈ ಮುಕ್ತಾಯಕ್ಕೆ ಬರುತ್ತಾನೆ, **ಹಾಗಾಗದೆ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ಉಂಟಾಗುವ ಆ ವಾಗ್ದಾನದ ಫಲವು ನಂಬುವವರಿಗೇ ಕೊಡಲ್ಪಡಬೇಕೆಂದು ಶಾಸ್ತ್ರವು ಸಮಸ್ತವನ್ನು ಪಾಪಕ್ಕೊಳಗಾಗಿದೆಯೆಂದು ತೀರ್ಮಾನಿಸಿತು.** "ಶಾಸ್ತ್ರವು" ಎಂಬುದರ ಅರ್ಥವೇನು? ಈ ಪದಗುಚ್ಛವು ಹಳೆಯ ಒಡಂಬಡಿಕೆಯನ್ನು ಸೂಚಿಸುವ ಸಾಮಾನ್ಯ ಬಳಕೆಯಾಗಿರಬಹುದು, ಅದು ಮನುಷ್ಯನ ಪಾಪತನದ ಬಗ್ಗೆ ಸಾಕ್ಷಿ ಹೇಳುತ್ತದೆ. ಅಪೊಸ್ತಲನು ಈ ಅಂಶವನ್ನು ಹಳೆಯ ಒಡಂಬಡಿಕೆಯ ಹಲವಾರು ವಾಕ್ಯಭಾಗಗಳನ್ನು ಒಟ್ಟಾರೆಯಾಗಿ ಜೋಡನೆ ಮಾಡುವ ಮೂಲಕವಾಗಿ ರೋಮಾ 3:10-18ರಲ್ಲಿ ಋಜುವಾತು ಪಡಿಸಿದನು.

'ಶಾಸ್ತ್ರವು" (ἡ γραφή, *hē graphē*) ಏಕವಚನವಾಗಿರುವದರಿಂದ, ಬಹುಶಃ ಪೌಲನು ಒಂದು ನಿರ್ದಿಷ್ಟವಾದ ವಾಕ್ಯಭಾಗವನ್ನು ಸೂಚಿಸುತ್ತಿರಬಹುದಾಗಿದೆ.[46] ಒಂದು ಸಂಭಾವ್ಯ ವಾಕ್ಯಭಾಗವೆಂದರೆ ಕೀರ್ತನೆ 143:2, ಅದು ಗಲಾತ್ಯ 2:16ರಲ್ಲಿ ಪರೋಕ್ಷವಾಗಿ ಬಳಸಲ್ಪಟ್ಟಿರುತ್ತದೆ: "ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ." ಅಲ್ಲಿ ಪರೋಕ್ಷವಾಗಿ ಬಳಸಲ್ಪಟ್ಟಿರುವ ಇನ್ನೊಂದು ವಾಕ್ಯಭಾಗವೆಂದರೆ ಧರ್ಮೋಪದೇಶಕಾಂಡ 27:26, ಅದು ಗಲಾತ್ಯ 3:10ರಲ್ಲಿ ಉಲ್ಲೇಖಿಸಲ್ಪಟ್ಟಿದೆ: "ಈ ಧರ್ಮಶಾಸ್ತ್ರವಾಕ್ಯಗಳಿಗೆ ಒಡಂಬಟ್ಟು ಕೈಕೊಳ್ಳದೆ ಇರುವವನು ಶಾಪಗ್ರಸ್ತ."

ಹಾಗಾದರೆ ಪುನಃ, "ಶಾಸ್ತ್ರವು" ಎಂಬುದು ಸ್ವತಃ ಧರ್ಮಶಾಸ್ತ್ರಕ್ಕೇ ಸಮಾನವಾಗಿರಬಹುದಾಗಿದೆ. ದೇವರ ಜನರನ್ನು ಪಾಪಿಗಳೆಂದು ತೀರ್ಪುಮಾಡಿದ ಮೋಶೆಯ ಧರ್ಮಶಾಸ್ತ್ರವು, ಯೆಹೂದ್ಯರನ್ನು ಪಾಪಿಗಳಾಗಿ ಸೆರೆಯಾಗಿಟ್ಟುಕೊಂಡಿತ್ತು.

ದೇವರ ಜನರ ಪಾಪಸ್ಥಿತಿಯನ್ನು ಸ್ಥಾಪಿಸುವ ಮೂಲಕವಾಗಿ, ಪೌಲನು ನಂಬಿಕೆಯ ತತ್ವಕ್ಕೆ ದಾರಿಯನ್ನು ಸಿದ್ಧಗೊಳಿಸಿದನು: ದೇವರ ವಾಗ್ದಾನವು "ಯೇಸು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ" ಬರುತ್ತದೆ ಹೊರತು ನೇಮನಿಷ್ಠೆಗಳನ್ನು ಅನುಸರಿಸುವದರಿಂದಲ್ಲ.

## ಧರ್ಮಶಾಸ್ತ್ರದ ತಾತ್ಕಾಲಿಕ ಸ್ವಭಾವ: ಕ್ರಿಸ್ತನ ಬಳಿಗೆ ನಡಿಸುವ ಕಾವಲುಗಾರ (3:23-29)

**[23]ಕ್ರಿಸ್ತನಂಬಿಕೆಯ ಕಾಲ ಬರುವದಕ್ಕೆ ಮೊದಲು ನಾವು ಮುಂದಕ್ಕೆ ಪ್ರಕಟವಾಗಬೇಕಾಗಿದ್ದ ಆ ನಂಬಿಕೆಗೆ ವಶವಾಗುವದಕ್ಕಾಗಿ ಧರ್ಮಶಾಸ್ತ್ರದ ಕೈಕೆಳಗೆ ಕಾವಲಲ್ಲಿ ಮುಚ್ಚಲ್ಪಟ್ಟಿದ್ದೆವು. [24]ಹೀಗಿರಲಾಗಿ ಧರ್ಮಶಾಸ್ತ್ರವು ನಮ್ಮನ್ನು ಕಾಯುವ ಆಳಿನಂತಾಗಿದೆ; ನಾವು ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವನ್ನು ಹೊಂದುವದಕ್ಕಾಗಿ ಕ್ರಿಸ್ತನಲ್ಲಿಗೆ ಸೇರುವ ತನಕ ಅದು ನಮ್ಮನ್ನು ಕಾಯುತ್ತದೆ. [25]ಆದರೆ ಕ್ರಿಸ್ತ ನಂಬಿಕೆಯು ಬಂದಿರಲಾಗಿ ನಾವಿನ್ನು ಕಾಯುವವನ**

**ಕೈಕೆಳಗಿರುವವರಲ್ಲ. [26]ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. [27]ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ. [28]ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ. [29]ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ.**

**ವಚನ 23.** ಗ್ರೀಕ್ ವಾಕ್ಯದಲ್ಲಿ, **ನಂಬಿಕೆ** ಎಂಬ ಪದದ ಮುಂಚೆ ಒಂದು ನಿರ್ದಿಷ್ಟ ಗುಣವಾಚಿಯು (τήν πίστιν, *tēn pistin*) ಇರುತ್ತದೆ, ಆದದರಿಂದ ಪದಗುಚ್ಛವನ್ನು "ಆ ನಂಬಿಕೆ" ಎಂದು ಅನುವಾದಿಸಬಹುದು. ಇದರ ಕಾರಣದಿಂದ ಕೆಲವರು ಇಲ್ಲಿ ಹೊಸ ಒಡಂಬಡಿಕೆಯ ವಸ್ತುನಿಷ್ಠ ಉಪದೇಶವನ್ನು (ಯೂದನು 3ರಲ್ಲಿರುವ ಪ್ರಕಾರ) ಸೂಚಿಸುತ್ತದೆಂದು ಯೋಚಿಸಬಹುದು. ಈ ವಿಚಾರವು ವಚನದ ಯೋಜನೆಗೆ ಸೂಕ್ತವಾಗಿ ಹೊಂದಾಣಿಕೆಯಾಗುತ್ತದಾದರೂ, 3:22ರಲ್ಲಿರುವಂತೆ ("ಯೇಸು ಕ್ರಿಸ್ತನ ಮೇಲಣ ನಂಬಿಕೆ") ಇಲ್ಲಿ "ನಂಬಿಕೆ" ಎಂಬುದನ್ನು ವ್ಯಕ್ತಿನಿಷ್ಠವಾಗಿ ಬಳಸಿಕೊಳ್ಳಬಹುದಾಗಿದೆ. ಇವೆರಡರಲ್ಲಿ ಯಾವ ಅರ್ಥನಿರೂಪಣೆಯನ್ನು ಮಾಡಿದರೂ ಅದು ಯೇಸುವಿನ ಸೇವೆ ಹಾಗೂ ಆತನ ಸಭೆಯ ಸ್ಥಾಪಿಸುವಿಕೆಯು ಸಂಭವಿಸಿದಂಥ ಒಂದೇ ಕಾಲಾವದಿಗೆ - ಕ್ರಿ.ಶ. ಪ್ರಥಮ ಶತಮಾನ - ಸಂಬಂಧಿಸುತ್ತದೆ.

ಈ ಕಾಲಕ್ಕೆ ಮುನ್ನ, ಯೆಹೂದ್ಯರು **ಮುಂದಕ್ಕೆ ಪ್ರಕಟವಾಗಬೇಕಾಗಿದ್ದ ಆ ನಂಬಿಕೆಗೆ ವಶವಾಗುವದಕ್ಕಾಗಿ ಮೋಶೆಯ ಧರ್ಮಶಾಸ್ತ್ರದ ಕೈಕೆಳಗೆ ಕಾವಲಲ್ಲಿ ಮುಚ್ಚಲ್ಪಟ್ಟಿದ್ದೆವು**. "ಕೈಕೆಳಗೆ ಕಾವಲಲ್ಲಿ" (φρουρέω, *phroureō*) ಎಂಬ ಮತ್ತು "ಮುಚ್ಚಲ್ಪಟ್ಟಿದ್ದೆವು" (συγκλείω, *sunkleiō*) ಎಂಬ ಮಾತುಗಳು ಕೂಡಿ ಹಾಕಲ್ಪಡುವಿಕೆ ಅಥವಾ ಸೆರೆವಾಸಕ್ಕೆ ಸಂಬಂಧಿಸಬಲ್ಲದು. ಧರ್ಮಶಾಸ್ತ್ರವು ರೂಪಕವಾಗಿ ಇಲ್ಲಿ ಒಬ್ಬ ಬಂದೀಖಾನೆಯ ಮುಖ್ಯಾಧಿಕಾರಿ ಎಂಬಂತೆ ಚಿತ್ರಿಸಲ್ಪಡುತ್ತಿರಬಹುದಾಗಿದೆ. *ಫ್ರೋವುರೆವೋ* ಎಂಬ ಪದವು "ರೋಮನ್ನರು ಸೆರೆಮನೆಗಳನ್ನು ಮೂಲಭೂತವಾಗಿ ಕೈದಿಗಳ ಪ್ರಕರಣಗಳು ಇತ್ಯರ್ಥಗೊಳ್ಳುವ ತನಕ ಅವರನ್ನು ಕಾವಲಲ್ಲಿಟ್ಟುಕೊಳ್ಳುವದಕ್ಕೆ ಬಳಸಲ್ಪಡುತ್ತಿದ್ದವು [ಎಂಬುದೊಂದಿಗೆ] ಸಾಮಂಸಜ್ಯತೆಯನ್ನು ಹೊಂದಿದೆ."[47] ಹೇಗೂ, ಈ ಸನ್ನಿವೇಶದಲ್ಲಿ, ಈ ಪದಗಳು 24 ಮತ್ತು 25 ವಚನಗಳಲ್ಲಿ "ಕಾಯುವ ಆಳು" (ಅಥವಾ "ಪಾಲಕ") ಪಾತ್ರಕ್ಕೆ ಸಂಬಂಧಪಟ್ಟಿರುತ್ತವೆ. ಈ ಪ್ರಕರಣದಲ್ಲಿ, ಕಾಯುವ ಆಳಿನ ರೀತಿಯಲ್ಲಿ, ಧರ್ಮಶಾಸ್ತ್ರವು ಜಾರಿಯಲ್ಲಿರುವ ವೇಳೆ ನಿಗ್ರಹಿಸುವ ಶಕ್ತಿಯಾಗಿ ಕೆಲಸ ಮಾಡಿತ್ತು.

**ವಚನ 24.** ಪೌಲನು ಮುಂದುವರೆಸಿ ಹೇಳಿದ್ದೇನೆಂದರೆ, **ಹೀಗಿರಲಾಗಿ ಧರ್ಮಶಾಸ್ತ್ರವು ನಮ್ಮನ್ನು ಕಾಯುವ ಆಳಿನಂತಾಗಿದೆ; ನಾವು ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವನ್ನು ಹೊಂದುವದಕ್ಕಾಗಿ ಕ್ರಿಸ್ತನಲ್ಲಿಗೆ ಸೇರುವ ತನಕ ಅದು ನಮ್ಮನ್ನು ಕಾಯುತ್ತದೆ.** "ಕಾಯುವ ಆಳು" ಎಂಬುದಕ್ಕಿರುವ ಗ್ರೀಕ್ ಪದ παιδαγωγός (*paidagōgos*) ಎಂಬುದು, ಇದು ಒಂದು ಸಂಯುಕ್ತ ಪದವಾಗಿದ್ದು παῖς (*pais*, "ಮಗು") ಎಂಬುದನ್ನು ἀγωγός (*agōgos*, "ನಾಯಕ") ಎಂಬುದರೊಂದಿಗೆ ಕೂಡಿಸುತ್ತದೆ. ಈ ಪದದ ಅಕ್ಷರಶಃ ಅರ್ಥವು ಒಬ್ಬ "ಮಗುವಿನ ನಾಯಕ" ಎಂಬುದು. ಇತರ ತರ್ಜುಮೆಗಳು ಈ ಪದವನ್ನು "ಸುಫರ್ದುದಾರ" (RSV), "ಶಿಸ್ತು ಪಾಲಕ" (NRSV), ಅಥವಾ "ಪಾಲಕ" (ESV) ಎಂದು ಅನುವಾದಿಸುತ್ತವೆ. ಸಂಪ್ರದಾಯಿಕವಾದ "ಉಪಾಧ್ಯಾಯ" (KJV) ಎಂಬ ಅನುವಾದವು ಚಿತ್ರವನ್ನು ನಿಖರವಾಗಿ ಮುಂದಿಡುವದಿಲ್ಲ.[48]

*ಪಾಯಿಡಾಗೋಗೊಸ* ಎಂಬವನು ವೈಶಿಷ್ಟ್ಯವಾಗಿ ಕಿರಿಯವನು ಪ್ರಬುದ್ಧತೆಯನ್ನು ಮುಟ್ಟುವ ತನಕ ದಾರಿ ನಡಿಸುವ ಜವಾಬ್ದಾರಿಯನ್ನು ಹೊಂದಿರುತ್ತಿದ್ದ ಒಂದು ಕುಟುಂಬದಲ್ಲಿರುವ ದಾಸನಾಗಿದ್ದನು (ನೋಡಿರಿ NJB). ಆತನು "ಉಪಾಧ್ಯಾಯ" ಅಥವಾ "ಉಪದೇಶಕ" (διδάσκαλος, *didaskalos*) ಆಗಿರಲಿಲ್ಲ, ಆದರೆ ಬದಲಾಗಿ ಹುಡುಗನನ್ನು ಶಾಲೆಯ ತನಕ ಕರೆದೊಯ್ದು ಬಿಡುತ್ತಿದ್ದ ವ್ಯಕ್ತಿಯಾಗಿದ್ದನು. ಆತನು ಒಬ್ಬ ನೈತಿಕ ಮಾರ್ಗದರ್ಶಕ, ಕಾಪಾಡುವವನು, ಮತ್ತು ಒಬ್ಬ ಕಟ್ಟುನಿಟ್ಟಿನ ಶಿಸ್ತುಪಾಲಕ ಆಗಿರುತ್ತಿದ್ದನು.[49]

ಒಬ್ಬ *ಪಾಡಾಗೋಗೊಸ* ನನ್ನು ಬಳಸುವ ಪದ್ಧತಿಯು ಕ್ರಿ.ಪೂ 5ನೇ ಶತಮಾನದಷ್ಟು ಹಿಂದೆಯೇ ಚಾಲ್ತಿಯಲ್ಲಿತ್ತು, ಬಹುಶಃ ಗ್ರೀಸ್ ದೇಶದಲ್ಲಿ ಅದರ ಉಗಮವಾಗಿರಬಹುದು.[50] ರೋಮನ್ನರಿಂದ ಮಾತ್ರವಲ್ಲದೆ ಗ್ರೀಕರಿಂದ ಸಹ ವ್ಯಾಪಕವಾಗಿ ಬಳಕೆಯಲ್ಲಿತ್ತು. ಬಹುಶಃ ಕೆಲವು ಶ್ರೀಮಂತ ಯೆಹೂದಿಗಳು ಈ ಪದ್ಧತಿಯನ್ನು ಅನುಸರಿಸುತ್ತಿದ್ದರು.

ಹುಟ್ಟು-ಸ್ವತಂತ್ರನಾದ ಹುಡುಗನೊಬ್ಬನು ತನ್ನ ದಾಯಾದಿಯ ಆರೈಕೆಯಿಂದ ಹೊರ ಬಂದ ಬಳಿಕ ಆತನ ಕೆಲಸಗಳನ್ನೆಲ್ಲಾ ವೈಯಕ್ತಿಕ ದಾಸ-ಅನುಚರನು ನೋಡಿಕೊಳ್ಳುತ್ತಿದ್ದನು. ಇದೊಂದು ಪೂರ್ಣಾವಧಿ ಕೆಲಸವಾಗಿತ್ತು: ಪಾಲಕನು ಆತನನ್ನು ಮುಂಜಾನೆಯಲ್ಲಿ ನಿದ್ದೆಯಿಂದ ಎಚ್ಚರಗೊಳಿಸುತ್ತಿದ್ದನು ಮತ್ತು ರಾತ್ರಿಯಲ್ಲಿ ಆತನನ್ನು ಮಲಗಿಸುತ್ತಿದ್ದನು.[51] ಈ ದಾಸನು ಹುಡುಗನಿಗೆ ಒಳ್ಳೇ ನಡತೆಗಳನ್ನು, ಉದಾಹರಣೆಗೆ ಕೂತುಕೊಳ್ಳುವದು ಹಾಗೂ ಸರಿಯಾಗಿ ನಡೆಯುವದನ್ನು, ಆತನ ಹಿರಿಯರು ಮುಂದೆ ಇದ್ದರೆ ಎದ್ದು ನಿಂತುಕೊಳ್ಳುವದನ್ನು, ಅತಿಯಾಗಿ ಆಹಾರ ಸೇವನೆ ಮಾಡದೆ ಇರುವದನ್ನು, ಮತ್ತು ಅತಿ ಗದ್ದಲವನ್ನು ಮಾಡದಿರುವದನ್ನು ಕಲಿಸುತ್ತಿದ್ದನು.[52] ಹುಡುಗನು ಅವಿಧೇಯನಾಗಿದ್ದಲ್ಲಿ, ದಾಸ-ಅನುಚರನು ಆತನನ್ನು ಚಾಟಿಯಿಂದ ಅಥವಾ ಬೆತ್ತದಿಂದ ಹೊಡೆಯುತ್ತಿದ್ದನು.

ಹುಡುಗನನ್ನು ಶಾಲೆಗೆ ಕರೆದೊಯ್ಯುವ ವೇಳೆ, *ಪಾಯಿಡಾಗೋಗೊಸ*ನು ಆತನ ಬರೆಯುವ ಹಲಿಗೆಗಳನ್ನು, ಆತನ ಪುಸ್ತಕಗಳನ್ನು, ಮತ್ತು ಆತನ ಸಂಗೀತ ವಾದ್ಯವನ್ನು (ಬಹುಶಃ ಒಂದು ಕಿನ್ನರಿ ಅಥವಾ ಕೊಳಲು) ಹೊತ್ತುಕೊಂಡು ಸಾಗುತ್ತಿದ್ದನು. ದಾಸನು ಆತನಿಗೋಸ್ಕರ ಅಲ್ಲಿಯೇ, ತರಗತಿಯ ಕೋಣೆಯಲ್ಲಾಗಲಿ ಅಥವಾ ದಾಸ-ಅನುಚರರಿಗೋಸ್ಕರ ವಿಶೇಷವಾಗಿ ಏರ್ಪಡಿಸಿರುತ್ತಿದ್ದ ಕೋಣೆಯಲ್ಲಿ ಕಾಯುತ್ತಿದ್ದನು. ತರಗತಿಯ ಮುಗಿದ ಬಳಿಕ, ಆತನು ಹುಡುಗನನ್ನು ಮನೆಗೆ ಕರೆದೊಯ್ಯುತ್ತಿದ್ದನು ಮತ್ತು ಆತನು ತರಗತಿಯಲ್ಲಿ ಹೇಳಿಕೊಟ್ಟ ಪಾಠಗಳನ್ನು ಪಠನೆ ಮಾಡುವಂತೆ ಮಾಡುತ್ತಿದ್ದನು. ಹುಡುಗನು ಚಿಕ್ಕವನಾಗಿರುವ ಕಾಲದಲ್ಲಿ, ದಾಸ-ಸಹಚರನು "ಆ ಹುಡುಗನು ತನ್ನ ಸ್ವಾತಂತ್ರ್ಯವನ್ನು ಜವಾಬ್ದಾರಿಯಿಂದ ಬಳಸುವದಕ್ಕೆ ಶಕ್ತನು ಎಂದು ಭರವಸವಿಡುವ ರೀತಿಯಲ್ಲಿ, ಆತನು ವಯಸ್ಸಿಗೆ ಬರುವ ತನಕವೂ ಅವಶ್ಯಕವಾಗುವ ಮಿತಿಗಳನ್ನು ಹೇರುತ್ತಿದ್ದನು."[53]

ಒಬ್ಬ ಹುಡುಗನು ತನ್ನ ಏಳನೆಯ ವಯಸ್ಸಿನಿಂದ ಆತನು ತನ್ನ ಹದಿಹರೆಯವ ವಯಸ್ಸಿನ ಕಡೇ ಹಂತದಲ್ಲಿರುವವನಾಗುವ ತನಕವೂ ಪಾಲಕನ ಮೇಲ್ವಿಚಾರಣೆಯಲ್ಲಿರುತ್ತಿದ್ದನು. ಆತನ ಸಂಬಂಧವು ಅಂತ್ಯಗೊಳ್ಳುವ ನಿಖರವಾದ ದಿನಾಂಕವು "ತಂದೆಯು ನೇಮಿಸಿದ ದಿನದ" (4:2) ಮೇಲೆ ಆಧಾರವಾಗಿರುತ್ತಿತ್ತು. ಯುವಕನು ಪ್ರಬುದ್ಧತೆಯನ್ನು ತಲುಪಿದಾಗ, ಆತನನ್ನು ಮೇಲ್ವಿಚಾರಣೆಯಿಂದ ಮುಕ್ತಗೊಳಿಸಲಾಗುತ್ತಿತ್ತು. *ಪಾಯಿಡಾಗೋಗೊಸ* ಕುರಿತು Xenophonನು ನೀಡಿರುವ ಬಣ್ಣನೆಯು ನಮಗೆ ಸಹಾಯಕವಾಗುತ್ತದೆ: "ಒಬ್ಬ ಹುಡುಗನು ಮಗುವಾಗಿರುವದನ್ನು ನಿಲ್ಲಿಸಿದಾಗ, ಮತ್ತು ಒಬ್ಬ ತರುಣನಾಗುವದಕ್ಕೆ ಆರಂಭಿಸುವಾಗ,

ಆತನು ತನ್ನ ನೈತಿಕ ಕಾವಲುಗಾರ [*ಪಾಯಿಡಾಗೋಗೊಸ*] ಮತ್ತು ತನ್ನ ಉಪಾಧ್ಯಾಯನ [*ಡಿಡಾಸ್ಕೊಲೊಸ*] ವಶದಿಂದ ಬಿಡುಗಡೆಗೊಳಿಸಲ್ಪಡುತ್ತಾನೆ."[54] ಮಗುವು ತನ್ನ ಕಾವಲುಗಾರ ಅಥವಾ ಪಾಲಕನ ವಶದಿಂದ ಬಿಡುಗಡೆಗೊಳಿಸಲ್ಪಟ್ಟ ಮೇಲೆ, ಆತನು ತಾನು ಕಲಿತುಕೊಂಡ ಪ್ರಾಥಮಿಕ ತತ್ವಗಳನ್ನು (στοιχεῖα, *stoicheia*) ಮರೆಯಬಾರದಿತ್ತು ಅಥವಾ ನಿರ್ಲಕ್ಷ್ಯ ಮಾಡಬಾರದಿತ್ತು.

ಧರ್ಮಶಾಸ್ತ್ರವು ಜನರನ್ನು ಕ್ರಿಸ್ತನಲ್ಲಿ ನಂಬಿಕೆಯಿಡುವಂತೆ (ಪರಿಪಕ್ವತೆ) ಸಿದ್ಧಗೊಳಿಸುವಂತಹ ಒಂದು ಪ್ರಾಮುಖ್ಯವಾದ ಕೆಲಸವನ್ನು ಮಾಡುವದಾಗಿತ್ತು. ಅದು ಯೆಹೂದ್ಯರನ್ನು ದೇವರ ಗುಣಸ್ವಭಾವದ ಬಗ್ಗೆ ಉಪದೇಶಿಸಿ ಅವರಲ್ಲಿ ಪಾಪದ ಅರುಹು ಹುಟ್ಟಿಸುತ್ತಿತ್ತು. ಅವರನ್ನು ಯೇಸುವಿನ ಮೂಲಕವಾದ ರಕ್ಷಣೆಗೆ ನಡಿಸುವದಕ್ಕಾಗಿ ಈ ಪ್ರಾಮುಖ್ಯವಾದ ಅಂಶಗಳು ಅವಶ್ಯಕವಾಗಿದ್ದವು.

**ವಚನ 25.** ಪಾಲಕನ ಹಾಗೆ, ಧರ್ಮಶಾಸ್ತ್ರವು ಕೇವಲ ಒಂದು ಮಿತಿಯುಳ್ಳ ಕಾಲದ ತನಕವಷ್ಟೇ ಕೆಲಸ ಮಾಡುವದಾಗಿತ್ತು. ಪೌಲನು ಹೀಗೆ ವಿವರಿಸುತ್ತಾನೆ, **ಆದರೆ ಕ್ರಿಸ್ತ ನಂಬಿಕೆಯು ಬಂದಿರಲಾಗಿ ನಾವಿನ್ನು ಕಾಯುವವನ ಕೈಕೆಳಗಿರುವವರಲ್ಲ.** "ನಾವು" ಎಂಬ ಸರ್ವನಾಮವನ್ನು ಬಳಸುವ ಮೂಲಕ, ಆತನು ತಾನು ಹಾಗೂ ಜೊತೆಯ ಯೆಹೂದ್ಯರು ಇನ್ನು ಮೇಲೆ ಧರ್ಮಶಾಸ್ತ್ರದ ಮೇಲ್ವಿಚಾರಣೆಯಲ್ಲಿರಲಿಲ್ಲ ಎಂಬುದನ್ನು ಒತ್ತಿ ಹೇಳುತ್ತಿದ್ದಾನೆ. ಅದರ ಉದ್ದೇಶವು ಕ್ರಿಸ್ತನ ಬರುವಿಕೆಯ - ಪರಿಪಕ್ವತೆಯ ವಯಸ್ಸಿನ - ತನಕವೂ ದೇವರ ಜನರ ನಡವಳಿಕೆಯನ್ನು ನಿಯಂತ್ರಣ ಮಾಡುವದಾಗಿತ್ತು. ಒಬ್ಬನು ಧರ್ಮಶಾಸ್ತ್ರದ ಕಡೆಗೆ ಜೀವನದ ದಾರಿಯಾಗಿ ಸ್ವೀಕರಿಸಿಕೊಳ್ಳಲು ಹಿಂದಿರುಗುವದು ಒಬ್ಬ ಯುವಕನು ಸ್ವತಂತ್ರಗೊಳಿಸಲ್ಪಟ್ಟ ಬಳಿಕ ಪುನಃ ತನ್ನ ಪಾಲಕನ ಮೇಲ್ವಿಚಾರಣೆಯಲ್ಲಿರುವದಕ್ಕಾಗಿ ಹೋಗುವದರ ರೀತಿಯಲ್ಲಿರುತ್ತದೆ. ಆತನು "ಪರಿಪಕ್ವತೆಗೆ ಬಂದದ್ದರ ಮೂಲಕವಾಗಿ ತನಗೆ ದೊರೆತ ಸ್ವಾತಂತ್ರ್ಯವನ್ನು, ಹಕ್ಕುಗಳನ್ನು, ಮತ್ತು ಸವಲತ್ತುಗಳನ್ನು ತ್ಯಜಿಸುವವನಾಗಿದ್ದನು (cf. ಗಲಾತ್ಯ 4:1-7)".[55]

**ವಚನ 26.** ಪೌಲನು ಉತ್ತಮ ಪುರುಷ ಬಹುವಚನದಿಂದ ("ನಾವು," ಯೆಹೂದ್ಯರು) ಮಧ್ಯಮ ಪುರುಷ ಬಹುವಚನಕ್ಕೆ ("ನೀವು," ಗಲಾತ್ಯದಲ್ಲಿನ ಕ್ರೈಸ್ತರು) ಬದಲಾಗುತ್ತಾನೆ. ಆತನು ನೇರವಾಗಿ ತನ್ನ ವಾಚಕರೊಂದಿಗೆ ಮಾತಾಡುತ್ತಿದ್ದಾನೆ, ಅವರಲ್ಲಿ ಯೆಹೂದ್ಯ ಹಾಗೂ ಅನ್ಯಜನಾಂಗದ ಕ್ರೈಸ್ತರು ಸೇರಿದ್ದರು. ಅಪೊಸ್ತಲನು ಹೀಗೆ ಬರೆದನು, **ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ.** ಪೌಲನು ಉದ್ದೇಶಪೂರ್ವಕವಾಗಿಯೇ "ದೇವರ ಪುತ್ರರು" ಎಂಬ ಪದಗುಚ್ಛವನ್ನು ಬಳಸಿದನು ಯಾಕೆಂದರೆ, ಯೆಹೂದಿ ವಲಯಗಳಲ್ಲಿ ಆ ಮಾತು ಪ್ರತ್ಯೇಕವಾಗಿ ಯೆಹೂದ್ಯರನ್ನು ಸೂಚಿಸುತ್ತಿತ್ತು.[56] ಇದು ಪ್ರಥಮ ಶತಮಾನದ ಕಾಲ ಸಮೀಪದಲ್ಲಿ ಬರೆದಿರುವ ಸಾಹಿತ್ಯಗಳಲ್ಲಿ ಕಾಣಿಸಿಕೊಳ್ಳುತ್ತದೆ.[57] ಅಪೊಸ್ತಲನು ಈ ಪದವನ್ನು ಎಲ್ಲಾ ಕ್ರೈಸ್ತರಿಗೆ, ಅನ್ವಯಿಸಿದನು, ಅವರು ಯೆಹೂದ್ಯರಾಗಿರಬಹುದು ಅಥವಾ ಅನ್ಯಜನರಾಗಿರಬಹುದು.

ಅವರೆಲ್ಲಾ "ದೇವರ ಪುತ್ರರಾಗಿದ್ದರು" - ಅವರು ಧರ್ಮಶಾಸ್ತ್ರಕ್ಕೆ ನಿಷ್ಠಾವಂತಿಕೆಯುಳ್ಳವರಾಗಿದ್ದರಿಂದಲ್ಲ, ಆದರೆ ಅವರು "ಕ್ರಿಸ್ತ ಯೇಸುವಿನ ಮೇಲಿಟ್ಟಿರುವ ನಂಬಿಕೆ" ನಿಮಿತ್ತದಿಂದಲೇ ಆಗಿತ್ತು. ಅವರು ದೇವರ ಆತ್ಮೀಕ ಕುಟುಂಬಗಳಲ್ಲಿ ದತ್ತು ಪಡೆಯಲ್ಪಟ್ಟಿದ್ದರು ಮತ್ತು ಆತನ ಸಾರೂಪ್ಯವನ್ನು ಪಡೆದುಕೊಂಡಿದ್ದರು, ಅದು ಅವರಲ್ಲಿ ಆತನ ಪವಿತ್ರಾತ್ಮನ ಮೂಲಕ ನೆಲೆಸಿತ್ತು (ರೋಮಾ 8:9-17). ಕೆಲವು ತರ್ಜುಮೆಗಳು ಇಲ್ಲಿ ಎರಡು

ಲಿಂಗದವರನ್ನು ಸೂಚಿಸುವ ಭಾಷೆಯ (ಉದಾಹರಣೆಗೆ, NRSVಯಲ್ಲಿ "ಮಕ್ಕಳು") ಬಳಕೆ ಮಾಡುತ್ತವೆ, ಗ್ರೀಕ್ ವಾಕ್ಯದಲ್ಲಿ "ಪುತ್ರರು" (υἱοί, *huioi*) ಎಂದಿರುತ್ತದೆ. ಈ ನಿರ್ದಿಷ್ಟವಾದ ಪದವು ಬಾಧ್ಯತೆಯ ಮೇಲೆ ಪರಿಣಾಮಗಳನ್ನು ಬೀರುವ ನಿಮಿತ್ತವಾಗಿ ಪ್ರಾಮುಖ್ಯತೆಯನ್ನು ಹೊಂದಿದೆ. ಪ್ರಾಚೀನ ಜಗತ್ತಿನಲ್ಲಿ, ಸಾಮಾನ್ಯವಾಗಿ ಪುತ್ರರು ಬಾಧ್ಯತೆಯನ್ನು ಪಡೆದುಕೊಳ್ಳುತ್ತಿದ್ದರು.

**ವಚನ 27.** ನಂಬಿಕೆಯ ತತ್ವವನ್ನು ಇನ್ನಷ್ಟು ವಿವರಿಸುತ್ತಾ, ಪೌಲನು ಮುಂದುವರೆಸುತ್ತಾನೆ, **ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ.** ಸುವಾರ್ತೆಯ ಸಂದೇಶವನ್ನು ನಂಬುವವರಾದ ಮೇಲೆ, ಗಲಾತ್ಯದವರು "ದೀಕ್ಷಾಸ್ನಾನಮಾಡಿಸಿಕೊಂಡರು" (ಇದು βαπτίζω, *baptizō* ಎಂಬುದರಿಂದ ಬಂದದ್ದು) - ಅಂದರೆ, ನೀರಿನಲ್ಲಿ ಮುಳುಗಿಸಲ್ಪಟ್ಟರು.[58] ಅಪೊಸ್ತಲರ ಕೃತ್ಯಗಳು ಪುಸ್ತಕವು ದಕ್ಷಿಣ ಗಲಾತ್ಯದಲ್ಲಿನ ಮೊದಲ ಸುವಾರ್ತಾ ಪ್ರಯಾಣದೊಂದಿಗೆ ಸಂಬಂಧ ಪಟ್ಟಂತೆ ದೀಕ್ಷಾಸ್ನಾನದ ಕುರಿತು ಪ್ರಸ್ತಾಪಿಸುವದಿಲ್ಲ. ಅದು ಪಿಸಿದ್ಯದ ಅಂತಿಯೋಕ್ಯದಲ್ಲಿ "ನಂಬಿದರು" ಎಂಬುದರ ಕುರಿತು (ಅಪೊಸ್ತಲರ ಕೃತ್ಯಗಳು 13:14, 48), ಇಕೋನ್ಯದಲ್ಲಿ ಯೆಹೂದ್ಯರು ಹಾಗೂ ಅನ್ಯಜನರು "ನಂಬುವವರಾದರು" (ಅಪೊಸ್ತಲರ ಕೃತ್ಯಗಳು 14:1), ಮತ್ತು ದರ್ಬೆಯಲ್ಲಿ ಅನೇಕರನ್ನು ಶಿಷ್ಯರನ್ನಾಗಿ ಮಾಡಿದರು ಎಂಬುದರ ಕುರಿತು ಮಾತಾಡುತ್ತದೆ (ಅಪೊಸ್ತಲರ ಕೃತ್ಯಗಳು 14:20, 21). ಹಾಗಿದ್ದರೂ, ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ "ನಂಬಿದರು" ಎಂಬುದು ಅನೇಕ ಸಾರಿ ಇಡೀ ಪರಿವರ್ತನೆಯ ಪ್ರಕ್ರಿಯೆಯನ್ನು ಸೂಚಿಸುವದಕ್ಕಾಗಿ ಬಳಸಲಾಗಿರುತ್ತದೆ. ಆ ವಿಧದಲ್ಲಿ ಬಳಸಲ್ಪಡುವಾಗ, ಆ ಪದದೊಳಗೆ ನಂಬಿಕೆ, ಪಶ್ಚಾತ್ತಾಪ, ಅರಿಕೆ, ಮತ್ತು ದೀಕ್ಷಾಸ್ನಾನಗಳು ಸೇರಿರುತ್ತವೆ.

ಕ್ರಿಸ್ತನಲ್ಲಿ ರಕ್ಷಣೆಯನ್ನು ಪಡೆಯುವದಕ್ಕೆ ಮತ್ತು ಆತನ ಸಭೆಯೊಳಗೆ ಪ್ರವೇಶವನ್ನು ಪಡೆಯುವದಕ್ಕೆ ನೀರಿನ ದೀಕ್ಷಾಸ್ನಾನದ ಅವಶ್ಯಕತೆಯು ಸುವಾರ್ತೆಯ ಕಥನಗಳಲ್ಲಿ (ಮತ್ತಾಯ 28:19; ಮಾರ್ಕ 16:16; ಯೋಹಾನ 3:5), ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ (ಅಪೊಸ್ತಲರ ಕೃತ್ಯಗಳು 2:38, 41; 8:38; 10:47, 48; 16:15, 33; 18:8; 19:5; 22:16), ಮತ್ತು ಪತ್ರಿಕೆಗಳಲ್ಲಿ (ರೋಮಾ 6:3, 4; 1 ಕೊರಿಂಥ 6:11; 12:13; ಕೊಲೊಸ್ಸೆ 2:12; ತೀತನಿಗೆ 3:5; 1 ಪೇತ್ರ 3:21) ಒತ್ತಿ ಹೇಳಲ್ಪಟ್ಟಿದೆ. ಒಬ್ಬ ವ್ಯಕ್ತಿಯು "ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡ" ವೇಳೆ, ಆತನು ಕ್ರಿಸ್ತನೊಂದಿಗೆ ಐಕ್ಯವಾಗಿರುತ್ತಾನೆ ಮತ್ತು ಆತನ ಮರಣ ಹಾಗೂ ಪುನರುತ್ಥಾನದ ಆಶೀರ್ವಾದಗಳನ್ನು ಪಡೆದುಕೊಳ್ಳುತ್ತಾನೆ. ವಾಸ್ತವದಲ್ಲಿ, ಸ್ವತಃ ದೀಕ್ಷಾಸ್ನಾನದ ಘಟನೆಯೇ ಕ್ರಿಸ್ತನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳನ್ನು ಜ್ಞಾಪಿಸುವದಾಗಿದೆ. ವಿಶ್ವಾಸಿಯು ಸ್ವತಃ ದೀಕ್ಷಾಸ್ನಾನದ ನೀರಿನಲ್ಲಿ ತನ್ನ ಪಾಪದ ಪಾಲಿಗೆ ಮರಣಿಸಿ ಜೀವಿತನಾಗಿ ಎದ್ದು ಹೊಸ ಜೀವಿತವನ್ನು ನಡಿಸುತ್ತಾನೆ (ರೋಮಾ 6:3, 4; ಕೊಲೊಸ್ಸೆ 2:12). ಇಲ್ಲಿ, ಪೌಲನು ಅದನ್ನು "ಕ್ರಿಸ್ತನನ್ನು ಧರಿಸಿಕೊಂಡಿರುವದು" ಎಂದು ಬಣ್ಣಿಸುತ್ತಾನೆ (ನೋಡಿರಿ 2 ಕೊರಿಂಥ 5:21). ಒಂದು ಆತ್ಮೀಕ ದಾರಿಯಲ್ಲಿ, ದೀಕ್ಷಾಸ್ನಾನವು ಹೊಸ ಉಡುಪುಗಳನ್ನು ಧರಿಸಿಕೊಳ್ಳುವ ರೀತಿಯಾಗಿರುತ್ತದೆ. ಪಾಪದ ಹೊಲಸು ಬಟ್ಟೆಗಳನ್ನು ಧರಿಸಿಕೊಳ್ಳುವದರ ಬದಲಾಗಿ (ಯೆಶಾಯ 64:6), ಕ್ರೈಸ್ತರು ಕ್ರಿಸ್ತನ ನೀತಿಯನ್ನು ಧರಿಸಿಕೊಂಡಿರುತ್ತಾರೆ (ನೋಡಿರಿ ಪ್ರಕಟನೆ 3:4; 6:11). ನಾವು ಆತನ "ಗುಣಸ್ವಭಾವಗಳನ್ನು, ಗುಣಗಳನ್ನು, ಮತ್ತು ಉದ್ದೇಶಗಳನ್ನು"[59] ಧರಿಸಿಕೊಳ್ಳುವದನ್ನು ಆರಿಸಿಕೊಳ್ಳುತ್ತೇವೆ.

**ವಚನ 28.** ಪೌಲನು ತನ್ನ ವಾಚಕರಿಗೆ ಈ ರಕ್ಷಣೆಗಿರುವ ಒಂದು ಸುಂದರವಾದ

ಸಮಾನತೆಯ ವೈಶಿಷ್ಟ್ಯತೆಯನ್ನು ಜ್ಞಾಪಿಸುತ್ತಾನೆ: **ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ.** ಒಬ್ಬನು ದೀಕ್ಷಾಸ್ನಾನ ಮಾಡಿಸಿಕೊಂಡ ಮೇಲೆ, ಅವನು ಅಥವಾ ಅವಳು ಇನ್ನು ಮೇಲೆ ಒಬ್ಬ "ಯೆಹೂದ್ಯ" ಅಥವಾ "ಗ್ರೀಕ್," ಒಬ್ಬ "ಆಳು" ಅಥವಾ "ಒಡೆಯ," ಅಥವಾ ಒಬ್ಬ "ಗಂಡು" ಅಥವಾ "ಹೆಣ್ಣು" ಆಗಿರುವದನ್ನು ನಿಲ್ಲಿಸಿ ಬಿಡುವನು ಎಂಬುದು ಪೌಲನ ತಾತ್ಪರ್ಯವಾಗಿರಲಿಲ್ಲ. ಉದಾಹರಣೆಗೆ, ಒಬ್ಬ ವ್ಯಕ್ತಿಯು ತನ್ನ ಜನಾಂಗೀಯ ಪರಂಪರೆಯನ್ನು ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲ. ಬದಲಾಗಿ, ಕ್ರಿಸ್ತನಲ್ಲಿ ಎಲ್ಲರಿಗೂ ಸಮಾನ ಸ್ಥಾನವಿರುತ್ತದೆ ಎಂಬುದನ್ನು ಪೌಲನು ಒತ್ತಿ ಹೇಳುತ್ತಿದ್ದಾನೆ.[60] ಹೀಗೆ ಹೇಳಲಾಗಿರುತ್ತದೆ, ಏನೆಂದರೆ "ಶಿಲುಬೆಯ ಅಡಿಯಲ್ಲಿ ಭೂಮಿಯೆಲ್ಲಾ ಸಮಾಂತರದಲ್ಲಿರುತ್ತದೆ." ಎಲ್ಲರೂ ಒಂದೇ ವಿಧದಲ್ಲಿಯೇ ಕ್ರೈಸ್ತರಾದರು ಮತ್ತು ದೇವರ ದೃಷ್ಟಿಯಲ್ಲಿ ಎಲ್ಲರೂ ಒಂದೇ ವಿಧದಲ್ಲಿ ಅಮೂಲ್ಯರಾಗಿದ್ದಾರೆ. ಎಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿದ್ದಾರೆ ಮತ್ತು ಆತನಿಗೆ ಸೇರಿದವರು. ದೇವರ ರಾಜ್ಯದಲ್ಲಿ ದ್ವಿತಿಯ ವರ್ಗದ ನಾಗರಿಕರನ್ನು ಒಳಗೊಂಡಿರುವದಿಲ್ಲ.

ಪೌಲನು ಮೂರು ವಿಧವಾದ ವಿಭಾಗಗಳನ್ನು ಮಾಡಿದ್ದು ಪ್ರಾಮುಖ್ಯವಾಗಿದೆ ಯಾಕೆಂದರೆ ಸಾಮಾನ್ಯವಾಗಿ ಅನ್ಯಜನರು, ದಾಸರು, ಮತ್ತು ಸ್ತ್ರೀಯರು ಇಸ್ರಾಯೇಲ್ಯರ ಒಡೆತನದಲ್ಲಿದ್ದ ಭೂಮಿಯನ್ನು ಬಾಧ್ಯವಾಗಿ ಪಡೆದುಕೊಳ್ಳುತ್ತಿರಲಿಲ್ಲ. ಹಾಗಿದ್ದರೂ, ಎಲ್ಲರೂ "ದೇವರ ಪುತ್ರರು" ಆಗಿರುತ್ತಾರೆಂದು (3:26) ಮತ್ತು "ಬಾಧ್ಯರು" (3:29) ಎಂದು ಹೇಳಲಾಗಿದೆ. ಮೂರು ಗುಂಪುಗಳಲ್ಲಿ ಪ್ರತಿಯೊಬ್ಬರು "ಒಂದೇ ದೀಕ್ಷಾಸ್ನಾನ"ವನ್ನು ಮಾಡಿಸಿಕೊಂಡಿದ್ದರು ಮತ್ತು "ಒಂದೇ ದೇಹಕ್ಕೆ" ಸೇರಿಸಲ್ಪಟ್ಟಿದ್ದರು (ಎಫೆಸ 4:4, 5). ಅವರು ತಮ್ಮ ನಿಜವಾದ ಬಾಧ್ಯಸ್ಥನಾದ ಕ್ರಿಸ್ತನೊಂದಿಗೆ ಐಕ್ಯವಾಗಿದ್ದರು, ಅದು ಅವರನ್ನು "ಕ್ರಿಸ್ತನೊಂದಿಗೆ ಬಾಧ್ಯರು" ಆಗುವಂತೆ ಮಾಡಿತ್ತು (ರೋಮಾ 8:17).

"ಕ್ರಿಸ್ತನಲ್ಲಿ" ಸಮಾನವಾಗಿರುವರೆಂದ ತಕ್ಷಣ ಸಭೆ ಹಾಗೂ ಮನೆಯಲ್ಲಿ ಬೇರೆ ಬೇರೆ ಲಿಂಗದವರಿಗೆ ಭಿನ್ನವಾದ ಪಾತ್ರಗಳಿರುತ್ತವೆಂಬುದನ್ನು ಇಲ್ಲದಂತಾಗಿಸುವದಿಲ್ಲ.[61] ಈ ಸತ್ಯವು 1 ಪೇತ್ರ 3:1-7ರಲ್ಲಿ ಋಜುವಾತು ಪಡಿಸಲ್ಪಟ್ಟಿದೆ, ಅಲ್ಲಿ ಹೆಂಡತಿಯು ತನ್ನ ಗಂಡನಿಗೆ ಅಧೀನಳಾಗಿರಬೇಕೆಂದು, ಮತ್ತು ಗಂಡನು ತನ್ನ ಹೆಂಡತಿಯು ದುರ್ಬಲ ಸಂಗಾತಿಯೆಂದು ತಿಳಿದು ವಿವೇಕದಿಂದ ಒಗತನ ನಡಿಸಬೇಕೆಂದು ಆಜ್ಞಾಪಿಸಲಾಗಿರುತ್ತದೆ. ವಾಕ್ಯದಲ್ಲಿ ಲಿಂಗಭೇದಗಳು ಸ್ಪಷ್ಟವಾಗಿರುತ್ತವೆ, ಆದಾಗ್ಯೂ ಹೆಂಡತಿಯು ಗಂಡನ ಸಂಗಡ "ಜೀವದಲ್ಲಿ ಬಾಧ್ಯಳು" ಆಗಿದ್ದಾಳೆಂದು ಸೂಚಿಸಲಾಗಿರುತ್ತದೆ. ಬೇರೆ ಬೇರೆ ಪಾತ್ರಗಳಿದ್ದರೂ, ಅವರಿಬ್ಬರು ದೇವರ ರಾಜ್ಯದಲ್ಲಿ ಸಮಾನ ಸ್ಥಾನಮಾನವನ್ನು ಹೊಂದಿದ್ದಾರೆ. F. LaGard Smithನು ಈ ತತ್ವವನ್ನು ಒಂದು ಕ್ರೀಡೆಯ ಸಾದೃಶ್ಯದ ಮೂಲಕ ದೃಷ್ಟಾಂತಪಡಿಸುತ್ತಾನೆ. ಎಲ್ಲರೂ ಒಂದೇ ತಂಡದಲ್ಲಿರುತ್ತಾರೆ, ಆದರೆ "ಎಲ್ಲಾ ಆಟಗಾರರ ಸ್ಥಾನವು ಒಂದೇ" ಆಗಿರುವದಿಲ್ಲ.[62]

**ವಚನ 29.** ಪೌಲನು ಈ ಪತ್ರಿಕೆಯ ಈ ವಿಭಾಗವನ್ನು ಒಂದು ಗುರುತಿನ ಮೂಲಕ ಮುಕ್ತಾಯಗೊಳಿಸುತ್ತಾನೆ: **ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ** (ನೋಡಿರಿ 3:7-9). ಕ್ರಿಸ್ತನಲ್ಲಿರುವವರು (ಅಬ್ರಹಾಮನ "ಸಂತತಿ"), ಗುರುತಿನ ಮೂಲಕವಾಗಿ "ಅಬ್ರಹಾಮನ ಸಂತತಿಯವರು" ಆಗಿದ್ದಾರೆ. ಕ್ರಿಸ್ತನಲ್ಲಿ ಅವರಿಗಿರುವ ಹಕ್ಕಿನ ಸ್ಥಾನವು ಅವರನ್ನು "ವಾಗ್ದಾನಾನುಸಾರ ಬಾಧ್ಯರ"ನ್ನಾಗಿಸುತ್ತದೆ - ಅಂದರೆ, ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನ. ಆದದರಿಂದ, ಅನ್ಯಜನಾಂಗದ ಕ್ರೈಸ್ತರು ನಂಬಿಕೆಯ ಮೂಲಕವಾಗಿ ದೇವರ ವಾಗ್ದಾನವನ್ನು

ಪಡೆದುಕೊಂಡವರು; ಅವರು ಮೋಶೆಯ ಧರ್ಮಶಾಸ್ತ್ರವನ್ನು ಅನುಸರಿಸುವದು ಅಗತ್ಯವಿರುವದಿಲ್ಲ.

## ಅನ್ವಯಿಸುವಿಕೆ

**ನಂಬಿಕೆಯ ಸರ್ವೋಚ್ಚತೆ (ಅಧ್ಯಾಯ 3)**

ಗಲಾತ್ಯ 3ನೇ ಅಧ್ಯಾಯದಲ್ಲಿ, ಮೋಶೆಯ ಧರ್ಮಶಾಸ್ತ್ರಕ್ಕಿಂತಲೂ ಕ್ರಿಸ್ತನಲ್ಲಿಡುವ ನಂಬಿಕೆಯು ಸರ್ವೋಚ್ಚವಾದದ್ದೆಂಬುದನ್ನು ಹಲವಾರು ವಿಧಗಳಲ್ಲಿ ತೋರಿಸಿ ಕೊಟ್ಟಿರುತ್ತಾನೆ.

*ಪವಿತ್ರಾತ್ಮನ ಪುರಾವೆ* (3:1-5). ಗಲಾತ್ಯದಲ್ಲಿರುವ ಕ್ರೈಸ್ತರು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕವಾಗಿಯೇ ವೈಯಕ್ತಿಕವಾಗಿ ಪವಿತ್ರಾತ್ಮನನ್ನು ಹೊಂದಿಕೊಂಡಿದ್ದರು, ಹೊರತು ಧರ್ಮಶಾಸ್ತ್ರಕ್ಕೆ ವಿಧೇಯರಾಗಿದ್ದರಿಂದಲ್ಲ. ಅವರು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡ ವೇಳೆ ತಮ್ಮಲ್ಲಿ ವಾಸಿಸುವಂತೆ ಪವಿತ್ರಾತ್ಮನ ವರವನ್ನು ಪಡೆದುಕೊಂಡಿದ್ದರು (ನೋಡಿರಿ 3:2, 26, 27; ಅಪೊಸ್ತಲರ ಕೃತ್ಯಗಳು 2:38; ತೀತನಿಗೆ 3:5), ಮತ್ತು ಅವರಿಗೆ ಪವಿತ್ರಾತ್ಮನ ಅದ್ಭುತಕರವಾದ ವರಗಳು ಸಹ ಕೊಡಲ್ಪಟ್ಟಿದ್ದವು (ನೋಡಿರಿ ಅಪೊಸ್ತಲರ ಕೃತ್ಯಗಳು 8:12-17; 19:5, 6). ಯೆಹೂದಿಕರಣಗೊಳಿಸುವ ವ್ಯಕ್ತಿಗಳು ಬರುವದಕ್ಕೆ ಮುಂಚಿತವಾಗಿ ಗಲಾತ್ಯದ ಕ್ರೈಸ್ತರ ಮೂಲಕವಾಗಿ ದೇವರಾತ್ಮನು ಅದ್ಭುತಗಳನ್ನು ನಡಿಸಿದ್ದನೆಂಬುದು ಅವರು ಧರ್ಮಶಾಸ್ತ್ರಕ್ಕೆ ವಿಧೇಯರಾಗದೆಯೇ ದೇವರಿಂದ ಸ್ವೀಕರಿಸಿಕೊಳ್ಳಲ್ಪಟ್ಟಿದ್ದರು ಎಂಬುದನ್ನು ಸ್ಪಷ್ಟಗೊಳಿಸಿತ್ತು. ಅವರು ಯೇಸು ಕ್ರಿಸ್ತನಲ್ಲಿ ಇಟ್ಟ ನಂಬಿಕೆಯ ಆಧಾರದಲ್ಲಿ ಸ್ವೀಕರಿಸಿಕೊಳ್ಳಲ್ಪಟ್ಟಿದ್ದರು.

*ಅಬ್ರಹಾಮನ ಮಾದರಿ* (3:6-9). ಯೆಹೂದ್ಯರ ಪಿತೃವಾದ ಅಬ್ರಹಾಮನು ನಂಬಿಕೆಯ ತತ್ವಕ್ಕೆ ಮಾದರಿ (ಅಥವಾ ಉದಾಹರಣೆ) ಆಗಿರುತ್ತಾನೆ. ಅಬ್ರಹಾಮನು ಹಾರಾನಿನಲ್ಲಿ ವಾಸಿಸುತ್ತಿದ್ದ ವೇಳೆ ದೇವರು ಅವನೊಂದಿಗೆ ಮಾತಾಡಿದನು ಮತ್ತು ಅವರನಿಗೆ ಅಮೂಲ್ಯವಾದ ವಾಗ್ದಾನಗಳನ್ನು ನೀಡಿದನು. ಈ ಘೋಷಣೆಗಳೊಳಗೆ, ದೇವರು ಅಬ್ರಹಾಮನ ಮೂಲಕವಾಗಿ "ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು" (ಆದಿಕಾಂಡ 12:3). ಈ ಮಾತುಗಳು ಕ್ರಿಸ್ತನ ಸುವಾರ್ತೆಯನ್ನು ಎದುರುನೋಡಿದ್ದವು, ಯಾಕೆಂದರೆ ಮಾನವ ವಂಶಾವಳಿಯ ಪ್ರಕಾರವಾಗಿ ಯೇಸುವು ಅಬ್ರಹಾಮನ ಸಂತತಿಯವನಾಗಿದ್ದನು (ಗಲಾತ್ಯ 3:8). ಅನಂತರದಲ್ಲಿ, ಅಬ್ರಹಾಮನು ಕಾನಾನ್ ದೇಶಕ್ಕೆ ಸ್ಥಳಾಂತರಗೊಂಡ ಬಳಿಕ, ಅಬ್ರಹಾಮನಿಗೆ ಒಬ್ಬ ಮಗನು ಹುಟ್ಟುವನೆಂದು ಮತ್ತು ಆತನ ಸಂತತಿಯವರು ಆಕಾಶದಲ್ಲಿರುವ ನಕ್ಷತ್ರಗಳಷ್ಟು ಅಸಂಖ್ಯಾತರಾಗುವರೆಂದು ದೇವರು ವಾಗ್ದಾನ ಮಾಡಿದನು (ಆದಿಕಾಂಡ 15:4, 5). ಅದಕ್ಕೆ ಪ್ರತ್ಯುತ್ತರವಾಗಿ, ಅಬ್ರಹಾಮನು "ಯೆಹೋವನನ್ನು ನಂಬಿದನು; ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು" (ಆದಿಕಾಂಡ 15:6). ನಂಬಿಕೆಯಿಂದ ಜೀವಿಸುವವರು "ನಂಬಿಕೆಯಿಟ್ಟ ಅಬ್ರಹಾಮನ" ಹೆಜ್ಜೆಜಾಡುಗಳಲ್ಲಿ ನಡೆಯುವವರಾಗಿದ್ದಾರೆ ಮತ್ತು ಆತನ ಸಂಗಡ ಆಶೀರ್ವದಿಸಲ್ಪಡುವರು (ಗಲಾತ್ಯ 3:9).

*ಧರ್ಮಶಾಸ್ತ್ರವನ್ನು ಮೀರಿದವರಿಗೆ ಬರಬೇಕಾದ ದಂಡನೆ* (3:10-14, 19-22). ಧರ್ಮಶಾಸ್ತ್ರಕ್ಕೆ ವಿಧೇಯರಾಗುವದರ ಮೂಲಕ ತಮ್ಮ ಸ್ವಂತ ನೀತಿಯನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುವವರು ಶಾಪಗ್ರಸ್ತರು. ಇದು ಸತ್ಯವಾದದ್ದು ಯಾಕೆಂದರೆ ಧರ್ಮಶಾಸ್ತ್ರದ ತತ್ವವು

ಪರಿಪೂರ್ಣತೆಯನ್ನು ಕೇಳುತ್ತದೆ: "ನೇಮನಿಷ್ಠೆಗಳನ್ನು ಆಧಾರಮಾಡಿಕೊಳ್ಳುವವರೆಲ್ಲರೂ ಶಾಪಾಧೀನರಾಗಿದ್ದಾರೆ. ಹೇಗಂದರೆ, ಧರ್ಮಗ್ರಂಥದೊಳಗೆ ಬರೆದಿರುವವುಗಳನ್ನೆಲ್ಲಾ ನಿತ್ಯವೂ ಕೈಕೊಳ್ಳದಿರುವ ಪ್ರತಿಯೊಬ್ಬನು ಶಾಪಗ್ರಸ್ತನೆಂದು ಶಾಸ್ತ್ರದಲ್ಲಿ ಬರೆದದೆ" (3:10). ಅಷ್ಟುಮಾತ್ರವಲ್ಲದೆ, ದೇವರ ಕಟ್ಟಳೆಗಳನ್ನು ಯಾರೂ ಪರಿಪೂರ್ಣವಾಗಿ ಕೈಕೊಂಡು ನಡೆಯಲಾರರು: "ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ರೋಮಾ 3:23). ಹೇಗೂ, ಯೇಸುವಂತೂ ಪಾಪರಹಿತ ಜೀವಿತವನ್ನು ನಡಿಸಿದನು, ಮತ್ತು ಪಾಪದ ಶಾಪವನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಮರಣಿಸಿದನು. ದೇವರು "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು" (2 ಕೊರಿಂಥ 5:21). ಆದದರಿಂದ, ನಾವು ಪಾಪಿಗಳಾಗಿದ್ದೇವಾದರೂ, ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ನಾವು ನೀತಿವಂತರೆಂದು ಎಣಿಸಲ್ಪಡುವದಕ್ಕೆ ಸಾಧ್ಯವಿದೆ.

*ಅಬ್ರಹಾಮನಿಗೆ ಮಾಡಿದ ವಾಗ್ದಾನದ ಆದ್ಯತೆ* (3:15-18). ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು (ಆದಿಕಾಂಡ 12-22) ಧರ್ಮಶಾಸ್ತ್ರವು ಕೊಡಲ್ಪಡುವದಕ್ಕೆ ನೂರಾರು ವರ್ಷಗಳ ಮುಂಚೆಯೇ ಕೊಡಲ್ಪಟ್ಟಿತ್ತು (ವಿಮೋಚನಕಾಂಡ 19-24). ದೇವರು ಒಂದು ಆಣೆಯನ್ನಿಡುವ ಮೂಲಕ ಅಬ್ರಹಾಮನ ಸಂಗಡದ ತನ್ನ ಒಡಂಬಡಿಕೆಯನ್ನು ಸ್ಥಿರಪಡಿಸಿದ್ದನು (ಆದಿಕಾಂಡ 22:15-18). ಆತನು ಅಬ್ರಹಾಮನ ಸಂಗಡ ನೇರವಾಗಿ ಮಾತಾಡಿದ್ದನು, ಆದರೆ ಧರ್ಮಶಾಸ್ತ್ರವಾದರೋ ಇಸ್ರಾಯೇಲ್ಯರಿಗೆ ದೇವದೂತರು ಹಾಗೂ ಒಬ್ಬ ಮಧ್ಯಸ್ತನ (ಮೋಶೆ) ಮೂಲಕವಾಗಿ ಕೊಡಲ್ಪಟ್ಟಿತ್ತು. ಈ ಕಾರಣಗಳಿಗಾಗಿ, ದೇವರ ವಾಗ್ದಾನಗಳು ಧರ್ಮಶಾಸ್ತ್ರಕ್ಕಿಂತ ಆದ್ಯತೆಯನ್ನು ಹೊಂದಿದ್ದವು. ದೇವರ ಅಬ್ರಹಾಮನ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಧರ್ಮಶಾಸ್ತ್ರವು ಯಾವ ವಿಧದಲ್ಲಿಯೂ ತಿದ್ದುಪಡಿ ಮಾಡಲಿಲ್ಲ. ನಿರ್ದಿಷ್ಟವಾಗಿ, ದೇವರು "ಸಂತತಿ" ವಾಗ್ದಾನವನ್ನು ಮಾಡಿದ್ದನು, ಅದು ಕ್ರಿಸ್ತನ ಬರುವಿಕೆಯನ್ನು ಎದುರುನೋಡುವಂಥದ್ದಾಗಿತ್ತು ಎಂಬುದನ್ನು ನಾವು ಗಲಾತ್ಯ 3:16ರಿಂದ ತಿಳಿದುಕೊಂಡಿರುತ್ತೇವೆ. ದೇವರು ಹೀಗೆ ಹೇಳಿದ್ದನು, "ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವದು" (ಆದಿಕಾಂಡ 22:18).

*ಧರ್ಮಶಾಸ್ತ್ರದ ಉದ್ದೇಶ* (3:23-29). ಧರ್ಮಶಾಸ್ತ್ರವು ಕೊಡಲ್ಪಟ್ಟ ಉದ್ದೇಶವು ಒಬ್ಬನ ನೀತಿಯನ್ನು ಸ್ಥಾಪಿಸುವದಾಗಿರಲಿಲ್ಲ, ಆದರೆ ಕ್ರಿಸ್ತನು ಬರುವ ತನಕ ಕಾಯುವ ಆಳಿನಂತಿರುವದೇ ಆಗಿತ್ತು. ಪೌಲನು ಇಲ್ಲಿ ಹೋಲಿಕೆಯನ್ನು ಮಾಡುವದಕ್ಕೆ ಬಳಸಿದ ಚಿತ್ರಣವು ಗ್ರೀಕ್-ರೋಮನ್ ಜಗತ್ತಿನಲ್ಲಿ ಬೆಳೆಯುತ್ತಿರುವ ಒಬ್ಬ ಹುಡುಗನ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಿದ್ದ ದಾಸ-ಸಹಚರನದ್ದಾಗಿದೆ (3:24). ಆ ಹುಡುಗನು ಪ್ರಾಯದ ಯುವಕನಾಗುವ ವೇಳೆ, ಪಾಲಕನನ್ನು ಆತನ ಕರ್ತವ್ಯಗಳಿಂದ ಮುಕ್ತಗೊಳಿಸಲಾಗುತ್ತಿತ್ತು. ಅದೇ ರೀತಿಯಲ್ಲಿಯೇ, ಧರ್ಮಶಾಸ್ತ್ರವು ತಾತ್ಕಾಲಿಕವಾಗಿ ಇರುವದಕ್ಕೋಸ್ಕರ ರಚಿಸಲ್ಪಟ್ಟಿತ್ತು. ಅದು ಯೆಹೂದ್ಯರಿಗೆ ದೇವರು ಮತ್ತು ನೀತಿಯ ಕುರಿತಾಗಿ ಅನೇಕ ಮೂಲಭೂತ ತತ್ವಗಳನ್ನು ಕಲಿಸಿ ಕೊಡುತ್ತಿತ್ತು, ಪಾಪ ಹಾಗೂ ಅವಿಧೇಯತೆಗಳ ಕುರಿತು ಅವರನ್ನು ಎಚ್ಚರಿಸುತ್ತಿತ್ತು. ಹೇಗೂ, ಕ್ರಿಸ್ತನು ತನ್ನ ಧ್ಯೇಯವನ್ನು ನೆರವೇರಿಸಿದಾಗ (ಪರಿಪಕ್ವತೆಯ ವಯಸ್ಸು ಬಂದಾಗ), ಇನ್ನು ಧರ್ಮಶಾಸ್ತ್ರದ ಅಗತ್ಯತೆಯು ಅಲ್ಲಿ ಇರಲಿಲ್ಲ (ಪಾಲಕನು ಮುಕ್ತಗೊಳಿಸಲ್ಪಟ್ಟನು). ಅದರ ಉದ್ದೇಶವು ನೆರವೇರಿಸಲ್ಪಟ್ಟಿತ್ತು.

## ಶಿಲುಬೆಗೇರಿಸಲ್ಪಟ್ಟ ಕ್ರಿಸ್ತನು (3:1)

ಗಲಾತ್ಯದಲ್ಲಿ ಬೋಧಿಸುವ ವೇಳೆ, ಪೌಲನು ಶಿಲುಬೆಯ ಮೇಲೆ ಕ್ರಿಸ್ತನು ಪಾಪ ಪ್ರಾಯಶ್ಚಿತ್ತಕ್ಕಾಗಿ ಅನುಭವಿಸಿದ ಮರಣದ ಕುರಿತು ಸುಸ್ಪಷ್ಟವಾಗಿ ವಿವರಿಸಿದ್ದನು (3:1). ಕೊರಿಂಥದಲ್ಲಿ ತಾನು ಮಾಡಿದ ಸೇವೆಯ ವಿಷಯದಲ್ಲಿ, ಅಪೊಸ್ತಲನು ಹೀಗೆ ಬರೆದನು, "ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು" (1 ಕೊರಿಂಥ 2:2). ತಾನು ಯೇಸುವಿನ ಮರಣದ ವಿಷಯವನ್ನು ಮಾತ್ರವೇ ಚರ್ಚಿಸಿದನೆಂಬುದಾಗಿ ಪೌಲನು ಹೇಳುತ್ತಿಲ್ಲ, ಆದರೆ ಬದಲಾಗಿ ಅದು ಆತನ ಸಂದೇಶದ ತಿರುಳು ಆಗಿತ್ತು. ಅದೇ ಪತ್ರಿಕೆಯೊಳಗೆ ಅನಂತರದಲ್ಲಿ, ಆತನು ಹೀಗೆ ಬರೆದನು, "ನಾನು ನಿಮಗೆ ತಿಳಿಸಿದ ಮೊದಲನೆಯ ಸಂಗತಿಗಳೊಳಗೆ ಒಂದು ಸಂಗತಿಯನ್ನು ನಿಮಗೆ ತಿಳಿಸಿಕೊಟ್ಟೆನು. ಅದು ನಾನು ಸಹ ಕಲಿತುಕೊಂಡದ್ದೇ. ಅದೇನಂದರೆ ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು" (1 ಕೊರಿಂಥ 15:3, 4).

ಯೇಸುವಿನ ಯಜ್ಞವು ಇಂದು ನಮ್ಮ ಸಂದೇಶದ ಹೃದಯಭಾಗವಾಗಿರತಕ್ಕದ್ದು. ಕ್ರಿಸ್ತನ ಶ್ರಮೆ ಹಾಗೂ ವೇದನೆಯನ್ನು ವರ್ಣಿಸುವ ಮೂಲಕ ಮಾತ್ರವಲ್ಲದೆ ಶಿಲುಬೆಯ ಅರ್ಥವನ್ನು ತಿಳಿಸುವ ಮೂಲಕ, ದೇವರ ಆಶ್ಚರ್ಯವಾದ ಕೃಪೆಯ ಮಹತ್ವವನ್ನು ಅರ್ಥಮಾಡಿಕೊಳ್ಳುವಂತೆ ಬೇರೆಯವರಿಗೆ ಸಹಾಯ ಮಾಡಬಲ್ಲೆವು. ಯೇಸುವಿನ ಮರಣದ ಕುರಿತು ಸೂಕ್ಷ್ಮವಾಗಿ ಅವಲೋಕಿಸುವದು ಯಾವ ಪಾಪದ ಪ್ರಾಯಶ್ಚಿತ್ತಕ್ಕಾಗಿ ಆತನು ಮರಣಿಸಿದನೋ ಆ ಪಾಪದ ಅಪರಾಧಕರ ಸ್ವಭಾವವನ್ನು ಗುರುತಿಸುವಂತೆ ಜನರೊಳಗೆ ಸಹಾಯ ಮಾಡಬಲ್ಲದು. ಆದು ಪಾಪಕ್ಕಾಗಿ ಮಾಡಲ್ಪಟ್ಟ ಏಕೈಕ ಯಜ್ಞವಾಗಿರುವ ಯೇಸುವಿನಲ್ಲಿ ರಕ್ಷಕನೆಂದು ಆಳವಾದ ವಿಶ್ವಾಸವಿಡುವಂತೆ ಸಹ ಮಾಡಬಲ್ಲದು.

ನಾವು ಪ್ರತಿ ವಾರವೂ ಯೇಸುವಿನ ಮರಣವನ್ನು ನೆನಪು ಮಾಡಿಕೊಳ್ಳುವಂತೆ ದೇವರು ಸಭೆಯ ಮುಂದೆ ಒಂದು ಸ್ಮರಣೆಯನ್ನು ಇಟ್ಟಿರುತ್ತಾನೆ. ಕರ್ತನ ದಿನದಂದು, ಆವು ಕರ್ತನ ಭೋಜನವನ್ನು ಆಚರಿಸುತ್ತೇವೆ (ಅಪೊಸ್ತಲರ ಕೃತ್ಯಗಳು 20:7). ಕ್ರಿಸ್ತನ ಶ್ರಮೆಗಳ ಕುರಿತಾದ ಈ ನಿರಂತರವಾದ ಸ್ಮರಣೆಯು ನಮ್ಮ ಸ್ವಂತ ಸತ್ಕಾರ್ಯಗಳಲ್ಲಿ ಅಥವಾ ನೀತಿಯಲ್ಲಿ ವಿಶ್ವಾಸವಿಟ್ಟುಕೊಳ್ಳದಂತೆ ನಮ್ಮನ್ನು ತಡೆಯತಕ್ಕದ್ದು. ಅಷ್ಟುಮಾತ್ರವಲ್ಲದೆ, ಅದು ಶಿಲುಬೆಗೇರಿಸಲ್ಪಟ್ಟ ಮತ್ತು ಪುನರುತ್ಥಾನಗೊಂಡ ಕರ್ತನಲ್ಲಿ ನಮ್ಮ ನಂಬಿಕೆಯನ್ನು ಇನ್ನಷ್ಟು ಆಳವಾಗಿಡುವಂತೆ ಮಾಡತಕ್ಕದ್ದು. ನಾವು ಸಂಕೇತದ ಆಚಾರಗಳಲ್ಲಿ ಪಾಲ್ಗೊಳ್ಳುವ ವೇಳೆ, ನಾವು ಆತನ ದೇಹ ಮತ್ತು ರಕ್ತವನ್ನು ಮಾತ್ರವೇ ಜ್ಞಾಪಿಸಿಕೊಳ್ಳುವದಿಲ್ಲ ಆದರೆ "ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿಪಡಿಸುತ್ತೇವೆ" (1 ಕೊರಿಂಥ 11:26).

## ಒಡಂಬಡಿಕೆಗಳ ನಡುವಿನ ವಿರುದ್ಧ ಹೋಲಿಕೆ (3:3)

ಗಲಾತ್ಯ 3:3ರಲ್ಲಿ ಪೌಲನು ಹೀಗೆ ಕೇಳಿದನು, "ದೇವರಾತ್ಮಾನುಸಾರವಾಗಿ ಪ್ರಾರಂಭಿಸಿ ಈಗ ಬಹಿರಾಚಾರಗಳಿಂದ ಸಿದ್ಧಿಗೆ ಬರಬೇಕೆಂದಿದ್ದೀರಾ?" ಎರಡು ಒಡಂಬಡಿಕೆಗಳ ಕುರಿತಾದ ಅವಲೋಕನಗಳ ಪಾರ್ಶ್ವಸ್ಥ ಕೋನದಿಂದ, ಅವುಗಳ ನಡುವಿನ ವ್ಯತ್ಯಾಸವು ಅವುಗಳಲ್ಲಿರುವ *ವಿಷಯದ*ಲ್ಲಿ ಮಾತ್ರವೇ ಆಗಿರುವದಿಲ್ಲ ಆದರೆ ಬದಲಾಗಿ ಅವುಗಳ *ಸಾರಭೂತವಾದ ಸ್ವಭಾವದ*ಲ್ಲಿ ಆಗಿರುತ್ತದೆ. ಕ್ರಮೇಣದಲ್ಲಿ, ಶತಮಾನಗಳ ಕಾಲದಲ್ಲಿ, ಕ್ರೈಸ್ತ ಜೀವಿತ ಹಾಗೂ

ಆರಾಧನೆಗಳಲ್ಲಿ ಲೌಕಿಕವಾದ, ಪ್ರಾಕೃತ ಅಂಶಗಳನ್ನು ಪರಿಚಯಿಸಲಾಗಿರುತ್ತದೆ. ಇವುಗಳು ಪವಿತ್ರಾತ್ಮನ ಅನುಸಾರವಾಗಿರುವದಿಲ್ಲ. Martin Luther ಮತ್ತು ಇತರ ಸುಧಾರಣಾವಾದಿಗಳು ಕ್ರೈಸ್ತ ನಂಬಿಕೆಯ ವ್ಯವಸ್ಥೆಯಲ್ಲಿ ಅವಕಾಶವೇ ಇಲ್ಲದಂಥ ಆಚಾರಗಳನ್ನು ತೊಲಗಿಸಿ ಶುದ್ಧೀಕರಿಸುವ ಕೆಲಸವನ್ನು ಆರಂಭಿಸಿದ್ದರು; ಆದರೆ, ಪುನಃ ಪುನಃ, ಅವರ ಅನುಯಾಯಿಗಳು ಹಳೆಯ ಒಡಂಬಡಿಕೆಯ ಆಚಾರಗಳಿಗೆ ಮರಳಿಸುತ್ತಾರೆ. ಇಂದು ನಮ್ಮ ದಿನಗಳಲ್ಲಿ ಕ್ರೈಸ್ತರೆಂದು ಹೇಳಿಕೊಳ್ಳುವ ಅನೇಕರು ಎರಡು ಒಡಂಬಡಿಕೆಗಳ ನಡುವೆ ಇರುವ ಸ್ಪಷ್ಟವಾದ ವ್ಯತ್ಯಾಸವನ್ನು ಗ್ರಹಿಸಿಕೊಳ್ಳಲಾರರು. ಕೆಲವರು ಹೇಳುವ ಪ್ರಕಾರ, ನಾವು ಇಲ್ಲಿ ಕೇವಲ ಬಹಿರಾಚಾರಗಳ ವಿಷಯದಲ್ಲಿ ಮಾತ್ರವೇ ಚರ್ಚಿಸುತ್ತಿಲ್ಲ, ಆದರೆ ಕ್ರಿಸ್ತನ ಸುವಾರ್ತೆಯ *ತಿರುಳಿನ* ಬಗ್ಗೆ ಚರ್ಚಿಸುತ್ತಿದ್ದೇವೆ. *ಇಲ್ಲಿ ಪೌಲನು ಹೊಸ ಒಡಂಬಡಿಕೆಯ ಸಿದ್ಧಾಂತದ ಕಡೆಗೆ ಇರುವ ನೇಮನಿಷ್ಠಾತ್ಮಕ ಮನೋಭಾವವನ್ನು ಕುರಿತು ಚರ್ಚಿಸುತ್ತಿದ್ದಾನೋ ಎಂಬಂತೆ, ಗಲಾತ್ಯದವರಿಗೆ ಬರೆದ ಪತ್ರಿಕೆಯು ನೇಮನಿಷ್ಠೆಯ ಕುರಿತ ಒಂದು ಪ್ರಬಂಧ ಗ್ರಂಥವಾಗಿರುವದಿಲ್ಲ.* ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ "ನೇಮನಿಷ್ಠೆ" ಎಂಬ ಪದವು ಈ ವಿಧದಲ್ಲಿ ಅನ್ವಯಿಸಲ್ಪಟ್ಟಿರುವದಿಲ್ಲ. ಅಪೊಸ್ತಲನು ಗಲಾತ್ಯ 1:6-8ರಲ್ಲಿ ಅಷ್ಟೊಂದು ತೀವ್ರವಾಗಿ ವಿರೋಧಿಸುತ್ತಿದ್ದಂಥ ಸುವಾರ್ತೆಯನ್ನು ಕುರೂಪಗೊಳಿಸುವಿಕೆಯು ಏನಾಗಿತ್ತೆಂದರೆ ಕ್ರೈಸ್ತರ ಮೇಲೆ *ಮೋಶೆಯ* ಧರ್ಮಶಾಸ್ತ್ರವನ್ನು ಕಡ್ಡಾಯಗೊಳಿಸುವದೇ. ಕೃಪೆಯಿಂದಲೇ ರಕ್ಷಣೆ ಎಂಬುದಾಗಿ ಪೌಲನಷ್ಟು ಖಡಾಖಂಡಿತವಾಗಿ ಹೇಳಿರುವವರು ಬೇರೆ ಯಾರೂ ಇರಲಾರರು, ಆದರೆ ಕ್ರಿಸ್ತನ ಶಿಷ್ಯರಿಂದ ದೇವರು ಅಪೇಕ್ಷಿಸುವಂಥ ವಿಧೇಯತೆಯ ವಿರುದ್ಧವಾಗಿ ಈ ಕೃಪೆಯನ್ನು ನಿಲ್ಲಿಸುವ ಕೆಲಸವನ್ನು ಆತನು *ಎಂದಿಗೂ* ಮಾಡಲಿಲ್ಲ.

## ಧರ್ಮಶಾಸ್ತ್ರದಿಂದ ವಿಮೋಚನೆ (3:10-14)

ಗಲಾತ್ಯ 3:10-14ರಲ್ಲಿ, ಧರ್ಮಶಾಸ್ತ್ರಕ್ಕೆ ವಿಧೇಯರಾಗುವ ಮೂಲಕವಾಗಿ ತಮ್ಮನ್ನು ನೀತಿವಂತರೆಂದು ನಿರ್ಣಯಿಸಿಕೊಳ್ಳಲು ಪ್ರಯತ್ನಿಸುವವರು ಶಾಪಗ್ರಸ್ತರು ಎಂದು ಪೌಲನು ಹೇಳಿದನು. ಇದು ಸತ್ಯವಾದದ್ದು ಯಾಕೆಂದರೆ ಧರ್ಮಶಾಸ್ತ್ರಕ್ಕೆ ಪರಿಪೂರ್ಣವಾದ ವಿಧೇಯತೆಯ ಅಗತ್ಯವಿರುತ್ತದೆ. ಹೇಗೂ, ಪಾಪರಹಿತ ಕ್ರಿಸ್ತನು ಶಿಲುಬೆಯ ಮೇಲೆ ನಮಗೋಸ್ಕರ ಶ್ರಮೆಯನ್ನು ಅನುಭವಿಸಿದ ವೇಳೆ ಧರ್ಮಶಾಸ್ತ್ರದ ಶಾಪವನ್ನು ತಾನು ಹೊತ್ತಕೊಂಡನು. ಆದದರಿಂದ, ಯೇಸುವಿನಲ್ಲಿ ನಂಬಿಕೆಯನ್ನಿಡುವ ಮೂಲಕ, ನಾವು ರಕ್ಷಣೆಯ ಮತ್ತು ಪವಿತ್ರಾತ್ಮನ ನೆಲೆಸುವಿಕೆಯ ಆಶೀರ್ವಾದಗಳನ್ನು ಪಡೆದುಕೊಳ್ಳಬಲ್ಲೆವು. ಪೌಲನು ರೋಮಾಪುರದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ ಇದೇ ರೀತಿಯ ವಿಚಾರಗಳನ್ನು ವ್ಯಕ್ತಪಡಿಸಿದನು:

> ಧರ್ಮಶಾಸ್ತ್ರವು ನಮ್ಮ ಶರೀರಾಧೀನಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು. ಏನಂದರೆ ಆತನು ಪಾಪನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು. ಹೀಗಿರಲು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರಾದ ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು [δικαίωμα, *dikaiōma*] ನೆರವೇರುವದಕ್ಕೆ ಮಾರ್ಗವಾಯಿತು (ರೋಮಾ 8:3, 4).

ಬೇರೊಂದು ಮಾರ್ಗವು ಇರಲೇ ಇಲ್ಲ! ಧರ್ಮಶಾಸ್ತ್ರದ ಈ "ನಿಯಮ"ವು

ಮಾರ್ಪಾಟಾಗುವದಕ್ಕೆ ಸಾಧ್ಯವಿರಲಿಲ್ಲ - ದೇವರಿಗೆ ಹೇಗೆ ಮಾರ್ಪಟಾಗಲು ಸಾಧ್ಯವಿಲ್ಲವೋ ಅಷ್ಟೇ ಮಾನವನಿಗಾಗಿ ಅದು ಮಾರ್ಪಾಟಾಗಲಾರದ್ದಾಗಿತ್ತು - ಯಾಕೆಂದರೆ ಧರ್ಮಶಾಸ್ತ್ರವು ವಿಧೇಯತೆಯನ್ನು ಕೇಳುತ್ತದೆ. ಕಟ್ಟುನಿಟ್ಟಿನ ಅರ್ಥದಲ್ಲಿ ಧರ್ಮಶಾಸ್ತ್ರವು ಇರುವಂಥದಾಗಿದ್ದು, ಅದಕ್ಕೂ ಕೃಪೆ ಅಥವಾ ಕರುಣೆಗೂ ಸಂಬಂಧವೇ ಇರಲಿಲ್ಲ ಆದರೆ ನ್ಯಾಯದ ಬೇಡಿಕೆಗಳಿಗೆ ಮಾತ್ರವೇ ಸಂಬಂಧವಿತ್ತು. ಅಷ್ಟುಮಾತ್ರವಲ್ಲದೆ, ಈ ಧರ್ಮಶಾಸ್ತ್ರವು ನೀತಿ ಮತ್ತು ನ್ಯಾಯಯುಳ್ಳದ್ದಾಗಿತ್ತು. ಧರ್ಮಶಾಸ್ತ್ರದ ನೀತಿವಂತಿಕೆಯು ಅದರ ಹೊಳೆಯುವ ಪ್ರಕಾಶವಾಗಿತ್ತು.

ಹಲವಾರು ವರ್ಷಗಳ ಹಿಂದೆ ನಾನು Switzerlandನ Zurichನಲ್ಲಿ ಕೆಲಸ ಮಾಡುತ್ತಿರುವ ವೇಳೆ, ನಾನು ನನ್ನ ಸ್ವೀಜರಲ್ಯಾಂಡಿನ ಜೊತೆಗೆಲಸದವನೊಬ್ಬನನ್ನು ಭೇಟಿಯಾಗುವದಕ್ಕೆ ಕಾರು ಚಲಾಯಿಸುತ್ತಿದ್ದೆನು. ನಾನು ಈ ಮುಂಚೆ ಹಲವಾರು ಬಾರಿ ಪ್ರಯಾಣಿಸಿದ್ದಂಥ ಒಂದು ಬೀದಿಯೊಳಗೆ ತಿರುಗಿಕೊಂಡಾಗ, ನಾನು ಹಿಂದೆ ಕಣ್ಣಾಡಿಸುತ್ತಿರುವ ವೇಳೆ, ನನ್ನ ಹಿಂದೆ ನೀಲಿ ದೀಪಗಳನ್ನು ಉರಿಸಿಕೊಂಡು ಬರುತ್ತಿದ್ದ ಪೋಲಿಸರ ಕಾರನ್ನು ಕಂಡೆನು. ನಾನು ತಕ್ಷಣವೇ ರಸ್ತೆಯ ಬದಿಗೆ ತಿರುಗಿಸಿ ಕಾರನ್ನು ಪಕ್ಕದಲ್ಲಿ ನಿಲ್ಲಿಸಿದೆನು, ನಾನು ಯಾವ ತಪ್ಪು ಮಾಡಿರುವೆನೆಂಬುದು ನನಗಂತೂ ಗೊತ್ತೇ ಇರಲಿಲ್ಲ. ಅದು ಯಾವ ತಪ್ಪೆಂದು ನನಗೆ ಶೀಘ್ರವೆ ಗೊತ್ತಾಗಲಿತ್ತು. ಈ ಬೀದಿಯ ಆರಂಭದಲ್ಲಿ ಒಂದು "ಪ್ರವೇಶವಿಲ್ಲ" ಎಂಬ ಫಲಕವನ್ನು ನೇಡಲಾಗಿದ್ದು ಅದು ನನಗೆ ಗೊತ್ತೇ ಇರಲಿಲ್ಲ. ಇದು ನಾನು ಪಟ್ಟಣದಲ್ಲಿ ಕಳೆಯಲಿದ್ದ ಕಡೇ ದಿನದಂದು ಸಂಭವಿಸಿತ್ತು, ಯಾಕೆಂದರೆ ಮರುದಿನ ನಾನು ಅಮೇರಿಕಕ್ಕೆ ಹಿಂದಿರುಗಲು ವಿಮಾನ ಪ್ರಯಾಣ ಮಾಡುವದು ನಿಗದಿಯಾಗಿತ್ತು. ಅಷ್ಟುಮಾತ್ರವಲ್ಲದೆ, ಪಟ್ಟಣದ ಎಲ್ಲಾ ಕಛೇರಿಗಳು ಮುಚ್ಚುವದಕ್ಕೆ ಇನ್ನೂ ಒಂದು ತಾಸಿಗೂ ಕಡಿಮೆ ಸಮಯವಿತ್ತು. ಪೋಲಿಸ ಅಧಿಕಾರಿಯೊಂದಿಗೆ ಮನವಿ ಮಾಡಿಕೊಳ್ಳುತ್ತಾ, ನಾನು ಹೀಗೆ ಹೇಳಿದ್ದೆನು: "ಆಫೀಸರವರೇ, ವಿಷಯ ಏನೆಂದರೆ, ನಾನು Zurich ಪಟ್ಟಣದಲ್ಲಿ ಅನೇಕ ವರ್ಷಗಳಿಂದಲೂ ನೆಲೆಸಿದ್ದೇನೆ ಮತ್ತು ನಾನು ಇದುವರೆಗೂ ಯಾವದೇ ಸಂಚಾರಿ ಉಲ್ಲಂಘನೆಯನ್ನು ಮಾಡಿ ಚೀಟಿ ಪಡೆದಿರುವದಿಲ್ಲ." ಮುಗುಳ್ನಗುತ್ತಾ ತನ್ನ ಲೇಖನಿಯನ್ನು ಚಿಕ್ಕ ಪ್ಯಾಡಿಗೆ ಸಿಕ್ಕಿಸುತ್ತಾ, ಆ ಅಧಿಕಾರಿಯು ಹೀಗೆ ಉತ್ತರಿಸಿದನು, "ನೀನು ಎದುರುನೋಡುತ್ತಿರುವಿ? ಅದಕ್ಕೋಸ್ಕರ ಒಂದು ಪದಕವನ್ನು ಪಡೆಯಲು ಅರ್ಹನೆಂದು ಭಾವಿಸಿಕೊಂಡಿದ್ದೀಯೋ?" ಖಂಡಿತವಾಗಿಯೂ, ನನಗೆ ಬೇಕಾದದ್ದು ನ್ಯಾಯವಲ್ಲ ಆದರೆ ಕರುಣೆಯೇ. ನಾನು ಇತ್ತೀಚೆಗೆ ನೇಡಲಾಗಿದ್ದ ಸಂಚಾರಿ ಫಲಕವನ್ನು ನೋಡಿರಲಿಲ್ಲ, ಆದ್ದರಿಂದ ನನ್ನ ಉಲ್ಲಂಘನೆಯು ತಿಳಿಯದೆ ಆದ ತಪ್ಪಾಗಿತ್ತು. ಹೇಗೂ, ಈ ಮನುಷ್ಯನು ಒಬ್ಬ ನ್ಯಾಯಾಧೀಶನಾಗಿರಲಿಲ್ಲ; ಆತನು ಕಾನೂನಿನ ಅಧಿಕಾರಿಯಾಗಿದ್ದನು. ನಾನು ಆ ಚೀಟಿಯನ್ನು ತೆಗೆದುಕೊಂಡು ಸೂಕ್ತವಾದ ಕಛೇರಿಗೆ ಅವಸರದಿಂದ ಹೋದೆನು ಮತ್ತು - ದೇವರ ಕೃಪೆಯಿಂದ - ಕಛೇರಿಯು ಮುಚ್ಚುವದಕ್ಕೆ ಮುನ್ನವೇ ಸಾಲವನ್ನು ಇತ್ಯರ್ಥಗೊಳಿಸಿದೆನು. ನನಗೆ ಧರ್ಮಶಾಸ್ತ್ರದ ಸ್ವಭಾವದ ಕುರಿತಾದ ಒಂದು ಪ್ರಾಮುಖ್ಯವಾದ ಅಂಶವು ಜ್ಞಾಪಕಕ್ಕೆ ಬಂದಿತ್ತು. ಧರ್ಮಶಾಸ್ತ್ರವು ಇರುವದು ವಿಧೇಯವಾಗುವದಕ್ಕಾಗಿಯೇ; ಮತ್ತು ಅದಕ್ಕೆ ವಿಧೇಯರಾಗದಿದ್ದರೆ, ಪರಿಣಾಮಗಳು ಇದ್ದೇ ಇರುತ್ತವೆ.

ಈ ಸ್ವಾರಸ್ಯಕರ ಘಟನೆಯು ಕೇವಲ ವ್ಯರ್ಥ ಕಾಲಹರಣವಾಗಿತ್ತು, ಆದರೆ ದೇವರ ಧರ್ಮಶಾಸ್ತ್ರವು ನಗಾಡುವ ಸಂಗತಿಯಲ್ಲ. ಪೌಲನು ಸಂಕ್ಷೇಪವಾಗಿ ಹೇಳಿದ ಪ್ರಕಾರ, "ಪಾಪವು ಕೊಡುವ ಸಂಬಳ ಮರಣ . . ." ಈ ನಿಯಮವು ಈ ವಚನದ ಮುಕ್ತಾಯದಲ್ಲಿರುವ

ಸಂಗತಿಯನ್ನು ಹೊರತು ಪಡಿಸಿ ಇನ್ನಾವದೇ ಉಪಾಯವನ್ನಾಗಲಿ ಅಥವಾ ನಿವಾಕರ ಪರಿಹಾರವನ್ನಾಗಲಿ ಅನುಗ್ರಹಿಸುವದಿಲ್ಲ: ". . . ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ" (ರೋಮಾ 6:23). ಧರ್ಮಶಾಸ್ತ್ರವಂತೂ, ಅಂತಹ ಯಾವ ಪರಿಹಾರವನ್ನೂ ಒದಗಿಸುವದಿಲ್ಲ. ಧರ್ಮಶಾಸ್ತ್ರವಾಗಿ ಧರ್ಮಶಾಸ್ತ್ರವು ನ್ಯಾಯವಾಗಬೇಕೆಂದು ಕೇಳುತ್ತದೆ; ನ್ಯಾಯವನ್ನು ಒದಗಿಸಲ್ಪಟ್ಟಿದ್ದಾದಲ್ಲಿ, ಮಾನವರು ಸಾರ್ವತ್ರಿಕವಾಗಿ ದಂಡನೆಗೆ ಗುರಿಯಾಗಿರುತ್ತಿದ್ದರು. ಇದು ದೇವರ ಕೃಪೆಯಿಂದಾಗಿ ತಡೆಯಲ್ಪಟ್ಟಿತ್ತು. ಪೌಲನು ಹೀಗೆ ಹೇಳಿದನು,

> ಈಗಲಾದರೋ ದೇವರಿಂದ ದೊರಕುವ ನೀತಿಯು ಧರ್ಮಶಾಸ್ತ್ರನಿಯಮಗಳಿಲ್ಲದೆ ಪ್ರಕಟವಾಗಿದೆ . . . ದೇವರಿಂದಾಗುವ ಆ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು . . . ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು (ರೋಮಾ 3:21-24).

ನೀತಿಯುಳ್ಳ ದೇವರು ಹೇಗೆ ಅನೀತಿವಂತನನ್ನು ನೀತಿವಂತನೆಂದು ನಿರ್ಣಯಿಸಿಯೂ ಸ್ವತಃ ನೀತಿವಂತನಾಗಿ ಉಳಿಯುವದಕ್ಕೆ ಸಾಧ್ಯವಾಗಿತ್ತು? ಪರಿಹಾರವು ಜಗದುತ್ಪತ್ತಿಗೆ ಮುನ್ನ ದೇವರಿಂದ ಯೋಜಿಸಲ್ಪಟ್ಟ ವಿಮೋಚನೆಯ ಕೆಲಸದಲ್ಲಿಯೇ ಸಿಕ್ಕುತ್ತದೆ. "ವಿಮೋಚನೆ" ಸಾಲದ ಮೊತ್ತವನ್ನು ತೀರಿಸುವದನ್ನು ಸೂಚಿಸುತ್ತದೆ; ಮತ್ತು, ಯೇಸುವಿನ ಯಜ್ಞದಲ್ಲಿ, ದೇವರು ಈ ಸಾಲವನ್ನು ತೀರಿಸಿದನು. ಈ ವಿಧದಲ್ಲಿ, "ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ" (ರೋಮಾ 3:26). ಆತನು ಧರ್ಮಶಾಸ್ತ್ರದ ನಿಮಯವನ್ನು (*ಡಿಕಾಯಿಯೋಮಾ*) ಸಂತೃಪ್ತಿಗೊಳಿಸಿದನು; ಆದದರಿಂದ, ಸಾರ್ವಭೌಮ ಕೃಪೆಯಲ್ಲಿ, ಆತನು ಪಾಪಭರಿತ ವಿಶ್ವಾಸಿಗಳಿಗೆ ತನ್ನ ಸ್ವಂತ ನ್ಯಾಯದ ಧರ್ಮಶಾಸ್ತ್ರವನ್ನು ಯಾವ ವಿಧದಲ್ಲಿಯೂ ಅತಿಕ್ರಮಿಸದೆಯೇ ಕ್ರಿಸ್ತನಲ್ಲಿ ಮಹಿಮಕರವಾದ ನಿತ್ಯ ವಿಮೋಚನೆಯ ವರವನ್ನು ಕೊಡುವದಕ್ಕೆ ಮುಕ್ತವಾಗಿದ್ದನು.

ದೇವರು ತನ್ನೆಲ್ಲಾ ಕೃತ್ಯಗಳಲ್ಲಿ ಸಾರ್ವಭೌಮನಾಗಿದ್ದಾನೆ. ಆತನು ಪ್ರೀತಿಯುಳ್ಳ ಹಾಗೂ ಕರುಣೆಯ ದೇವರು ಎಂದು ಅನೇಕರು ಗುರುತಿಸುತ್ತಾರೆ, ಆದರೆ ಆತನು ನೀತಿ ಹಾಗೂ ನ್ಯಾಯವುಳ್ಳ ದೇವರು ಸಹ ಆಗಿದ್ದಾನೆ. ಆತನ ದೈವಿಕ ಸ್ವಭಾವದ ಗುಣಗಳೊಳಗೆ ಯಾವದೊಂದು ಸಹ ಮತ್ತೊಂದನ್ನು ಅತಿಕ್ರಮಿಸಲಾರದು; ಅವುಗಳೆಲ್ಲಾ ಪರಿಪೂರ್ಣವಾದ ಸಾಮರಸ್ಯದಲ್ಲಿರುತ್ತವೆ. ದೇವರು ತನ್ನ ಅಪರಿಮಿತವಾದ ಜ್ಞಾನದಲ್ಲಿ, ದೇವರು ತನ್ನ ನಿರಾಕರಿಸಲಾಗದ ಪ್ರೀತಿ ಮತ್ತು ಆತನ ಪರಿಪೂರ್ಣ ನ್ಯಾಯ ಎರಡನ್ನೂ ಪ್ರಕಟಗೊಳಿಸುತ್ತಾ ಅದೇ ಸಮಯದಲ್ಲಿ ಮನುಷ್ಯನ ವಿನಾಶಕರವಾದ ಪಾಪ ಸಮಸ್ಯೆಗೆ ಪರಿಹಾರವನ್ನು ಆರಂಭಗೊಳಿಸುವದಕ್ಕಾಗಿ ಏಕೈಕ ಸಂಭಾವ್ಯ ಮಾರ್ಗವೊಂದನ್ನು ಕಲ್ಪಿಸಿಕೊಂಡನು.

ಈ ವಿಧದಲ್ಲಿ, ಧರ್ಮಶಾಸ್ತ್ರವು ಪ್ರಸನ್ನಗೊಳಿಸಲ್ಪಟ್ಟಿತು - ಆದರೆ ಮನುಷ್ಯನ ಪಾಪದ ಸಮಸ್ಯೆಯು ನಿಜವಾಗಿಯೂ ಬಗೆಹರಿಸಲ್ಪಟ್ಟಿತೋ? ನಾವು ಕ್ರೈಸ್ತರಾದ ಮೇಲೆ ಪಾಪ ಮಾಡುವದನ್ನು ನಿಲ್ಲಿಸಿದೆಯೋ? ಯೋಹಾನನು ಸ್ಪಷ್ಟವಾಗಿರುವದನ್ನು ತಿಳಿಸುತ್ತಾನೆ: "ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬದು ನಮ್ಮಲ್ಲಿಲ್ಲ" (1 ಯೋಹಾನ 1:8). ದೇವರೊಂದಿಗಿನ ನಮ್ಮ ಸಂಬಂಧವು ನಮ್ಮ

ಪಾಪದ ಮೇಲೆ ಪೂರ್ವಸೂಚಿತವಾಗಿರುತ್ತದೆ. ಯೋಹಾನನು ಹೀಗೆ ಹೇಳಿದನು, "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು" (1 ಯೋಹಾನ 1:9). ಆತನು ಮುಂದುವರೆಸಿ ಹೇಳಿದ್ದೇನೆಂದರೆ, "ನಾವು ಪಾಪಮಾಡಲಿಲ್ಲವೆಂದು ಹೇಳಿದರೆ ಆತನನ್ನು ಸುಳ್ಳುಗಾರನನ್ನಾಗಿ ಮಾಡುತ್ತೇವೆ ಮತ್ತು ಆತನ ವಾಕ್ಯವು ನಮ್ಮಲ್ಲಿ ಇಲ್ಲ" (1 ಯೋಹಾನ 1:10). ನಾನು ಪಾಪಿಗಳಾಗಿ ದೇವರ ಸಂಗಡ ನಮ್ಮ ಸಂಬಂಧವನ್ನು ಆರಂಭಗೊಳಿಸಿದ್ದು ಮಾತ್ರವೇ ಅಲ್ಲ, ಆದರೆ, ಕರ್ತನ ರಕ್ತದಿಂದ ಶುದ್ಧಪಡಿಸಲ್ಪಟ್ಟವರಾಗಿಯೂ, ನಾವು ಪಾಪಗಳಾಗಿ ಮುಂದುವರೆಯುತ್ತೇವೆ. ಆದದರಿಂದ, ನಾವು ವಾಸ್ತವಿಕವಾಗಿ ಯಾರಾಗಿದ್ದೇವೆಂದು ಅರಿಕೆ ಮಾಡಿ ದೇವರು ನಮ್ಮನ್ನು ಯಾರಾಗಿರಬೇಕೆಂದು ಎಣಿಸಿದ್ದಾನೋ ಅದಾಗುವದಕ್ಕೆ ದೇವರ ಕ್ಷಮಾಪಣೆಯ ಕೃಪೆಯನ್ನು ಕಂಡುಕೊಳ್ಳುವ ಅಗತ್ಯತೆಯಲ್ಲಿರುತ್ತೇವೆ.

ದೇವರು ಆರಂಭಿಸಿದ ಪರಿಹಾರವು ಶಿಲುಬೆ ಮರಣದ ವಿಮೋಚನಾ ಕ್ರಿಯೆಯೇ ಆಗಿತ್ತು. ಇದು ಧರ್ಮಶಾಸ್ತ್ರದ ಬೇಡಿಕೆಯನ್ನು ಸಂತೃಪ್ತಿಗೊಳಿಸಿತು ಮತ್ತು ದೇವರ ಬಹುವಿಧವಾದ ಕೃಪೆಯನ್ನು ವಿಶ್ವಾಸಿಗಳ ಮೇಲೆ ಸುರಿಸಿತು. ಇದೆಲ್ಲವೂ ದೇವರ ಕೆಲಸವಾಗಿತ್ತು ಮತ್ತು ಆಗಿರುತ್ತದೆ. ಹಾಗಾದರೆ, ಮನುಷ್ಯನು ನ್ಯಾಯವಂತ ಅಥವಾ ನೀತಿವಂತ ಎಂದು ಎಣಿಸಲ್ಪಡುವ ಈ ಪ್ರಕ್ರಿಯೆಯಲ್ಲಿ ಆತನ ಪಾತ್ರವೇನು?

ಒಂದು ಸರಳವಾದ ಉತ್ತರವು ಏನೆಂದರೆ ನಾವೇನಾಗಿದ್ದೇವೆಂಬುದರ ದುಃಖಕರವಾದ ವಾಸ್ತವಿಕತೆಯನ್ನು ಅರಿಕೆ ಮಾಡತಕ್ಕದ್ದು ಮತ್ತು ರಕ್ಷಕನ ಅಂತ್ಯವಾಗದ ಪ್ರೀತಿಯಲ್ಲಿ ಭರವಸವಿಡಬೇಕು. ಹಳೇ ಸಂಕೀರ್ತನೆಯಾದ "ರಾಕ್ ಆಫ್ ಎಜಸ್"ನ ಸರಳವಾದ ಮಾತುಗಳಲ್ಲಿ, ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದ ಮಹೋನ್ನತ ಸತ್ಯವನ್ನು ಕಾಣುತ್ತೇವೆ:

ನನ್ನ ಕೈಗಳ ಪರಿಶ್ರಮವು
ಧರ್ಮಶಾಸ್ತ್ರದ ಬೇಡಿಕೆಗಳನ್ನು ನೆರವೇರಿಸಲಾರದು;
ನನ್ನ ಆಸಕ್ತಿಯು ಶಮನವನ್ನು ತಿಳಿಯಲಾರದು,
ನನ್ನ ಕಣ್ಣೀರು ಸದಾ ಹರಿಯಲಿ,
ಅದು ನನ್ನೆಲ್ಲಾ ಪಾಪಕ್ಕೆ ಪ್ರಾಯಶ್ಚಿತ್ತವಾಗದು,
ನೀನು ರಕ್ಷಿಸಬೇಕು ನೀನು ಮಾತ್ರವೇ.

ನಾನು ನನ್ನ ಕೈಯಲ್ಲಿ ತರುವ ಯಾವದೂ ಇಲ್ಲ:
ಶಿಲುಬೆಗೆ ಮಾತ್ರವೇ ಅಂಟಿಕೊಳ್ಳುವೆನು;
ಬೆತ್ತಲೆಯಾಗಿ, ಉಡುಪಿಗೋಸ್ಕರ ನಿನ್ನ ಬಳಿ ಬರುವೆನು;
ಸಹಾಯಕನಾಗಿ, ಕೃಪೆಗೋಸ್ಕರ ನಿನ್ನನ್ನು ದೃಷ್ಟಿಸುವೆನು;
ಹೊಸಲಾಗಿ, ನೀರಿನ ಬುಗ್ಗೆಗೆ ಹಾರುವೆನು:
ತೊಳೆ, ನನ್ನನ್ನು ರಕ್ಷಕನೇ, ಇಲ್ಲವಾದರೆ ಸಾಯುವೆನು.[63]

ನಾವು ಇದನ್ನು ಒಪ್ಪಿಕೊಳ್ಳಲು ಎಷ್ಟೇ ಹಗೆ ಮಾಡಿದರೂ, ಮತ್ತು ನಾವು ಮಾಡುವ ಪಾಪಗಳನ್ನೇ ನಾವು ಎಷ್ಟೇ ದ್ವೇಷಿಸಿದರೂ, ದೇವರೊಂದಿಗಿನ ನಮ್ಮ ಸಂಬಂಧದ ಮೂಲಭೂತ ವಾಸ್ತವಾಂಶವು ಆತನ ಪರಿಶುದ್ಧ ಮತ್ತು ನಮ್ಮ ಪಾಪತನವೇ. ಆತನ ಕೃಪೆಯಿಂದ ಮಾತ್ರವೇ ನಾವು ಆತನೊಂದಿಗೆ ಸರಿಯಾದ ಸಂಬಂಧದಲ್ಲಿ

ಮುಳುಗಿಸಲ್ಪಡಬಲ್ಲೆವು (3:26-29). ಈ ವಾಸ್ತವಾಂಶವು ನಮ್ಮನ್ನು ಅನುದಿನವೂ ಶಿಲುಬೆಯ ಅಡಿಯಲ್ಲಿ ಮೊಣಕಾಲೂರುವಂತೆ ನಡಿಸತಕ್ಕದ್ದು.

ನಾವು ಧರ್ಮಶಾಸ್ತ್ರಕ್ಕೆ ಅಗತ್ಯವಿರುವ ನೀತಿಗೆ ಯೋಗ್ಯರನ್ನಾಗಿ ಮಾಡಿಕೊಳ್ಳುವದಕ್ಕೆ ಸಾಧ್ಯವಿಲ್ಲ, ನಾವು ಧರ್ಮಶಾಸ್ತ್ರ ಎಂಬುದಕ್ಕೆ ದೊಡ್ಡ ಅಕ್ಷರವನ್ನು ಬಳಸಿದರೂ ಸರಿಯೇ ಅಥವಾ ಬಳಸದಿದ್ದರೂ ಸರಿಯೇ. ನಾವು ನಮ್ಮ ಸ್ವಬಲದ ಮೇಲೆ ಏನನ್ನು ಸಾಧಿಸಲಾಗಲಿಲ್ಲವೋ ಅದನ್ನು, ದೇವರು ಪಾಪಪರಿಹಾರಕ ಯಜ್ಞವಾಗಿ ತನ್ನ ಮಗನನ್ನು ಕೊಡುವ ಮೂಲಕ ಸಾಧಿಸಿದನು. ". . . ಆತನು ಪಾಪನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು. ಹೀಗಿರಲು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರಾದ ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು [*dikaiōma*] ನೆರವೇರುವದಕ್ಕೆ ಮಾರ್ಗವಾಯಿತು" (ರೋಮಾ 8:3, 4). ಆದದರಿಂದ ವಿಮೋಚಿಸಲ್ಪಟ್ಟ ಮನುಷ್ಯನು ಪವಿತ್ರಾತ್ಮಾನುಸಾರವಾಗಿ ನಡೆಯತಕ್ಕದ್ದು.

## ನಂಬಿಕೆಯಿಂದಾಗುವ ನೀತಿವಂತಿಕೆ (3:11)

ಅಬ್ರಹಾಮನಿಗೆ ಎಣಿಸಲಾದ ನೀತಿಯು ನಂಬಿಕೆಯಿಂದುಂಟಾದ ನೀತಿಯಾಗಿತ್ತು (ಆದಿಕಾಂಡ 15:5, 6). ದೇವರ ಬಳಿಯಲ್ಲಿ ಬೇರೊಂದು ಮಾರ್ಗವು ಎಂದಿಗೂ ಇರಲೇ ಇಲ್ಲ! ಹಳೆಯ ಒಡಂಬಡಿಕೆಯ ಅಡಿಯಲ್ಲಿ ಜೀವಿಸುವ ನೀತಿವಂತರೆಲ್ಲರು - ಮತ್ತು ಅದಕ್ಕೆ ಮುಂಚೆ ಇದ್ದವರು - ನಂಬಿಕೆಯಿಂದ ಜೀವಿಸಿದ ಪುರುಷರು ಹಾಗೂ ಸ್ತ್ರೀಯರಾಗಿದ್ದರು (ಇಬ್ರಿಯ 11). ದೈವಿಕ ವಾಗ್ದಾನಗಳಲ್ಲಿ ವಿಶ್ವಾಸವನ್ನಿಡುವದು ಯಾವಾಗಲೂ ಮನುಷ್ಯನು ದೇವರೊಂದಿಗೆ ಒಂದು ಸರಿಯಾದ ಸಂಬಂಧವನ್ನಿಟ್ಟುಕೊಳ್ಳಲು ಬುನಾದಿಯಾಗಿರುತ್ತದೆ, ಹೆಬೇಲ ಮತ್ತು ಕಾಯಿನನ ದಿನಗಳಲ್ಲಿ ಸಹ ಹಾಗೆಯೇ ಇತ್ತು (ಇಬ್ರಿಯ 11:4, 7, 39, 40). ಗಲಾತ್ಯ 3ನೇ ಅಧ್ಯಾಯದಲ್ಲಿ, ಪೌಲನು ಅಬ್ರಹಾಮನ ಉದಾಹರಣೆಗೆ ಹಾಗೂ ಬರಲಿರುವ ವಿಮೋಚಕ ಕುರಿತಾಗಿ ಆತನಿಗೆ ಕೊಡಲ್ಪಟ್ಟಿದ್ದ ವಾಗ್ದಾನದ ಮೇಲೆ ಮುಖ್ಯ ಗಮನವನ್ನು ಹರಿಸಿದನು. ಖಂಡಿತವಾಗಿಯೂ, ವಾಗ್ದಾನ ಮಾಡಲ್ಪಟ್ಟ "ಸಂತತಿ" ಆಗಿದ್ದ ಈ ವಿಮೋಚಕನು ಕ್ರಿಸ್ತನೇ (3:16). ದೇವರಿಂದ ಮನುಷ್ಯನು ಸ್ವೀಕರಿಸಿಕೊಳ್ಳಲ್ಪಡುವದಕ್ಕೆ ಮೂಲಭೂತ ಅರ್ಹತೆಯ ಕುರಿತು ಹಲವಾರು ಶಾಸ್ತ್ರಭಾಗಗಳಲ್ಲಿ ಪ್ರತಿಪಾದಿಸಲ್ಪಟ್ಟಿದ್ದು, ಹಬಕ್ಕೂಕ 2:4ರಷ್ಟು ಸ್ಪಷ್ಟವಾಗಿ ಅದು ಬೇರೆ ಎಲ್ಲಿಯೂ ವಿವರಿಸಲ್ಪಟ್ಟಿರುವದಿಲ್ಲ, ಆ ವಚನವು ಗಲಾತ್ಯ 3:11ರಲ್ಲಿ ಉಲ್ಲೇಖಿಸಲ್ಪಟ್ಟಿದೆ: "ನೀತಿವಂತನು ನಂಬಿಕೆಯಿಂದಲೇ ಬದುಕುವನು" (ನೋಡಿರಿ ರೋಮಾ 1:17; ಇಬ್ರಿಯ 10:38).

## ವಾಗ್ದಾನದ ದೇವರು (3:15-18)

ದೇವರು ವಾಗ್ದಾನದ ದೇವರಾಗಿದ್ದಾನೆ. ಹಳೆಯ ಒಡಂಬಡಿಕೆಯಲ್ಲಿ, ಆತನು ನೋಹ, ಅಬ್ರಹಾಮ, ಮೋಶೆ, ಮತ್ತು ದಾವೀದರಂತಹ ವ್ಯಕ್ತಿಗಳೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಂಡನು. ಆತನು ತನ್ನ ವಾಗ್ದಾನಗಳಿಗೆ ಯಾವಾಗಲೂ ನಂಬಿಗಸ್ತನಾಗಿರುತ್ತಾನೆ, ಮತ್ತು ಆತನು ಹೊಸ ಒಡಂಬಡಿಕೆಯಲ್ಲಿ ಮಾಡಿರುವ ವಾಗ್ದಾನಗಳಿಗೂ ನಂಬಿಗಸ್ತನಾಗಿರಲಿದ್ದಾನೆ. ಹೊಸ ಒಡಂಬಡಿಕೆಯಲ್ಲಿ ಹಲವಾರು ವಾಕ್ಯಭಾಗಗಳು ದೇವರ ಸತ್ಯವಂತಿಕೆಯ ಬಗ್ಗೆ ಒತ್ತಿ ಹೇಳುತ್ತವೆ. ಉದಾಹರಣೆಗೆ, ಇಬ್ರಿಯರಿಗೆ ಪತ್ರಿಕೆಯ ಲೇಖಕನು

“ದೇವರು ಸುಳ್ಳಾಡಿರಲಾರನು” (ಇಬ್ರಿಯ 6:18) ಎಂದು ಸಾಕ್ಷಿ ಕೊಡುತ್ತಾನೆ. ಅದೇ ರೀತಿಯಲ್ಲಿಯೇ, ಪೌಲನು “ಸುಳ್ಳಾಡದ ದೇವರು” ಎಂದು ಬರೆಯುತ್ತಾನೆ (ತೀತನಿಗೆ 1:2). ಬೇರೊಂದು ಕಡೆಯಲ್ಲಿ, ಆತನು ಹೀಗೆ ಹೇಳಿದನು, “ನಿಮ್ಮನ್ನು ಕರೆಯುವವನು ನಂಬಿಗಸ್ತನು, ಆತನು ತನ್ನ ಕಾರ್ಯವನ್ನು ಸಾಧಿಸುವನು” (1 ಥೆಸಲೋನಿಕ 5:24).

ಇಂದು ನಾವು ದೇವರ ವಾಗ್ದಾನಗಳಲ್ಲಿ ವಿಶ್ವಾಸವನ್ನಿಡಬಹುದು, ಮತ್ತು ನಮ್ಮ ವಾಗ್ದಾನಗಳನ್ನು ಕಾಪಾಡಿಕೊಳ್ಳುವ ಮೂಲಕವಾಗಿ ಆತನ ಸಾರೂಪ್ಯವನ್ನು ಪ್ರತಿಫಲಿಸುವವರಾಗಿರಬೇಕು. ಕೀರ್ತನೆಗಾರನು ಹೀಗೆ ಕೇಳಿದನು, “ಯೆಹೋವನೇ, ನಿನ್ನ ಗುಡಾರದಲ್ಲಿ ಇಳುಕೊಂಡಿರುವದಕ್ಕೆ ಯೋಗ್ಯನು ಯಾವನು?” ಈ ಪ್ರಶ್ನೆಗೆ ಇರುವ ಉತ್ತರಗಳಲ್ಲೊಂದು ಎಂದರೆ, “ನಷ್ಟವಾದರೂ ಪ್ರಮಾಣತಪ್ಪದವನೂ ಆಗಿರಬೇಕು” (ಕೀರ್ತನೆ 15:1, 4; NIV).

## ಧರ್ಮಶಾಸ್ತ್ರ ಮತ್ತು ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನ (3:15-29)

3:15-29ರಲ್ಲಿರುವ ಸಂಕೀರ್ಣವಾದ ವಿಚಾರಧಾರೆಯಲ್ಲಿ ಪೌಲನು ಧರ್ಮಶಾಸ್ತ್ರ ಹಾಗೂ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನ ನಡುವಿನ ಸಂಬಂಧದ ಕುರಿತು ವಿವರಿಸಿದನು. ಈ ವಾಕ್ಯಭಾಗದಿಂದ ತೆಗೆದುಕೊಳ್ಳಬಹುದಾದ ಕೆಲವೊಂದು ಮುಖ್ಯ ವಿಚಾರಗಳನ್ನು ಆಲೋಚಿಸೋಣ.[64]

*ಧರ್ಮಶಾಸ್ತ್ರವು ವಾಗ್ದಾನವನ್ನು ಬದಲಾಯಿಸುವದಕ್ಕಾಗಲಿಲ್ಲ* (3:15-18). ಮೋಶೆಯ ಧರ್ಮಶಾಸ್ತ್ರವು ದೇವರು ಈ ಮುಂಚೆ ಅಬ್ರಹಾಮನಿಗೆ ಮಾಡಿದ್ದ ವಾಗ್ದಾನದಲ್ಲಿ ಬದಲಾವಣೆಯನ್ನುಂಟು ಮಾಡಲು ಸಾಧ್ಯವಾಗಲಿಲ್ಲ. ವಾಗ್ದಾನದ ಆದ್ಯತೆ, ಜೊತೆಗೆ ದೇವರು ಅದನ್ನು ಒಂದು ಆಣೆಯಿಡುವ ಮೂಲಕ ಸ್ಥಾಪಿಸಿದ್ದರಿಂದ, ಅದನ್ನು ಬದಲಾಯಿಸಲು ಸಾಧ್ಯವಿಲ್ಲದಂತಾಗಿಸಿತ್ತು. ಅಬ್ರಹಾಮನ ಸಂತತಿಯಾದ ಯೇಸು ಕ್ರಿಸ್ತನ ಮೂಲಕವಾಗಿ ಜನಾಂಗಗಳನ್ನು ಆಶೀರ್ವದಿಸಬೇಕೆಂಬುದು ದೇವರ ವಾಗ್ದಾನವಾಗಿತ್ತು.

*ಧರ್ಮಶಾಸ್ತ್ರವು ವಾಗ್ದಾನಕ್ಕಿಂತ ಸರ್ವೋಚ್ಚವಾಗಿತ್ತು* (3:19, 20). ಇದು ಎರಡು ಕಾರಣಗಳಿಗಾಗಿ ಸತ್ಯವಾಗಿತ್ತು. (1) ಧರ್ಮಶಾಸ್ತ್ರವು ತಾತ್ಕಾಲಿಕವಾಗಿತ್ತು (3:19a). ಕ್ರಿಸ್ತನು ಹೊಸ ಒಡಂಬಡಿಕೆಯನ್ನು ಸ್ಥಾಪಿಸಿದಾಗ, ಧರ್ಮಶಾಸ್ತ್ರದ ಅವಶ್ಯಕೆಯು ಇನ್ನು ಇರಲಿಲ್ಲ.(2) ಧರ್ಮಶಾಸ್ತ್ರವು ಒಬ್ಬ ಮಧ್ಯಸ್ಥನ ಮೂಲಕವಾಗಿ ಕೊಡಲ್ಪಟ್ಟಿತ್ತು (3:19b, 20). ದೇವರು ಅಬ್ರಹಾಮನಿಗೆ ನೇರವಾಗಿ ಕೊಟ್ಟಿದ್ದ ವಾಗ್ದಾನಕ್ಕೆ ತದ್ವಿರುದ್ಧವಾಗಿ, ಧರ್ಮಶಾಸ್ತ್ರವು ಇಸ್ರಾಯೇಲ್ಯರಿಗೆ ದೇವದೂತರು ಹಾಗೂ ಒಬ್ಬ ಮಧ್ಯಸ್ಥನ (ಮೋಶೆ) ಮೂಲಕ ಕೊಡಲ್ಪಟ್ಟಿತ್ತು. ಈ ಕಾರಣಕ್ಕಾಗಿ, ಧರ್ಮಶಾಸ್ತ್ರವು ಅಬ್ರಹಾಮನಿಗೆ ದೇವರು ಮಾಡಿದ್ದ ವಾಗ್ದಾನಕ್ಕಿಂತ ಕಡಿಮೆಯಾದದ್ದಾಗಿತ್ತು.

*ಧರ್ಮಶಾಸ್ತ್ರವು ವಾಗ್ದಾನ ವಿರುದ್ಧವಾಗಿರಲಿಲ್ಲ* (3:21-25). ಮೋಶೆಯ ಧರ್ಮಶಾಸ್ತ್ರವು ಅಬ್ರಹಾಮನಿಗೆ ದೇವರು ಮಾಡಿದ್ದ ವಾಗ್ದಾನದ ವಿರೋಧಿಯಾಗಿರಲಿಲ್ಲ. ಅದರ ಉದ್ದೇಶವು ಬದುಕಿಸುವದಾಗಿರಲಿಲ್ಲ, ಆದರೆ “ಪಾಪವನ್ನು ಪ್ರಕಟಗೊಳಿಸುವದು” ಅಥವಾ “ಪಾಪವನ್ನು ನಿಯಂತ್ರಿಸುವದು” ಆಗಿತ್ತು. ಅದು ಕ್ರಿಸ್ತನ ಬರೋಣಕ್ಕಾಗಿ ದಾರಿಯನ್ನು ಸಿದ್ಧಪಡಿಸುವ ಮೂಲಕ ತನ್ನ ಉದ್ದೇಶವನ್ನು ನೆರವೇರಿಸಿತು.

*ವಾಗ್ದಾನವು ಯಾವದನ್ನು ಮಾಡುವದಕ್ಕೆ ಸಾಧ್ಯವಾಗಿತ್ತೋ ಅದನ್ನು ಧರ್ಮಶಾಸ್ತ್ರವು ಮಾಡಲಾಗಲಿಲ್ಲ* (3:26-29). ದೇವರು ಅಬ್ರಹಾಮನಿಗೆ ಮಾಡಿದ್ದ ವಾಗ್ದಾನವು ಕ್ರಿಸ್ತನ

ಮೂಲಕವಾಗಿ ಜನಾಂಗಗಳನ್ನು ಆಶೀವರ್ದಿಸುವದಾಗಿತ್ತು. ಈ ವಾಗ್ದಾನದ ನೆರವೇರಿಸುವ ನಿಟ್ಟಿನಲ್ಲಿ, ಯೇಸುವು ಬಂದು ತನ್ನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ಮೂಲಕರ್ವಾಗಿ ತನ್ನ ಪ್ರಾಯಶ್ಚಿತ್ತದ ಕೆಲಸವನ್ನು ಪೂರ್ತಿಗೊಳಿಸಿದನು. ಈ ಸುವಾರ್ತೆಯನ್ನು ನಂಬಿಕೆಯಿಂದ, ಪಶ್ಚಾತ್ತಾಪ, ಮತ್ತು ದೀಕ್ಷಾಸ್ನಾನ ಮಾಡಿಸಿಕೊಳ್ಳುವದರ ಮೂಲಕವಾಗಿ ಸ್ವೀಕರಿಸಿಕೊಳ್ಳುವವರು ದೇವರ ಐಶ್ವರ್ಯಭರಿತ ಆಶೀರ್ವಾದಗಳಲ್ಲಿ ಪಾಲುಗಾರರಾಗುತ್ತಾರೆ.

ಧರ್ಮಶಾಸ್ತ್ರದ ಕಡೆಗೆ ವೈರಾಗ್ಯದ ಭಕ್ತಿಯುಳ್ಳ ಹಿನ್ನಲೆಯಿಂದ ಬಂದವನಾಗಿ, ಪೌಲನು ಅದರ ಪ್ರಾಮುಖ್ಯತೆಯನ್ನು ತಳ್ಳಿಹಾಕುವದಕ್ಕೆ ಸಾಧ್ಯವೇ ಇರಲಿಲ್ಲ. ಧರ್ಮಶಾಸ್ತ್ರವು ಒಂದು ಪ್ರಾಮುಖ್ಯವಾದ ಕೆಲಸವನ್ನು ನಿರ್ವಹಿಸಿತ್ತೆಂಬುದನ್ನು ಆತನು ಒಪ್ಪಿಕೊಳ್ಳುತ್ತಾನೆ. ಹಾಗಿದ್ದರೂ, ಅದು ಕೊಡಲ್ಪಟ್ಟಿದ್ದ ಉದ್ದೇಶವು ನೆರವೇರಿತ್ತು ಮತ್ತು ಧರ್ಮಶಾಸ್ತ್ರವು ಇನ್ನು ಮೇಲೆ ಕ್ರೈಸ್ತರಿಗೆ ಊರ್ಜಿತವಾಗಿರುವದಿಲ್ಲ ಎಂದು ಖಂಡಿತವಾಗಿ ಹೇಳಿದನು.

## ಕ್ರೈಸ್ತರಿಗೆ ಏನು ಕೊಡಲ್ಪಟ್ಟಿದೆ (3:26-29)

ವಿಧೇಯತೆಯ ನಂಬಿಕೆಯ ಮೂಲಕ ಯೇಸುವಿನ ಸುವಾರ್ತೆಯನ್ನು ಅಂಗೀಕರಿಸಿಕೊಂಡು ಆತನಲ್ಲಿ ಮುಳುಗಿಸಿ ದೀಕ್ಷಾಸ್ನಾನ ಮಾಡಿಸಿಕೊಂಡಿರುವವರಾ ನಾವು ಅಪಾರವಾಗಿ ಆಶೀರ್ವದಿಸಲ್ಪಟ್ಟಿರುತ್ತೇವೆ.

*ನಾವು "ದೇವರ ಪುತ್ರರು"* (3:26). ನಾವು "ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ, ತಂದೆಯೇ, ಎಂದು ಕೂಗುತ್ತೇವೆ" (ರೋಮಾ 8:15b). ಕ್ರಿಸ್ತನ ಮೂಲಕವಾಗಿ, ದೇವರೊಂದಿಗಿನ ನಮ್ಮ ಸಂಬಂಧವು ಮರುಸ್ಥಾಪಿಸಲ್ಪಟ್ಟಿರುತ್ತದೆ. ತಂದೆಯು ನಮ್ಮನ್ನು ತನ್ನ ಮಕ್ಕಳಾಗಿ ಸ್ವೀಕರಿಸಿಕೊಳ್ಳುತ್ತಾನೆ, ಮತ್ತು ಪ್ರಾರ್ಥನೆಯಲ್ಲಿ ಕ್ರಿಸ್ತನ ಮುಖಾಂತರವಾಗಿ ಆತನ ಬಳಿಗೆ ಹೋಗುವದಕ್ಕೆ ನಮಗೆ ಮಾರ್ಗವಾಗಿರುತ್ತದೆ.

*ನಾವು "ಕ್ರಿಸ್ತನನ್ನು ಧರಿಸಿಕೊಂಡಿದ್ದೇವೆ"* (3:27). ಪಾಪದ ಅಪರಾಧವನ್ನು ಧರಿಸಿಕೊಳ್ಳುವದರ ಬದಲಾಗಿ, ನಾವು ಕ್ರಿಸ್ತನನ್ನು ಧರಿಸಿಕೊಂಡಿರುತ್ತೇವೆ. ಆತನ ಪರಿಪೂರ್ಣತೆ ಹಾಗೂ ಆತನ ಯಜ್ಞದ ಕಾರಣದಿಂದಾಗಿ, ನಮ್ಮ ಪರಲೋಕದ ತಂದೆಯ ಮುಂದೆ ನಮ್ಮನ್ನು ನೀತಿವಂತರನ್ನಾಗಿ ಮಾಡುವನು. ನಾವು ಆತನ ಗುಣಸ್ವಭಾವವನ್ನು ಪಡೆದುಕೊಳ್ಳುವದನ್ನು ಮುಂದುವರೆಸಿ, ಪ್ರತಿ ದಿನವೂ ಹೆಚ್ಚೆಚ್ಚಾಗಿ ಆತನಂತಾಗುವೆವು.

*ನಾವು ಕ್ರಿಸ್ತನ ದೇಹದಲ್ಲಿದ್ದೇವೆ* (3:28). ಈ ವೈವಿಧ್ಯದ ದೇಹವು ಯೆಹೂದ್ಯರನ್ನು ಮತ್ತು ಅನ್ಯಜನರನ್ನು, ಶ್ರೀಮಂತರು ಹಾಗೂ ಬಡವರನ್ನು, ಗಂಡು ಮತ್ತು ಹೆಣ್ಣು ಹೀಗೆ ಎಲ್ಲರನ್ನೂ ಒಳಗೊಂಡಿರುತ್ತದೆ. "ಕ್ರಿಸ್ತ ಯೇಸುವಿನಲ್ಲಿರುವವರು" ಕ್ರಿಸ್ತನ ದೇಹ, ಆತನ ಸಭೆಯಾಗಿರುತ್ತಾರೆ.

*ನಾವು "ವಾಗ್ದಾನಕ್ಕನುಸಾರವಾಗಿ ಬಾಧ್ಯರು" ಆಗಿದ್ದೇವೆ* (3:29). ಕ್ರಿಸ್ತನಲ್ಲಿ (ಅಬ್ರಹಾಮನ ಸಂತತಿ) ಇರುವ ಮೂಲಕ, ನಾವು "ಅಬ್ರಹಾಮನ ಸಂತತಿಯವರು" ಆಗಿದ್ದೇವೆ. ನಾವು ಬಹಳ ಕಾಲದ ಹಿಂದೆ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನಕ್ಕೆ "ಬಾಧ್ಯರು" ಆಗಿದ್ದೇವೆ. ನಮ್ಮ ಅಂತಿಮವಾದ ಬಾಧ್ಯತೆಯು ಈ ಲೋಕದಲ್ಲಿರುವದಿಲ್ಲ. ಬದಲಾಗಿ, ನಮಗೆ "ಲಯ ಕಳಂಕ ಕ್ಷಯಗಳಿಲ್ಲದ ಬಾಧ್ಯತೆ . . . ಆ ಬಾಧ್ಯತೆಯು ನಿಮಗೋಸ್ಕರ ಪರಲೋಕದಲ್ಲಿ ಇಟ್ಟಿರುವದು" (1 ಪೇತ್ರ 1:4).

## ಅಡಿಟಿಪ್ಪಣಿಗಳು

[1]Robert L. Johnson, *The Letter of Paul to the Galatians*, The Living Word Commentary (Austin, Tex.: R. B. Sweet Co., 1969), 74. [2]Walter Bauer, *A Greek-English Lexicon of the New Testament and Other Early Christian Literature*, 3rd ed., rev. and ed. Frederick William Danker (Chicago: University of Chicago Press, 2000), 1101. [3]ಇದು ಪುನರುತ್ಥಾನದ ಬಳಿಕ ಎಮ್ಮಾಹುವಿನ ದಾರಿಯಲ್ಲಿ ಯೇಸುವಿನ ಸಂಗಡ ನಡೆದು ಹೋದ ಇಬ್ಬರು ಶಿಷ್ಯರಿಗೆ ಬಳಸಲಾಗಿದೆ, ಅವರಿಗೆ ಆತ್ಮೀಕ ಗ್ರಹಿಕೆಯ ಕೊರತೆಯಿತ್ತು (ಲೂಕನು 24:25). [4]Bauer, 171. [5]Ben Witherington III, *Grace in Galatia: A Commentary on St Paul's Letter to the Galatians* (Grand Rapids, Mich.: Wm. B. Eerdmans Publishing Co., 1998), 202. [6]Kenneth L. Boles, *Galatians & Ephesians*, The College Press NIV Commentary (Joplin, Mo.: College Press Publishing Co., 1993), 71–72. [7]Richard N. Longenecker, *Galatians*, Word Biblical Commentary, vol. 41 (Nashville: Thomas Nelson Publishers, 1990), 100. [8]ಪವಿತ್ರಾತ್ಮನ ಅದ್ಭುತಕರವಾದ ವರಗಳು ಕೆಲವು ಸಾರಿ ದೀಕ್ಷಾಸ್ನಾನದ ವೇಲೆ ಅನುಗ್ರಹಿಸಲ್ಪಡುತ್ತಿದ್ದವು (ಅಪೊಸ್ತಲರ ಕೃತ್ಯಗಳು 19:5, 6), ಅಲ್ಲದೆ ಆ ವೇಳೆಯಲ್ಲಿಯೇ ಪವಿತ್ರಾತ್ಮನ ನೆಲೆಗೊಳ್ಳುವಿಕೆ ಸಹ ಕೊಡಲ್ಪಡುತ್ತದೆ. ಬೇರೆ ಕೆಲವು ಸಮಯಗಳಲ್ಲಿ, ಆ ಅದ್ಭುತಕರ ವರಗಳು ದೀಕ್ಷಾಸ್ನಾನ ಮಾಡಿಸಿಕೊಂಡು ಸ್ವಲ್ಪ ಕಾಲವಾದ ಮೇಲೆ ಕೊಡಲ್ಪಡುತ್ತಿದ್ದವು (ಅಪೊಸ್ತಲರ ಕೃತ್ಯಗಳು 8:14-17). ಎರಡೂ ಪರಿಸ್ಥಿತಿಗಳಲ್ಲಿ, ಅಪೊಸ್ತಲರು ಹಸ್ತಾರ್ಪಣೆ ಮಾಡುವದರ ಮೂಲಕವಾಗಿ ವರಗಳು ಹೊಸ ಕ್ರೈಸ್ತರಿಗೆ ದೊರಕಿದವು. ಕೊರ್ನೇಲ್ಯನ ವಿಷಯದಲ್ಲಿ, ಪವಿತ್ರಾತ್ಮನು ಸುರಿಸಲ್ಪಡುವದು ಅನ್ಯಜನರು ಸಹ ಸುವಾರ್ತೆಯನ್ನು ಸ್ವೀಕರಿಸಲು ಯೋಗ್ಯರು ಎಂಬುದಕ್ಕೆ ಯೆಹೂದ್ಯ ಕ್ರೈಸ್ತರಿಗೆ ಒಂದು ಸೂಚನೆಯಾಗಿ ಕೆಲಸ ಮಾಡಿತ್ತು (ಅಪೊಸ್ತಲರ ಕೃತ್ಯಗಳು 10:44-48). [9]ಹಳೆಯ ಒಡಂಬಡಿಕೆಯಲ್ಲಿ ಪವಿತ್ರಾತ್ಮನು ಸಕ್ರಿಯನಾಗಿದ್ದನಾದರೂ, ಅದ್ಭುತವಾದ ಕಾರ್ಯಗಳು ಸಾಮಾನ್ಯವಾಗಿ ಇಸ್ರಾಯೇಲ್ಯರ ನಾಯಕರಿಗಷ್ಟೇ ಸೀಮಿತವಾಗಿದ್ದವು (ಉದಾ: ಮೋಶೆ, ಸಂಸೋನ, ಮತ್ತು ಎಲೀಯ). ಪವಿತ್ರಾತ್ಮನು "ಎಲ್ಲಾ ಮನುಷ್ಯರ" ಮೇಲೆ ಸುರಿಸಲ್ಪಡುವ ಕಾಲದ ಕುರಿತು ಪ್ರವಾದನೆಯನ್ನು ನುಡಿದಿದ್ದನು (ಯೋವೇ 2:28, 29; ನೋಡಿರಿ ಅಪೊಸ್ತಲರ ಕೃತ್ಯಗಳು 2:17, 18). [10]Bauer, 914–16.

[11]ನೋಡಿರಿ ಗಲಾತ್ಯ 4:11; 1 ಕೊರಿಂಥ 15:2; 2 ಕೊರಿಂಥ 6:1. [12]ನೋಡಿರಿ 2 ಕೊರಿಂಥ 9:10; ಎಫೆಸ 4:16; ಫಿಲಿಪ್ಪಿ 1:19; ಕೊಲೊಸ್ಸೆ 2:19; 1 ಪೇತ್ರ 4:11; 2 ಪೇತ್ರ 1:5, 11. [13]Bauer, 1087. [14]ಗ್ರೀಕ್ ಹೊಸ ಒಡಂಬಡಿಕೆಯಲ್ಲಿ "ಹೊಸ" ಎಂಬುದಕ್ಕೆ ಎರಡು ಪದಗಳು ಬಳಸಲ್ಪಟ್ಟಿವೆ: νέος (*neos*, "ಕಾಲದಲ್ಲಿ ಹೊಸದು," "ಇತ್ತೀಚಿನ") ಮತ್ತು καινός (*kainos*, "ಗುಣದಲ್ಲಿ ಹೊಸದು" ಅಥವಾ "ಬಳಕೆಯಲ್ಲಿ ಹೊಸದು"). ಕಡೆಯ ಪದವು ಮಾರ್ಕ 16:17ರಲ್ಲಿ ಕಾಣಿಸಿಕೊಳ್ಳುತ್ತದೆ. ಪಂಚಾಶತ್ತಮ ದಿನದಂದು ಗಲಿಲಾಯದ ಅಪೊಸ್ತಲರು ಬಳಸಿದ "ಭಾಷೆಗಳು" ಜನಾಂಗೀಯ ಭಾಷೆಗಳಾಗಿದ್ದವು, ಕಾಲದಲ್ಲಿ ಹೊಸದಾಗಿರಲಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ, ಆದರೆ ಖಂಡಿತವಾಗಿಯೂ ಅವರು ಅವುಗಳನ್ನು ಹೊಸದಾಗಿ ಬಳಕೆ ಮಾಡುತ್ತಿದ್ದರು. ಈ ಕಾರ್ಯವೇ ಪಂಚಾಶತ್ತಮ ದಿನದಂದು ಯೆರೂಸಲೇಮಿನಲ್ಲಿ ಹಾಜರಿದ್ದ ಬೇರೆ ಬೇರೆ ಭಾಷಾ ಕ್ಷೇತ್ರದ ಜನರಿಗೆ ಆಶ್ಚರ್ಯವನ್ನುಂಟು ಮಾಡಿತ್ತು (ಅಪೊಸ್ತಲರ ಕೃತ್ಯಗಳು 2:7, 8). [15]ಈ "ಭಾಷೆಗಳು" ಕಲಿತುಕೊಂಡಿರದ, ಜನಾಂಗೀಯ ಭಾಷೆಗಳಾಗಿದ್ದವು (ನೋಡಿರಿ ಅಪೊಸ್ತಲರ ಕೃತ್ಯಗಳು 2:5-11; 10:44-47; 11:15). [16]"ಎಲ್ಲಾ ಮನುಷ್ಯರ" ಎಂಬುದರ ವಿಷಯದಲ್ಲಿ, ಅನ್ಯಜನರ (ಪ್ರತಿನಿಧ್ಯಾತ್ಮಕವಾಗಿ) ಮೇಲೆ ಎರಡನೆಯ ಸುರಿಸಲ್ಪಡುವಿಕೆಯ ಅವಶ್ಯಕತೆಯಿತ್ತು, ಯಾಕೆಂದರೆ ಪಂಚಾಶತ್ತಮದಲ್ಲಿ ಯೆಹೂದ್ಯರು ಮಾತ್ರವೇ ಉಪಸ್ಥಿತರಿದ್ದರು. ಈ ಎರಡನೆಯ ಸಾರಿ ಸುರಿಸಲ್ಪಡುವಿಕೆಗೆ ಒಂದು ಕಾರಣವೆಂದರೆ ಅನ್ಯಜನರು ದೇವರಿಗೆ ಸ್ವೀಕಾರರ್ಹರು ಎಂಬುದಾಗಿ ಯೆಹೂದ್ಯರಿಗೆ ಮನವರಿಕೆ ಮಾಡುವದಕ್ಕಾಗಿ ಆಗಿತ್ತು (ಅಪೊಸ್ತಲರ ಕೃತ್ಯಗಳು 11:1-18). [17]ನೋಡಿರಿ ಯೋಹಾನ 2:18-21; 3:2; 7:31; 9:16; 12:37; 20:30, 31; 1 ಕೊರಿಂಥ 14:21, 22; 2 ಕೊರಿಂಥ 12:12; ಇಬ್ರಿಯ 2:3, 4. [18]ನೋಡಿರಿ ರೋಮಾ 4:1-25; ಇಬ್ರಿಯ 11:8-12, 17-19; ಯಾಕೋಬ 2:18-24. [19]F. F. Bruce, *The Epistle to the Galatians*, The New International Greek Testament Commentary (Grand Rapids, Mich.: Wm. B. Eerdmans Publishing Co., 1982), 155. [20]See Acts 11:18; Rom. 3:24; 6:23.

[21]R. Alan Cole, *The Epistle of Paul to the Galatians*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1965), 92. [22]ನೋಡಿರಿ ರೋಮಾ 2:28, 29; ಫಿಲಿಪ್ಪಿ 3:2, 3; ಕೊಲೊಸ್ಸೆ 2:11-13. [23]Boles, 76. [24]Johnson, 83. [25]ನೋಡಿರಿ 2 ಕೊರಿಂಥ 5:21; ಇಬ್ರಿಯ 4:15; 5:8, 9; 1 ಪೇತ್ರ 2:22; 1 ಯೋಹಾನ 3:5. [26]ನೋಡಿರಿ 1 ಕೊರಿಂಥ 6:20; 7:23; 2 ಪೇತ್ರ 2:1; ಪ್ರಕಟನೆ 5:9; 14:3, 4. [27]Leon Morris, *Galatians: Paul's Charter of Christian Freedom* (Downers Grove, Ill.: InterVarsity Press, 1996), 106. [28]Bauer, 685. [29]Ludwig Koehler and Walter Baumgartner, *The Hebrew and Aramaic Lexicon of the Old Testament*, study ed., trans. and ed.

M. E. J. Richardson (Boston: Brill, 2001), 1:863. [30]ಶಿಲುಬೆಗೇರಿಸಲ್ಪಡುವಿಕೆ ಕುರಿತಾಗಿ ಇನ್ನಷ್ಟು ಮಾಹಿತಿಯು David Stewart, *A Commentary on Philippians* (Searcy, Ark.: Stewart Publications, 2006), 279–83ರಲ್ಲಿ ಕೊಡಲ್ಪಟ್ಟಿದೆ.

[31]Longenecker, 128. [32]Morris, 109. [33]Boles, 82. [34]William M. Ramsay, *A Historical Commentary on St. Paul's Epistle to the Galatians*, Limited Classical Reprint Library (N.p.: G. P. Putnams Sons, 1900; reprint, Minneapolis: Klock & Klock Christian Publishers, 1978), 354–55. [35]ನೋಡಿರಿ ಆದಿಕಾಂಡ 12:7; 13:15, 16; 15:5, 18; 16:10; 17:7-10; 22:17, 18 (KJV). [36]ಪೌಲನು ಅಬ್ರಹಾಮನ ಒಟ್ಟಾರೆ ಆತ್ಮೀಕ "ಸಂತತಿಯವರನ್ನು" ಸೂಚಿಸಲು 3:29ರಲ್ಲಿ ಗ್ರೀಕ್ ಪದವಾದ *ಸ್ಪೇರ್ಮಾ* ಎಂಬುದನ್ನು ಬಳಸಿದನು. ಯೆಹೂದ್ಯಮತದಲ್ಲಿ, ಇಸಾಕನಿಂದಾಗುವ ಭವಿಷ್ಯ ಸಂತತಿಯನ್ನು ಒಟ್ಟಾರೆ ಸೂಚಿಸುವದಕ್ಕೆ *ಜೆರಾ* ಎಂಬ ಪದವು ಬಳಸಲ್ಪಟ್ಟಿರುತ್ತದೆ, ಅದರೊಳಗೆ ಇಸ್ಮಾಯೇಲ ಹಾಗೂ ಏಸಾವನ ಸಂತತಿಗಳನ್ನು ಸೇರಿಸಲಾಗಿರಲಿಲ್ಲ. [37]ಹಳೆಯ ಒಡಂಬಡಿಕೆಯಲ್ಲಿ ದೇವರು ಹಲವಾರು ಪ್ರಾಮುಖ್ಯವಾದ ಒಡಂಬಡಿಕೆಗಳನ್ನು ಮಾಡಿದನು, ಅವುಗಳಲ್ಲಿ ನೋಹನೊಂದಿಗೆ (ಆದಿಕಾಂಡ 9:8-17), ಅಬ್ರಹಾಮ ಮತ್ತು ಆತನ ಕುಟುಂಬದ ಸಂಗಡ (ಆದಿಕಾಂಡ 15:18-21; 17:1-14), ಮೋಶೆಯ ಮೂಲಕ ಇಸ್ರಾಯೇಲ್ಯರ ಸಂಗಡ (ವಿಮೋಚನಕಾಂಡ 19:5, 6; 24:3-8; 34:10), ಮತ್ತು ದಾವೀದ ಹಾಗೂ ಆತನ ಮನೆಯವರ ಸಂಗಡ ಒಡಂಬಡಿಕೆಗಳು ಸೇರಿರುತ್ತವೆ (2 ಸಮುವೇಲ 7:12-16; 23:5). ಅಲ್ಲದೆ ತಾನು ಆದುಕೊಂಡ ಜನರೊಂದಿಗೆ ಒಂದು ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳುವನೆಂದು ಸಹ ಅವರಿಗೆ ಹೇಳಿದನು (ಯೆರೆಮೀಯ 31:31-34; ನೋಡಿರಿ ಇಬ್ರಿಯ 8:6-13). [38]Morris, 111. [39]Ibid. [40]ಈ ಗ್ರೀಕ್ ಕ್ರಿಯಾಪದಗಳು κύριος (*kurios*) ಎಂಬ ನಾಮ ಪದಕ್ಕೆ ಸಂಬಂಧ ಹೊಂದಿವೆ, ಅದು ಅಧಿಕಾರವನ್ನು ಸೂಚಿಸುವ ಪದವಾಗಿದೆ. ಅದರರ್ಥವು "ಕರ್ತನು," "ಯಜಮಾನ," ಅಥವ "ಪರಾಕ್ರಮಿ" ಎಂದಾಗಿರುತ್ತದೆ.

[41]"ಬಾಧ್ಯತೆ" ಎಂಬುದಕ್ಕಿರುವ ಗ್ರೀಕ್ ಪದವು κληρονομία (*klēronomia*). (4:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ.) [42]Johnson, 92. [43]ಧರ್ಮಶಾಸ್ತ್ರವು ತಾತ್ಕಾಲಿಕವಾದದ್ದೆಂಬ ವಿಚಾರವು ಒಬ್ಬ ಪ್ರಥಮ ಶತಮಾನದ ಯೆಹೂದ್ಯನಿಗೆ ನವೀನವೆಂದು ಅನ್ನಿಸಿರಬಹುದು. Ben Witherington III ವಾದಿಸಿದ್ದೇನೆಂದರೆ "ಆದಿ ಯೆಹೂದ್ಯರು ಧರ್ಮಶಾಸ್ತ್ರವು ದೇವರ ಜನರಿಗಾಗಿ ಶಾಶ್ವತವಾದ, ನಿಜ ಹೇಳುವದಾದರೆ ಒಂದು ನಿತ್ಯನಿತ್ಯವಾದ ಉದ್ದೇಶ ಮತ್ತು ಮಹತ್ವಪೂರ್ಣತೆವಿತ್ತದೆಂದು ನಂಬಿದ್ದರು" (Witherington, 254). ಈ ಗ್ರಹಿಕೆಯು *1 Enoch* 99.2; *Jubilees* 1.26–29; Josephus *Against Apion* 2.39ರಲ್ಲಿ ಪ್ರತಿಬಿಂಬಿಸಲ್ಪಟ್ಟಿದೆ. [44]David J. Lull, "'The Law Was Our Pedagogue': A Study in Galatians 3:19–25," *Journal of Biblical Literature* 105 (September 1986): 483. [45]*Jubilees* 1.26–29; Josephus *Antiquities* 15.5.3. [46]J. B. Lightfoot, *The Epistle of St. Paul to the Galatians*, Classic Commentary Library (Grand Rapids, Mich.: Zondervan Publishing House, 1957), 147. [47]Bauer, 1067. [48]ಸಂಬಂಧಿತ ಆಂಗ್ಲ ಪದವಾದ "pedagogue" ಎಂಬುದು "ಶಿಕ್ಷಕ" ಅಥವಾ "ಶಾಲಾ ಬೋಧಕ" ಎಂಬ ಅರ್ಥವನ್ನು ಕೊಡುತ್ತದಾದರೂ, ಇದು ಸತ್ಯವಾಗಿತ್ತು. [49]ಹೆಚ್ಚಿನ ಮಾಹಿತಿಗಾಗಿ, ನೋಡಿರಿ Longenecker, 146–48; Norman H. Young, "*Paidagōgos*: The Social Setting of a Pauline Metaphor," *Novum Testamentum* 29, no. 2 (1987): 150–76; Norman H. Young, "The Figure of the *Paidagōgos* in Art and Literature," *Biblical Archaeologist* 53, no. 2 (June 1990): 80–86. [50]Herodotus *Histories* 8.75.

[51]Libanius *Orations* 58.8. [52]Aristides *In Defense of Oratory* 380. [53]Bruce, 182. [54]Xenophon *Lacedaemonians* 3.1. [55]Robert Guelich, "Custodian," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1979), 1:840. [56]ನೋಡಿರಿ ವಿಮೋಚನಕಾಂಡ 4:22, 23; ಧರ್ಮೋಪದೇಶಕಾಂಡ 14:1, 2; ಹೋಶೇಯ 11:1. [57]*Psalms of Solomon* 17.26, 27; *Jubilees* 1.22–25; *3 Maccabees* 6.28. [58]Bolesನು ಹೀಗೆ ವ್ಯಾಖ್ಯಾನಿಸಿದನು, "ಪವಿತ್ರಾತ್ಮನ ದೀಕ್ಷಾಸ್ನಾನಕ್ಕೆ ಆದ್ಯತೆಯನ್ನು ಕೊಟ್ಟು ನೀರಿನ ದೀಕ್ಷಾಸ್ನಾನವನ್ನು ನಿರ್ಲಕ್ಷ್ಯ ಮಾಡುವವರು ಗಮನಿಸತಕ್ಕದ್ದೇನೆಂದರೆ ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳಬೇಕೆಂದು ಮನುಷ್ಯರಿಗೆ ಎಲ್ಲಿಯೂ ಆಜ್ಞೆಯು ಮಾಡಲ್ಪಟ್ಟಿರುವದಿಲ್ಲ, ಮತ್ತು ಆಜ್ಞಾಪಿಸಲ್ಪಟ್ಟಿಲ್ಲವಾದರೆ ವಿಧೇಯವಾಗುವದಕ್ಕೆ ಸಾಧ್ಯವಿಲ್ಲದ್ದಾಗಿದೆ. ನೀರಿನಲ್ಲಿ ದೀಕ್ಷಾಸ್ನಾನವು ವಿಶ್ವಾಸಿಗಳಿಗೆ ಅಗತ್ಯವೆಂದು ನಿಯತ ಕ್ರಮದಲ್ಲಿ ಹೇಳಲ್ಪಟ್ಟಿದೆ, ಮತ್ತು ಆದಿ ಕ್ರೈಸ್ತರಿಗೆ ಅದು ಸಾಮಾನ್ಯವಾದ ಅನುಭವವಾಗಿತ್ತು" (Boles, 95). [59]Longenecker, 156. [60]ನೋಡಿರಿ 1 ಕೊರಿಂಥ 7:22; 12:13; ಎಫೆಸ 2:14, 15; ಕೊಲೊಸ್ಸೆ 3:11; ಫಿಲೆಮೋನ 16.

[61]ನೋಡಿರಿ 1 ಕೊರಿಂಥ 11:3-16; 14:34-36; ಎಫೆಸ 5:22-33; ಕೊಲೊಸ್ಸೆ 3:18, 19; 1 ತಿಮೊಥೆ 2:8-15; 3:2, 8, 12; ತೀತನಿಗೆ 2:3-5. (ನೋಡಿರಿ Jack Cottrell, *Gender Roles and the Bible: Creation, the Fall, and Redemption* [Joplin, Mo.: College Press Publishing Co., 1994], 217–94.) [62]F. LaGard Smith,

*Men of Strength for Women of God* (Eugene, Oreg.: Harvest House Publishers, 1989), 203. [63]A. M. Toplady, “Rock of Ages,” *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [64]ಪ್ರಮುಖ ಅಂಶಗಳನ್ನು Warren W. Wiersbe, *The Bible Exposition Commentary: New Testament*, vol. 1 (Colorado Springs, Colo.: Victor, 2001), 701–4ದಿಂದ ಆಯ್ದುಕೊಳ್ಳಲಾಗಿದೆ.